

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 8 ಶನಿವಾರ 2025

ಸಂಪುಟ: 45 | ಸಂಚಿಕೆ: 291 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಐತಿಹಾಸಿಕ 'ಕೊಡವಾಮೆ ಬಾಳೋ' ಮಹಾಪಾದಯಾತ್ರೆ ಯಶಸ್ವಿ

● ಕುಟ್ಟದಿಂದ ಮಡಿಕೇರಿವರೆಗೆ ಸಾಗರೋಪಾದಿ ಸಾಗಿ ಬಂದ ಕೊಡವ ಬಾಂಧವರು ● ಕೊಡವ ಸಮುದಾಯದ ಮೇಲಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ದಾಳಿ ಖಂಡಿಸಿ ಆಯೋಜಿಸಿದ್ದ ಮಹತ್ವದ ಪಾದಯಾತ್ರೆ ● ಅಂತಿಮವಾಗಿ ಹಕ್ಕೊತ್ತಾಯಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮುಖಂಡರು





'ಕೊಡವಾಮೆ ಬಾಳೋ' ಪಾದಯಾತ್ರೆ ಮಡಿಕೇರಿ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಸಮಾವೇಶಗೊಂಡಿರುವುದು. ಬಲಚಿತ್ರದಲ್ಲಿ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ನೇತೃತ್ವದಲ್ಲಿ ಜಿಲ್ಲಾಧಿಕಾರಿ ವೆಂಕಟ್‌ರಾಜ್ ಅವರಿಗೆ ಹಕ್ಕೊತ್ತಾಯದ ಮನವಿ ಸಲ್ಲಿಸಲಾಯಿತು.

ಮಡಿಕೇರಿ, ಫೆ.7–ಪಶ್ಚಿಮಘಟ್ಟ ಸಾಲಿನ ಪುಟ್ಟ ಕೊಡಗಿನ ವಿಶಿಷ್ಟ ಸಂಸ್ಕೃತಿ, ಪರಂಪರೆಗಳ ಉಳಿವಿನೊಂದಿಗೆ ಸೂಕ್ಷ್ಮ ಕೊಡವ ಸಮುದಾಯದ ಮೇಲಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ದಾಳಿಯನ್ನು ಖಂಡಿಸಿ ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 'ಕೊಡವಾಮೆ ಬಾಳೋ' ಪಾದಯಾತ್ರೆ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಶುಕ್ರವಾರ ಕೊಡವರು ಮತ್ತು ಕೊಡವ ಭಾಷಿಕರ ಮಹಾಸಂಗಮದೊಂದಿಗೆ ಯಶಸ್ವಿ ಹಾಗೂ ಶಾಂತಿಯುತವಾಗಿ ಮುಕ್ತಾಯಗೊಂಡಿತು.

ಕಳೆದ ಭಾನುವಾರ (ಫೆ.2) ದಕ್ಷಿಣ ಕೊಡಗಿನ ಕುಟ್ಟದಿಂದ ಆರಂಭಗೊಂಡ ಪಾದಯಾತ್ರೆ ಸತತ 6 ದಿನಗಳ ಕಾಲ 84 ಕಿ.ಮೀ. ದೂರ ಕ್ರಮಿಸಿ ಶುಕ್ರವಾರ ಮಡಿಕೇರಿಯ ಜನರಲ್ ಕೆ.ಎಸ್.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದ ಬಳಿಯ ಕೊಡವ ಸಮಾಜದ ಮಂದ್‌ನಲ್ಲಿ ಸಮಾವೇಶಗೊಂಡಿತು. ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಸಮುದಾಯ ಬಾಂಧವರ ಸಮ್ಮುಖದಲ್ಲಿ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಜಿಲ್ಲಾಧಿಕಾರಿ ವೆಂಕಟ್‌ರಾಜ್ ಅವರಿಗೆ ಮನವಿಯನ್ನು ಸಲ್ಲಿಸಲಾಯಿತು. ಆಮೂಲಕ ಕೊಡವ ಸಮುದಾಯದ ಕೂಗನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ತಲುಪಿಸಲಾಯಿತು.

ಹರಿದು ಬಂದ ಜನಸಾಗರ: 'ಕೊಡವಾಮೆ ಬಾಳೋ' ಕೊನೆಯ ದಿನವಾದ ಶುಕ್ರವಾರ ಬೆಳಗ್ಗೆ 10.30ರಲ್ಲಿ ಕಗ್ಗೋಡ್ಲುವಿನ ಶ್ರೀ ಭಗವತಿ ದೇವಸ್ಥಾನದ ಬಳಿಯಿಂದ ಪಾದಯಾತ್ರೆ ಆರಂಭವಾಯಿತು. ಸಾಂಪ್ರದಾಯಿಕ ಉಡುಪಿನೊಂದಿಗೆ ನಾಡಿನ ಮೂಲೆ ಮೂಲೆಯಲ್ಲಿ ನೆಲೆಸಿರುವ ಕೊಡವ ಬಂಧು ಬಾಂಧವರು ನೆರೆದಿದ್ದರು. ಶ್ರೀ ಭಗವತಿ ದೇವಸ್ಥಾನ ಆವರಣದಲ್ಲಿ ಬಾಳೆ ಕಡಿಯುವ ಮೂಲಕ ಅತ್ಯಂತ ಶಿಸ್ತಿನಿಂದ ಪಾದಯಾತ್ರೆಯಲ್ಲಿ ಒಗ್ಗೂಡಿ ಹೆಜ್ಜೆ ಹಾಕುತ್ತ, ಮಧ್ಯಾಹ್ನ 12.15ಕ್ಕೆ ಜನರಲ್ ತಿಮ್ಮಯ್ಯ ವೃತ್ತಕ್ಕೆ ಆಗಮಿಸಿದರು.

ಸಾಂಪ್ರದಾಯಿಕ ವಾಲಗ, ದುಡಿಕೊಟ್ಟ್ ಪಾಟ್, ಕೊಂಬ್ ಕಹಳೆಯೊಂದಿಗೆ ತಳಿಯತಕ್ಕಿ ಬೊಳ್ಚ ಹಿಡಿದ ಕೊಡವ ಮಹಿಳೆಯರು ಮಡಿಕೇರಿ ಕೊಡವ ಸಮಾಜ ಮತ್ತು ಪೊಮ್ಮಕ್ಕಡ ಕೂಟದ ನೇತೃತ್ವದಲ್ಲಿ ಪಾದಯಾತ್ರೆಯನ್ನು ಪುಷ್ಪಾರ್ಚನೆ ಮಾಡುವ ಮೂಲಕ ಅಭೂತ ಪೂರ್ವವಾಗಿ ಸ್ವಾಗತಿಸಿದರು. ಪಾದಯಾತ್ರೆ ಕಗ್ಗೋಡ್ಲುವಿನಿಂದ ಮಡಿಕೇರಿಗೆ ಆಗಮಿಸುತ್ತಿದ್ದಂತೆ ಭಾಗಮಂಡಲ, ■ 6ನೇ ಪುಟಕ್ಕೆ

> ಕುಟ್ಟದಿಂದ ಮಡಿಕೇರಿವರೆಗೆ ಆರು ದಿನಗಳ ಕಾಲ ಯಾವುದೇ ಅಹಿತಕರ ಘಟನೆಗಳಾಗದಂತೆ ಶಾಂತಿಯುತವಾಗಿ ಪಾದಯಾತ್ರೆಯಲ್ಲಿ ಸಾಗಿಬಂದ ನಿಮಗೆ ಅಭಿನಂದನೆಗಳು. ನಿಮ್ಮ ಮನವಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗುವುದು. ತಮ್ಮ ಬೇಡಿಕೆಗಳ ಈಡೇರಿಕೆಗೆ ಜಿಲ್ಲಾಡಳಿತದ ಮಿತಿಯಲ್ಲಿಯೂ ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
>
> –ವೆಂಕಟ್‌ರಾಜ್, ಕೊಡಗು ಜಿಲ್ಲಾಧಿಕಾರಿ

ಕೊಡವ ಸಮುದಾಯದ ಹಕ್ಕೊತ್ತಾಯ

- ಸೂಕ್ಷ್ಮಾತಿ ಸೂಕ್ಷ್ಮ ಅಲ್ಪಸಂಖ್ಯಾತರಾದ ಕೊಡವ ಜನಾಂಗದ ಸಂವಿಧಾನಬದ್ಧವಾದ ಬೇಡಿಕೆಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಿ ಕೊಡವರ ನೆಲ–ಜಲ, ಸಂಸ್ಕೃತಿ, ಪರುಪಡೆ, ಧಾರ್ಮಿಕ ಆಚರಣೆಗಳು ಹಾಗೂ ಸಾಮಾಜಿಕ ಭದ್ರತೆಗೆ ಪೂರಕವಾಗಿ ಸೂಕ್ತ ಸಂವಿಧಾನಾತ್ಮಕವಾದ ಕ್ರಮ ಕೈಗೊಳ್ಳಬೇಕು.
- ಕೊಡವರು ಮತ್ತು ಜಮ್ಮಾ ಹಿಡುವಳಿದಾರರಿಗೆ ಇರುವ ಕೋವಿ ವಿನಾಯಿತಿಯ ವಿಶೇಷ ಹಕ್ಕನ್ನು ಅಬಾಧಿತವಾಗಿ ಮುಂದುವರೆಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.
- ಅಲ್ಪಸಂಖ್ಯಾತ ಕೊಡವ ಸಮುದಾಯದ ಮೇಲೆ ಪ್ರಬಲ ಜನಾಂಗಗಳು ರಾಜಕೀಯ ಪ್ರಭಾವವನ್ನು ಬಳಸಿ ನಡೆಸುತ್ತಿರುವ ದಬ್ಬಾಳಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.
- ಕೊಡವ ಸಂಸ್ಕೃತಿ ಸಂಪ್ರದಾಯದ ಉಡುಗೆ–ತೊಡುಗೆ, ಆಭರಣಗಳು, ಆಚರಣೆಗಳ ವಿಡಂಬನಾತ್ಮಕ ಬಳಕೆ ಹಾಗೂ ಇವುಗಳನ್ನು ಬಳಸಿ ಕೊಡವರ ಭಾವನೆಗಳ ನಿರಂತರವಾಗಿ ಪ್ರಚೋದಿಸುವ ಕೃತ್ಯದ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು.
- ಕೊಡವರು ಎಂಬ ಕಾರಣಕ್ಕೆ ಈ ದೇಶದ ಅಪ್ರತಿಮ ಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕೊಡಂದೇರ ಕಾರ್ಯಪ್ಪ ಹಾಗೂ ಜನರಲ್ ಕೊಡಂದೇರ ಎಸ್. ತಿಮ್ಮಯ್ಯ ಅವರನ್ನು ಅವಮಾನಿಸಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈ ವಿಷಯದಲ್ಲಿ ಸೂಕ್ತ ತನಿಖೆ ನಡೆಸಿ ಕೃತ್ಯ ನಡೆಸಿದ ಕಿಡಿಗೇಡಿಯ ವಿರುದ್ಧ ಕಠಿಣ ಕ್ರಮ ಕೈಗೊಂಡು, ಆತನನ್ನು ಗಡಿಪಾರು ಮಾಡಬೇಕು.
- ತಲಕಾವೇರಿಯಲ್ಲಿ ಕೊಡವರ ಭಾಗವಹಿಸುವಿಕೆಯ ಸ್ವಾತಂತ್ರ್ಯಕ್ಕೆ ನಿರಂತರವಾಗಿ ತೊಂದರೆ ಉಂಟು ಮಾಡುವ ಪ್ರಕ್ರಿಯೆಗಳಿಗೆ ಕಡಿವಾಣ ಹಾಕಿ, ಗೊಂದಲ ಸೃಷ್ಟಿಸುವ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಕೊಡವರಿಗೆ ಕೊಡವ ಸಂಸ್ಕೃತಿಗೆ ಕೊಡಗಿನ ಯಾವುದೇ ಧಾರ್ಮಿಕ ಕ್ಷೇತ್ರಗಳಲ್ಲಿ ಯಾವುದೇ ರೀತಿಯ ಅವಮಾನವಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ಸರ್ಕಾರಗಳು ಸೂಕ್ತ ಕ್ರಮ ಕೈಗೊಂಡು ಕೊಡವರಿಗೆ ಹಾಗೂ ಕೊಡವ ಸಂಸ್ಕೃತಿ ಮತ್ತು ಪಾರಂಪರಿಕ ಆಚರಣೆಗೆ ಈ ನೆಲದಲ್ಲಿ ಮುಕ್ತ ವಾತಾವರಣ ಕಲ್ಪಿಸಬೇಕು.
- ಕೊಡವರು ಹಾಗೂ ಕೊಡವ ಸಂಸ್ಕೃತಿಯನ್ನು ಆಚರಿಸುವ ಹಾಗೂ ಕೊಡವ ಭಾಷೆ ಮಾತನಾಡುವ ಇತರೆ ಮೂಲನಿವಾಸಿ ಸಮುದಾಯಗಳನ್ನು ನಿರ್ಬಂಧಿಸುವ ಉದ್ದೇಶದಿಂದಲೇ ಕಟ್ಟೆಮಾಡುವಿನ ಮಹಾದೇವರ ದೇವಸ್ಥಾನವನ್ನು ಮೃತ್ಯುಂಜಯ ದೇವಸ್ಥಾನವೆಂದು ನಾಮಕರಣ ಮಾಡುವುದರ ಮೂಲಕ ದೇವಸ್ಥಾನದ ಪಾವಿತ್ರ್ಯತೆಯನ್ನು ನಾಶ ಮಾಡಿ, ಉದ್ದೇಶಪೂರ್ವಕವಾಗಿ ಜನಾಂಗಗಳ ನಡುವೆ ವಿಷ ಬೀಜ ಬಿತ್ತಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಮೂಲ ಕಾರಣಕರ್ತರಾದ ದೇವಸ್ಥಾನದ ಅರ್ಚಕರ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಕಟ್ಟೆಮಾಡು ವಾರ್ಷಿಕೋತ್ಸವ ಸಂದರ್ಭದಲ್ಲಿ ಕೊಡವ ಸಾಂಸ್ಕೃತಿಕ ಉಡುಗೆಯನ್ನು ನಿರ್ಬಂಧಿಸಲು ಪ್ರಯತ್ನಿಸಿ, ಕೊಡವರ ಮೇಲೆ ಹಲ್ಲೆ ನಡೆಸಿದ ಕಿಡಿಗೇಡಿಗಳನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳದೇ ವಿಳಂಬ ಧೋರಣೆ ಅನುಸರಿಸುತ್ತಿರುವ ಜಿಲ್ಲಾಡಳಿತದ ವಿರುದ್ಧ ನಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಅವರನ್ನು ಬಂಧಿಸಬೇಕೆಂದು ಒತ್ತಾಯಿಸುತ್ತಿದ್ದೇವೆ.
- ಕಿಡಿಗೇಡಿಗಳನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳದ ಹೊರತು ಕೊಡವರಿಗಾದ ಅವಮಾನವನ್ನು ಗಂಭೀರವಾಗಿ ಪರಿಗಣಿಸಿ ಕೊಡವ ಸಮುದಾಯವು ಯಾವುದೇ ಸಂಧಾನ ಸಭೆ ಅಥವಾ ಶಾಂತಿ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವುದಿಲ್ಲ.

ಮುಡಾ ಅಕ್ರಮ ಹಗರಣ: ಸಿಬಿಐ ತನಿಖೆಗೆ ಕೋರಿದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

ಸಿದ್ದರಾಮಯ್ಯ ಸದ್ಯ ನಿರಾಳ



ಬೆಂಗಳೂರು, ಫೆ.7(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಮುಖ್ಯಮಂತ್ರಿ ಕುಟುಂಬ ಪಡೆದ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಇಂದು ವಜಾಗೊಳಿಸಿದೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರ ತನಿಖೆ ಅಸಮರ್ಪಕ ಎನ್ನುವುದಕ್ಕೆ ಕಾರಣಗಳಿಲ್ಲ. ಲೋಕಾಯುಕ್ತ ತನಿಖೆ ತಾರತಮ್ಯ ಪೂರಿತ ಎಂಬುದಕ್ಕೆ ಆಧಾರಗಳಿಲ್ಲ ಹಾಗೂ ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆಯಾಗಿದೆ ಎನ್ನುವ ಮೂಲಕ ಅರ್ಜಿಯನ್ನು ವಜಾ ಮಾಡಿದೆ.

ಹೈಕೋರ್ಟ್ ತೀರ್ಪಿನಿಂದ ತೀವ್ರ ಗೊಂದಲದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸದ್ಯ ನಿರಾಳತೆ ದೊರೆತಿದೆ. ಲೋಕಾಯುಕ್ತ ಪೊಲೀಸರು ನಡೆಸಿದ ತನಿಖಾ ■ 6ನೇ ಪುಟಕ್ಕೆ

ಪೋಕ್ಸೊ ಕೇಸ್: ಬಿಎಸ್‌ವೈಗೆ ನಿರೀಕ್ಷಣಾ ಜಾಮೀನು



ಧಾರವಾಡ, ಫೆ.7– ಪೋಕ್ಸೊ ಪ್ರಕರಣದಲ್ಲಿ ಮಾಜಿ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಧಾರವಾಡ ಹೈಕೋರ್ಟ್ ಪೀಠ ಶುಕ್ರವಾರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸುವಂತೆ ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ನ್ಯಾ.ಎಂ ನಾಗಪ್ರಸನ್ನ ಅವರು, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ನಿರೀಕ್ಷಣಾ ಜಾಮೀನು ನೀಡಿದ್ದಾರೆ. ಆದರೆ, ಈ ಪ್ರಕರಣ ರದ್ದು ಮಾಡಲು ನಿರಾಕರಿಸಿದೆ. ಪೋಕ್ಸೊ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲಾಗಿದೆ ಎಂದು ಪೀಠ ಆದೇಶಿಸಿದೆ. ಎಫ್‌ಐಆರ್, ಸಿಐಡಿ ತನಿಖೆ ನಡೆಸಿ ಸಲ್ಲಿಸಿರುವ ಆರೋಪ ಪಟ್ಟಿ ಹಾಗೂ ಅದನ್ನು ಆಧರಿಸಿ ವಿಚಾರಣಾ ನ್ಯಾಯಾಲಯ ■ 6ನೇ ಪುಟಕ್ಕೆ

ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್‌ಗೆ NABH ನರ್ಸಿಂಗ್ ಉತ್ಕೃಷ್ಟತೆ ಪ್ರಾಮಾಣೀಕರಣ



ಎನ್‌ಎಬಿಹೆಚ್ ನರ್ಸಿಂಗ್ ಎಕ್ಸಲೆನ್ಸ್ ಸರ್ಟಿಫಿಕೇಷನ್‌ನೊಂದಿಗೆ ಮದರ್ ಹುಡ್ ಹಾಸ್ಪಿಟಲ್ ಸಿಬ್ಬಂದಿ.

ಮೈಸೂರು, ಫೆ.7–ಮೈಸೂರಿನ ಮದರ್ ಹುಡ್ ಹಾಸ್ಪಿಟಲ್ ಪ್ರತಿಷ್ಠಿತ ಎನ್‌ಎಬಿಎಚ್ ನರ್ಸಿಂಗ್ ಎಕ್ಸಲೆನ್ಸ್ ಸರ್ಟಿಫಿಕೇಷನ್ ಸ್ವೀಕರಿಸುವುದರೊಂದಿಗೆ ಮತ್ತೊಂದು ಮೈಲುಗಲ್ಲನ್ನು ಸಾಧಿಸಿದೆ. ರೋಗಿಗಳಿಗೆ ಅಸಾಧಾರಣ ಮಟ್ಟದ ಆರೈಕೆ ನೀಡುವುದು ಅಲ್ಲದೆ, ಅತ್ಯುನ್ನತ ಮಟ್ಟದ ನರ್ಸಿಂಗ್ ಅಭ್ಯಾಸಗಳ ನಿರ್ವಹಣೆಗೆ ಆಸ್ಪತ್ರೆಯ ಬದ್ಧತೆಯನ್ನು ಈ ಮಾನ್ಯತೆ ಪುನರ್ ದೃಢೀಕರಿಸುತ್ತದೆ. ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್‌ಗೆ ಪ್ರಸ್ತುತ ವರ್ಷ ಗಮನಾರ್ಹ ಸಾಧನೆಯ ವರ್ಷವಾಗಿದ್ದು, ಈ ಘಟಕ ಎನ್‌ಎಬಿಎಚ್ ಅಂತಿಮ ಮಾನ್ಯತೆ ಪ್ರಕ್ರಿಯೆ ಅಲ್ಲದೆ, ನರ್ಸಿಂಗ್ ಉತ್ಕೃಷ್ಟತೆಯ ಪ್ರಾಮಾಣೀಕರಣಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಆರೋಗ್ಯ ಸೇವೆ ನೀಡುವಲ್ಲಿ ಗುಣಮಟ್ಟ, ಸುರಕ್ಷತೆ ಮತ್ತು ಉತ್ಕೃಷ್ಟತೆಗಳಿಗೆ ಆಸ್ಪತ್ರೆಯ ಬದ್ಧತೆಯನ್ನು ಈ ಎರಡು ಮಾನ್ಯತೆಗಳು ಎತ್ತಿ ತೋರುತ್ತವೆ ಅಲ್ಲದೆ, ಮೈಸೂರಿನ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಸೇವೆಯಲ್ಲಿ ವಿಶೇಷ ಮಾನದಂಡವನ್ನು ಆಸ್ಪತ್ರೆ ಸ್ಥಾಪಿಸಿರುವುದಕ್ಕೆ ಸಾಕ್ಷಿಯಾಗಿವೆ.

ಈ ಸಂದರ್ಭದಲ್ಲಿ ತಮ್ಮ ಹರ್ಷ ವ್ಯಕ್ತಪಡಿಸಿದ ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್‌ನ ಸೌಲಭ್ಯ ನಿರ್ದೇಶಕ ಸಂದೀಪ್ ಪಟೇಲ್ ಬಿ.ಜೆ. ಮಾತನಾಡಿ, ಎನ್‌ಎಬಿಎಚ್ ನರ್ಸಿಂಗ್ ಎಕ್ಸಲೆನ್ಸ್ ಸರ್ಟಿಫಿಕೇಷನ್ ಸ್ವೀಕರಿಸಲು ನಾವು ಬಹಳಷ್ಟು ಹೆಮ್ಮೆ ಪಡುತ್ತೇವೆ. ನಮ್ಮ ಸಂಪೂರ್ಣ ತಂಡದ ಪರಿಶ್ರಮ, ಸಮರ್ಪಣಾ ಮನೋಭಾವ ಮತ್ತು ಬದ್ಧತೆಗಳಿಗೆ ಈ ಮಾನ್ಯತೆ ಸಾಕ್ಷಿಯಾಗಿದೆ. ಸಹಾನುಭೂತಿಯ ಉನ್ನತ ಗುಣಮಟ್ಟದ ಆರೈಕೆಯನ್ನು ನೀಡುವತ್ತ ನಾವು ಯಾವಾಗಲೂ ಗಮನಹರಿಸಿದ್ದೇವೆ. ನಮ್ಮ ರೋಗಿಗಳಿಗೆ ಸುರಕ್ಷಿತ ಮತ್ತು ಪೋಷಣೆಯ ಪರಿಸರ ಸೃಷ್ಟಿಯಲ್ಲಿ ನಮ್ಮ ಪ್ರಯತ್ನವನ್ನು ಈ ಪ್ರಾಮಾಣೀಕರಣ ಒತ್ತಿ ಹೇಳುತ್ತವೆ ಎಂದರು. ಹೆಚ್ಚು ಉತ್ತಮವಾದ ನರ್ಸಿಂಗ್ ಮಟ್ಟಗಳು, ರೋಗಿಯ ಸುರಕ್ಷತೆಯ ಶಿಷ್ಟಾಚಾರಗಳು ಅಲ್ಲದೆ, ಸತತ ಸುಧಾರಣೆಯ ಸಂಸ್ಕೃತಿಗಳನ್ನು ಪ್ರದರ್ಶಿಸುವ ಆರೋಗ್ಯ ಸೇವಾ ಸಂಸ್ಥೆಗಳಿಗೆ ಎನ್‌ಎಬಿಎಚ್ ನರ್ಸಿಂಗ್ ಎಕ್ಸಲೆನ್ಸ್ ಸರ್ಟಿಫಿಕೇಷನ್ ಮಾನ್ಯತೆಯನ್ನು ನೀಡಿ ಗೌರವಿಸಲಾಗುತ್ತದೆ. ಮೈಸೂರಿನ ಮದರ್‌ಹುಡ್ ಹಾಸ್ಪಿಟಲ್ ಈ ಕಾರ್ಯದಲ್ಲಿ ಸತತವಾಗಿ ತೊಡಗಿಸಿಕೊಂಡಿದ್ದು, ವೈಯಕ್ತಿಕ ಆರೈಕೆ ಪೂರೈಸುವುದಲ್ಲದೆ, ಆರೋಗ್ಯ ಸೇವಾ ಪ್ರಯಾಣದಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಸಬಲೀಕರಿಸುತ್ತಿದೆ ಎಂದರು.

ವಿವಿಧ ಇಲಾಖೆ ಅಧಿಕಾರಿಗಳು, ಇತರೆ ಸಿಬ್ಬಂದಿಗೆ ಕ್ರೀಡಾಕೂಟ; ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಚಾಲನೆ

ಮೈಸೂರು, ಫೆ.7(ಎಂಟಿವೈ)– ಸದಾ ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜಿ.ಪಂ, ತಾ.ಪಂ, ಗ್ರಾ.ಪಂ ಸೇರಿದಂತೆ ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಇಂದು ನಾನಾ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರು.



ಕ್ರೀಡಾಕೂಟವನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಶುಕ್ರವಾರ ಉದ್ಘಾಟಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಒಳ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಹಾಗೂ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಪಾಲ್ಗೊಂಡು ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.

ಇದಕ್ಕೂ ಮುನ್ನ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಚಾಲನೆ ನೀಡಿ ಮಾತನಾಡಿ, ಕೆಲಸದ ಒತ್ತಡ ನಿವಾರಣೆಗೆ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದು ಅನಿವಾರ್ಯ. ಹೀಗೆ ಪಾಲ್ಗೊಳ್ಳುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಕರ್ತವ್ಯದ ಜೊತೆ ಜೊತೆಗೆ ಕ್ರೀಡಾಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಚೈತನ್ಯ ವೃದ್ಧಿಯಾಗುತ್ತದೆ. ಅಲ್ಲದೆ, ಹುರುಪಿನಿಂದ ಕರ್ತವ್ಯ ನಿರ್ವಹಿಸಬಹುದಾಗಿದೆ. ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವವರು ಸೋಲು ಗೆಲುವನ್ನು ಲೆಕ್ಕಿಸದೇ ಕ್ರೀಡಾ ಮನೋಭಾವದಿಂದ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಮಾನಸಿಕ ಒತ್ತಡದಿಂದ ಮುಕ್ತರಾಗಿ ಕಾರ್ಯನಿರ್ವಹಿಸಲು ಕ್ರೀಡೆ ಸಹಕಾರಿಯಾಗಲಿದೆ. ನೌಕರರು ನಿತ್ಯ ಒತ್ತಡದಲ್ಲಿ ಕೆಲಸ ಮಾಡುತ್ತಾರೆ. ಒತ್ತಡದಿಂದ ಮುಕ್ತರಾಗಿ ಕರ್ತವ್ಯ ನಿರ್ವಹಿಸಲು ಕ್ರೀಡೆ ಸ್ಫೂರ್ತಿ ನೀಡುತ್ತದೆ. ಈ ಕ್ರೀಡಾಕೂಟದಲ್ಲಿ ಎಲ್ಲರೂ ಕ್ರೀಡಾಸ್ಫೂರ್ತಿ ಮೆರೆಯಬೇಕು ಎಂದರು. ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ ಮಾತನಾಡಿ, ಸಿಬ್ಬಂದಿ ಕೇವಲ ಕರ್ತವ್ಯಕ್ಕೆ ಮಾತ್ರ ಸೀಮಿತಗೊಂಡು ಒತ್ತಡಕ್ಕೆ ಒಳಗಾಗಬಾರದು ಎಂಬ ಕಾರಣದಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ವರ್ಷಕ್ಕೊಮ್ಮೆ ನಡೆಯುವ ಕ್ರೀಡಾಕೂಟಕ್ಕೆ ಮಾತ್ರ ಸೀಮಿತವಾಗದೆ ಸಮಯ ಮಾಡಿಕೊಂಡು ಕ್ರೀಡೆಗಳಲ್ಲಿ ಪಾಲ್ಗೊಳ್ಳುವಂತೆ ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ ಮಾತನಾಡಿ, ಕ್ರೀಡೆಯಲ್ಲಿ ಸೋಲು–ಗೆಲುವು ಮುಖ್ಯ ಅಲ್ಲ. ಪಾಲ್ಗೊಳ್ಳುವುದು ಮುಖ್ಯ. ಕ್ರೀಡಾಕೂಟದ ಪ್ರತಿಕ್ಷಣ ಸಂಭ್ರಮಿಸಿ ಎಂದರು.

ಪಥ ಸಂಚಲನ: ಕ್ರೀಡಾಕೂಟಕ್ಕೆ ಚಾಲನೆ ದೊರೆತ ಬಳಿಕ ಮೈಸೂರು ಜಿಲ್ಲಾ ಪಂಚಾಯಿತಿ, ಮೈಸೂರು, ತಿ.ನರಸೀಪುರ, ಸರಗೂರು, ಪಿರಿಯಾಪಟ್ಟಣ, ನಂಜನಗೂಡು, ಹುಣಸೂರು,ಕೆ.ಆರ್.ನಗರ, ಹೆಚ್.ಡಿ.ಕೋಟೆ ವಿಭಾಗದ ಜಿ.ಪಂ, ತಾ.ಪಂ.,ಗ್ರಾ.ಪಂ. ನೌಕರರು ಸಂಚಲನ ನಡೆಸಿ, ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು. ಬಳಿಕ ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಈ ಸಂದರ್ಭದಲ್ಲಿ ಡಿಸಿಪಿ ಎಂ.ಮುತ್ತುರಾಜ್, ಜಿ.ಪಂ. ಉಪ ಕಾರ್ಯದರ್ಶಿ ಸವಿತಾ, ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಉಪಕಾರ್ಯದರ್ಶಿ ಕೃಷ್ಣರಾಜು, ಜಿಲ್ಲಾ ಪಿಡಿಓ ಸಂಘದ ಅಧ್ಯಕ್ಷ ರುಕ್ಮಾಂಗದ, ವಿಜಯಲಕ್ಷ್ಮಿ, ಲಾವಣ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಫೆ.21ರಂದು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು, ಫೆ. 7– ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ದತ್ತಿ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಹಯೋಗದಲ್ಲಿ ಫೆ.21ರ ಶುಕ್ರವಾರ ಮಧ್ಯಾಹ್ನ 2 ಗಂಟೆಯಿಂದ 3 ಗಂಟೆಯವರೆಗೆ 'ವಚನ ಸಾಹಿತ್ಯದಲ್ಲಿ ಆರ್ಥಿಕ ಚಿಂತನೆಗಳು' ವಿಷಯ ಕುರಿತು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಪ್ರಬಂಧ ಸ್ಪರ್ಧೆಯ ನಂತರ 3 ಗಂಟೆಗೆ ಪ್ರಾರಂಭವಾಗುವ ವೇದಿಕೆ ಕಾರ್ಯಕ್ರಮದಲ್ಲಿ ಬಹುಮಾನವನ್ನು ವಿತರಿಸಲಾಗುವುದು. ಮೈಸೂರು ಜಿಲ್ಲಾ ವ್ಯಾಪ್ತಿಯ ಪದವಿ ಕಾಲೇಜುಗಳಿಂದ ಆಸಕ್ತ ಪದವಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಒಂದು ಕಾಲೇಜಿನಿಂದ ಗರಿಷ್ಠ 4 ವಿದ್ಯಾರ್ಥಿಗಳು ಅವಕಾಶವಿರುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಸ್ಪರ್ಧಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗುವುದು. ಪ್ರಥಮ ಬಹುಮಾನ 1500 ರೂ., ದ್ವಿತೀಯ ಬಹುಮಾನ 1250 ರೂ.; ತೃತೀಯ ಬಹುಮಾನ 1000 ರೂ.; ಸಮಾಧಾನಕರ ಬಹುಮಾನಗಳು ಇಬ್ಬರಿಗೆ 500 ರೂ. ಇರುತ್ತದೆ. ಸ್ಪರ್ಧಿಗಳು ಮೊಬೈಲ್, ಇ–ಮೇಲ್ ಮೂಲಕ ನೋಂದಾಯಿಸಿಕೊಳ್ಳಬಹುದು. ಸ್ಪರ್ಧೆಯ ದಿನದಂದು ಸ್ಥಳದಲ್ಲಿಯೇ ನೋಂದಣಿ ಮಾಡಿಸಿಕೊಂಡೂ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ಮಾಹಿತಿಗಾಗಿ ಡಾ.ಬಿ.ಎಸ್. ಸುದೀಪ್, ಮೊ. 9242829947, ಡಾ. ಬಿ.ಪ್ರಭುಸ್ವಾಮಿ, ಮೊ. 8861654566 ಅವರನ್ನು ಸಂಪರ್ಕಿಸಬಹುದಾಗಿದೆ. ಇ–ಮೇಲ್ sudeepbevakal@gmail.com

ದೊಡ್ಡಗರಡಿ ವ್ಯಾಯಾಮ ಶಾಲೆ ಸಭಾಭವನ, ವಾಣಿಜ್ಯ ಕಟ್ಟಡಕ್ಕೆ ಶಂಕುಸ್ಥಾಪನೆ



ಮೈಸೂರಿನ ಅಶೋಕಪುರಂ ದೊಡ್ಡಗರಡಿ ಡಾ. ಬಿ.ಆರ್.ಅಂಬೇಡ್ಕರ್ ಸಮುದಾಯ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು. ದೊಡ್ಡಗರಡಿ ಸಂಘದ ಅಧ್ಯಕ್ಷ ಆರ್.ಸಿ.ಮಹೇಶ್, ಉಸ್ತಾದ್ ಫೈಲ್ವಾನ್ ಪುಟ್ಟಸ್ವಾಮಿ, ಖಲೀಫ್ ಪೈಲ್ವಾನ್, ಬಿ.ಸಿದ್ದಯ್ಯ ಆದಿಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಸಿದ್ದರಾಜು.ಪಿ (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜ್‌ಮೋಗ, ದೊಡ್ಡಗರಡಿ ಉಪಾಧ್ಯಕ್ಷ ಶಿವರುದ್ರ, ಕಾರ್ಯದರ್ಶಿ ದೊರೆಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ವೆಂಕಟಸ್ವಾಮಿ, ಗಂಗಾಧರ್, ಸಿದ್ದೇಶ್, ವಿಜಯಕುಮಾರ್, ಈಶ್ವರ್.ಸಿ, ಸುರೇಶ್‌ಕುಮಾರ್ ಹಾಗೂ ಅಶೋಕಪುರಂ ಸರ್ವಸದಸ್ಯರನ್ನು ಕಾಣಬಹುದು.

ಗೃಹೋಪಯೋಗಿ ಗ್ಯಾಸ್ ಸಿಲಿಂಡರ್‌ಗಳಿಂದ ವಾಣಿಜ್ಯ ಸಿಲಿಂಡರ್‌ಗಳಿಗೆ ಗ್ಯಾಸ್ ತುಂಬಿ ಅಕ್ರಮ ಬಳಕೆ

ಅಪಾಯ ತಡೆಯಲು ಗ್ರಾಹಕ ದಕ್ಷತಾ ಕಲ್ಯಾಣ ಫೌಂಡೇಷನ್ ಆಗ್ರಹ

ಮೈಸೂರು, ಫೆ.7(ಜಿಎ)–ಗೃಹೋಪಯೋಗಿ ಸಿಲಿಂಡರ್‌ಗಳಿಂದ ಅಕ್ರಮವಾಗಿ ವಾಣಿಜ್ಯ ಸಿಲಿಂಡರ್‌ಗಳಿಗೆ ಗ್ಯಾಸ್ ಫಿಲಿಂಗ್ ಮಾಡಿ ವಾಣಿಜ್ಯ ಉದ್ದೇಶಗಳಿಗೆ ಬಳಸಲಾಗುತ್ತಿದ್ದು, ಇದರಿಂದ ಅಪಾಯವಾಗುವ ಸಾಧ್ಯತೆಗಳಿವೆ ಎಂದು ಆಪಾದಿಸಿರುವ ಗ್ರಾಹಕ ದಕ್ಷತಾ ಕಲ್ಯಾಣ್ ಫೌಂಡೇಷನ್ ಈ ಅಕ್ರಮ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸರ್ಕಾರ ಇದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್‌ನ ಕರ್ನಾಟಕ ವಿಭಾಗದ ಮುಖ್ಯಸ್ಥ ಎಸ್. ಚೇತನ್‌ಕುಮಾರ್ ಮಾತನಾಡಿ, ಈ ನಿಟ್ಟಿನಲ್ಲಿ ತಮ್ಮ ಸಂಸ್ಥೆ ಗ್ರಾಹಕ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ ಎಂದರು.

ಗೃಹ ಬಳಕೆಯ ಸಿಲಿಂಡರ್ ಪಡೆಯುವಾಗ ಗ್ರಾಹಕರು ಅದು ಸರಿಯಾಗಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಗ್ರಾಹಕರು ಸೀಲ್ ಪರಿಶೀಲಿಸಬೇಕು, ಖಾಲಿ ಸಿಲಿಂಡರ್‌ಗಳು ಹಾಗೂ ಪೂರ್ಣ ಸಿಲಿಂಡರ್ ತೂಕ ಪರಿಶೀಲನೆ ಗ್ರಾಹಕರ ಹಕ್ಕು ಶಾಂಪೂ ಅಥವಾ ಸಾಬೂನು ನೀರನ್ನು ಸೇರಿಸುವ ಮೂಲಕ ಸಿಲಿಂಡರ್ ಸೋರಿಕೆ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂಬುದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ಆಟೋ ರಿಕ್ಷಾ, ಕಾರು ಮತ್ತಿತರ ವಾಹನಗಳಲ್ಲಿ, ವಾಣಿಜ್ಯ ಉದ್ದೇಶಕ್ಕೆ ಅಕ್ರಮವಾಗಿ ಗೃಹ ಬಳಕೆ ಸಿಲಿಂಡರ್ ಬಳಕೆ ಮಾಡುವುದು ಕಂಡು ಬಂದಲ್ಲಿ ಪೊಲೀಸರಿಗೆ ದೂರು ನೀಡಬೇಕೆಂದು ಮನವಿ ಮಾಡಿದರು. ಈಗಾಗಲೇ ನಮ್ಮ ತಂಡ ಅಕ್ರಮವಾಗಿ ಗ್ಯಾಸ್ ಫಿಲಿಂಗ್ ಮಾಡುತ್ತಿರುವ ಅಡ್ಡೆಗಳ ಮೇಲೆ ದಾಳಿ ಮಾಡಿ ಪೊಲೀಸರ ಗಮನಕ್ಕೆ ತರಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಶಾಂತ್ ಜಾಮಗಡೆ, ಅರುಣ್ ಮಾನಗಾಂವೆ, ಮುತ್ತುರಾಜ್ ಉಪಸ್ಥಿತರಿದ್ದರು.

ಯೋಗ ಪ್ರತಿಭಾ ಪ್ರಶಸ್ತಿ



ಬೆಂಗಳೂರಿನ ಶಿವಜ್ಯೋತಿ ಯೋಗ ಕೇಂದ್ರದ ವತಿಯಿಂದ ಜನವರಿಯಲ್ಲಿ ನಡೆದ ಯೋಗೋತ್ಸವದಲ್ಲಿ ಮೈಸೂರಿನ ವಿಜಯನಗರದ ಅನಂತಗೀತ ವಿದ್ಯಾಲಯದ 4 ನೇ ತರಗತಿ ವಿದ್ಯಾರ್ಥಿ ಶ್ರೀ ಲಲಿಷ್ ಭಾಗವಹಿಸಿ ಯೋಗ ಪ್ರತಿಭಾ ಪ್ರಶಸ್ತಿ– 2025 ಪಡೆದಿದ್ದಾರೆ. ವಿಜೇತ ವಿದ್ಯಾರ್ಥಿಯನ್ನು ಶಾಲೆಯ ಮುಖ್ಯ ಶಿಕ್ಷಕ ಲೋಕೇಶ್ ಹೆಚ್ ಪಿ, ದೈಹಿಕ ಶಿಕ್ಷಕ ಜಗದೀಶ್, ಶಿಕ್ಷಕಿ ಶಿಲ್ಪ ಶ್ರೀ ಹಾಗೂ ವಿದ್ಯಾರ್ಥಿಗಳು, ಶಿಕ್ಷಕರು ಅಭಿನಂದಿಸಿದ್ದಾರೆ.

ಮಾಜಿ ರಾಜ್ಯಪಾಲ ದಿವಂಗತ ರಾಚಯ್ಯನವರ ಪತ್ನಿ ಗೌರಮ್ಮ ನಿಧನ




ಚಾಮರಾಜನಗರ, ಫೆ.7–ಕೇರಳದ ಮಾಜಿ ರಾಜ್ಯಪಾಲ ದಿ.ಬಿ.ರಾಚಯ್ಯ ಅವರ ಪತ್ನಿ ಹಾಗೂ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರ ತಾಯಿ ಗೌರಮ್ಮ ಶುಕ್ರವಾರ ನಿಧನರಾದರು.

ಮೃತರಿಗೆ 90 ವರ್ಷವಾಗಿದ್ದು, ಅವರು ಶ್ವಾಸಕೋಶದ ತೊಂದರೆಯಿಂದ ಬಳಲುತ್ತಿದ್ದರು. ಕೆಲವು ದಿನಗಳ ಹಿಂದೆಯಷ್ಟೇ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಶುಕ್ರವಾರ ಬೆಳಗ್ಗೆ 9 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ನಿಧನರಾದರು. ಮೃತರು ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು, ಅಳಿಯ ನಿವೃತ್ತ ಪೊಲೀಸ್ ಅಧಿಕಾರಿ ಮರಿಸ್ವಾಮಿ ಸೇರಿದಂತೆ 7 ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇತ್ತೀಚೆಗೆ ತಾಲೂಕಿನ ಆಲೂರಿನಲ್ಲಿ ಬಿ.ರಾಚಯ್ಯ ಅವರ ಸ್ಮಾರಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ಆ ವೇಳೆ ಸುದೀರ್ಘವಾಗಿ ಹಿಂದಿನ ನೆನಪು ಮೆಲುಕು ಹಾಕಿದ ಸಿದ್ದರಾಮಯ್ಯ, ಬಿ.ರಾಚಯ್ಯ ಅವರು ನನ್ನ ರಾಜಕೀಯ ಗುರು ಎಂದು ನೆನೆದಿದ್ದರು. ವೇದಿಕೆಯಲ್ಲೇ ಇದ್ದ ಗೌರಮ್ಮ ಅವರ ಕೈರುಚಿಯನ್ನು ಸ್ಮರಿಸಿದ್ದರು.

ಶನಿವಾರ ಅಂತ್ಯಸಂಸ್ಕಾರ: ಮೈಸೂರಿನ ಸರಸ್ವತಿಪುರಂನ 9ನೇ ಮುಖ್ಯ ರಸ್ತೆಯಲ್ಲಿರುವ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರ ನಿವಾಸದಲ್ಲಿ ಶುಕ್ರವಾರ ಮಧ್ಯಾಹ್ನ 3 ಗಂಟೆವರೆಗೆ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು. ನಂತರ ಅವರ ಸ್ವಂತ ಗ್ರಾಮವಾದ ಚಾಮರಾಜನಗರ ತಾಲೂಕಿನ ಆಲೂರಿಗೆ ತರಲಾಗಿದ್ದು, ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಶನಿವಾರ ಮಧ್ಯಾಹ್ನ ಅಂತ್ಯಸಂಸ್ಕಾರ ನೆರವೇರಲಿದೆ.

ಸಂತಾಪ: ಮೃತರ ನಿಧನಕ್ಕೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಹೆಚ್.ಎಂ.ಗಣೇಶ ಪ್ರಸಾದ್, ಗ್ಯಾರಂಟಿ ಯೋಜನೆ ಅನುಷ್ಠಾನ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಎಸ್.ದತ್ತೇಶಕುಮಾರ್ ಇತರರು ಸಂತಾಪ ಸೂಚಿಸಿದ್ದಾರೆ.

ಶ್ರೀಲಕ್ಷ್ಮಿ



ಮೈಸೂರು: ಮೈಸೂರು ವಿದ್ಯಾರಣ್ಯಪುರಂ ನಿವಾಸಿ ಹಾಗೂ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ನಿವೃತ್ತ ಲೆಕ್ಕಾಧಿಕಾರಿ ನಾಗಶಯನ ಅವರ ಪುತ್ರಿ ಶ್ರೀಲಕ್ಷ್ಮಿ(26) ಅವರು ದೀರ್ಘ ಕಾಲದ ಅಸ್ವಸ್ಥತೆ ನಂತರ ನಿನ್ನೆ (ಗುರುವಾರ) ನಿಧನರಾದರು. ಅವರು ತಂದೆ ನಾಗಶಯನ ಸೇರಿದಂತೆ ತಾಯಿ ರಾಧಾ, ಸಹೋದರ ಶ್ರೀಹರಿ, ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.02.2025 ಶನಿವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** 2010ರ ಬ್ಯಾಚ್ ವಿದ್ಯಾರ್ಥಿಗಳಿಂದ ಸ್ನೇಹ ಸಮ್ಮಿಲನ–3, ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಬೆಳಗ್ಗೆ 10 ರಿಂದ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ :** ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಡಾ. ಅಶೋಕ್ ಸಂಗನಲ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಅಸಿಸ್ಟೆಂಟ್ ಸ್ಟೇಟ್ ಕಮೀಷನರ್ ಬಿ.ಕೆ. ಬಸವರಾಜ, ಡಿಸ್ಟ್ರಿಕ್ಟ್ ಚೀಫ್ ಕಮೀಷನರ್ ಪಿ. ವಿಶ್ವನಾಥ್, ಡಾ. ಕೆ.ಬಿ. ಗುರುಮೂರ್ತಿ, ಶ್ರೀಶೈಲ ರಾಮಣ್ಣವರ್, ಅಬ್ದುಲ್ ಜಮೀಲ್, ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಮೆಕ್ಯಾನಿಕಲ್ ಬ್ಲಾಕ್ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ದೇವರಾಜ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜು :** ಸಮಾರೋಪ ಸಮಾರಂಭ ಹಾಗೂ ವಾರ್ಷಿಕ ಸಂಚಿಕೆ ಬಿಡುಗಡೆ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ವಾರ್ಷಿಕ ಸಂಚಿಕೆ ಬಿಡುಗಡೆ: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಉಪಸ್ಥಿತರು : ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ. ನಾಗಭೂಷಣ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ.ಎಂ.ಜಿ. ರಮಾನಂದ, ಸ್ಥಳ: ರಾಷ್ಟ್ರಕವಿ ಕುವೆಂಪು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ :** ಇಲ್ಯೂಮಿನೇಟ್ ಸೆಲೆಬ್ರೇಟಿಂಗ್ ಇಂಜಿನಿಯರಿಂಗ್ ಎಕ್ಸ್‌ಲೆನ್ಸ್, ಉಪಸ್ಥಿತರು : ಆಧಾರ್ ಸ್ಥಾಪಕರು ಮತ್ತು ಸಿಟಿಓ ಶ್ರೀಕಾಂತ್ ನಡಾಮುನಿ, ಬುಜ್‌ಆನ್ ಅರ್ಥ್ ಸಿಇಓ ಗಾಯತ್ರಿ ಚೌಹಾನ್, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ, ಮುಕ್ತ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಹುಲ್ಲಹಳ್ಳಿ, ನಂಜನಗೂಡು ತಾಲೂಕು ಶರಣ ಸಾಹಿತ್ಯ ಪರಿಷತ್ತು :** ದತ್ತಿ ಉಪನ್ಯಾಸ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಸಿಂಧುವಳ್ಳಿ ಕೆಂಪಣ್ಣ, ಕಾಲೇಜು ಪ್ರಾಂಶುಪಾಲ ಎಂ.ಪಿ. ರೇವಣ್ಣ, ಸ್ಥಳ: ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಹುಲ್ಲಹಳ್ಳಿ, ಬೆಳಗ್ಗೆ 10.30ಕ್ಕೆ.

■ **ಜನ ಹಿತ ಸಭಾ :** ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳು, ಕೃತಿ ಬಿಡುಗಡೆ, ವಿಶೇಷ ಉಪನ್ಯಾಸ, ಆದರ್ಶ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಮಿಷನ್ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಕೃತಿ ಬಿಡುಗಡೆ : ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ಉಪಸ್ಥಿತರು : ಶ್ರೀಮತಿ ತಾರಿಣಿ ಚಿದಾನಂದಗೌಡ, ಡಾ. ವಿಜಯಲಕ್ಷ್ಮಿ ಮುರಳೀಧರ್, ಡಾ. ನೆಲ್ಲಿಕಟ್ಟೆ ಎಸ್. ಸಿದ್ದೇಶ್, ಪ್ರೊ. ಬಿ.ಎನ್. ಮಂಜುನಾಥಯ್ಯ, ಪ್ರೊ. ಹೆಚ್.ಎಸ್. ಉಮೇಶ್, ಅಧ್ಯಕ್ಷತೆ : ಜನ ಹಿತ ಸಭಾ ಅಧ್ಯಕ್ಷ ಡಾ. ಮೋಹನ್ ಕುಮಾರಿ, ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ವಿವೇಕ ವಿದ್ಯಾಲಯ :** ವಾರ್ಷಿಕೋತ್ಸವ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಎಸ್. ಕೇಶವಪ್ರಸಾದ್, ಸಂಚಿಕೆ ಬಿಡುಗಡೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಭಾಷಣ : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಪ್ರಕಾಶ್, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಡಾ. ಕೆ.ಎನ್. ಮೋಹನ, ಹಿರಿಯ ಪತ್ರಕರ್ತ ಕೆ. ನರಸಿಂಹಮೂರ್ತಿ, ನಿವೃತ್ತ ಪ್ರಾಂಶುಪಾಲ ಆರ್. ಗೋವಿಂದ, ಅಧ್ಯಕ್ಷತೆ : ಕುರುಹಿನ ಶೆಟ್ಟಿ ವಿಚಾರ ವೇದಿಕೆ ಅಧ್ಯಕ್ಷ ಕೆ.ಎಚ್. ಸಂಜೀವ ಶೆಟ್ಟಿ, ಸ್ಥಳ: ಶಾಲಾ ಆವರಣ, ಆಲನಹಳ್ಳಿ ಬಡಾವಣೆ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ನಖ ಶಿಖಾಂತ' ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ. ಸುರಭಿ, ಜಯಂತಿ. ವಿ. ಭಟ್, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ, ಟಿ. ನರಸೀಪುರ ತಾಲ್ಲೂಕು ಹೆಮ್ಮಿಗೆ ಗ್ರಾಮದ ಮುಖವೀಣೆ ಕಲಾವಿದ ನಾರಾಯಣಸ್ವಾಮಿ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ಆಯುಷ್ ವಾಣಿ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ 'ಅಮೃತ ವಿದ್ಯಾಲಯಂ' ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಚೋಳರ ಕಾಲದ ರಾಜದಂಡ', ರಚನೆ–ಅಪರಂಜಿ ಶಿವು, ನಿರ್ಮಾಣ–ಉಮೇಶ್. ಎಸ್. ಎಸ್., 4.30ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಹಲ್ಲರೆ ಗ್ರಾಮದ ಕೃಷಿಕ ದಂಪತಿ ಹೆಚ್. ಎಸ್. ಕೆಂಡಗಣ್ಣಸ್ವಾಮಿ ಮತ್ತು ಎಸ್.ಜಿ. ಚೈತ್ರಾ, ಪ್ರಸ್ತುತಿ: ಎನ್.ಕೇಶವಮೂರ್ತಿ, 8.15 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂ. ಸಂಜಯ್ ಬಂಧೋಪಾಧ್ಯಾಯ್– ಸಿತಾರ್ ವಾದನ

■ **ಕಲಾಸುರುಚಿ ರಂಗ ಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ. ಆರ್. ನಾಗಭೂಷಣ್, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ನೃತ್ಯ ವರ್ಣಕಲಾ ಸೌರಭ :** ಭರತನಾಟ್ಯ ಪ್ರದರ್ಶನ, ಉದ್ಘಾಟನೆ : ಕಲಾ ಶರಧಿಯ ವಿದುಷಿ ದಿಶಾ ಶರತ್, ವಿಶೇಷ ಆಹ್ವಾನಿತರು : ನಿವೃತ್ತ ಡಿಸಿಪಿ ಬಸವರಾಜ ಮಾಲಗತ್ತಿ, ಉಪಸ್ಥಿತರು : ನೃತ್ಯ ವರ್ಣಕಲಾ ಸೌರಭ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಕಲ್ಪಿತ ಪ್ರಶಾಂತ್, ಸಂಜೆ 4.30ಕ್ಕೆ ವೇಧಾ ಘೋಷ ಮತ್ತು ನಟರಾಜ ಪೂಜಾ, ಸಂಜೆ 5ಕ್ಕೆ ಸಂಗೀತ ವೃಕ್ಷಾವಳಿ, ಸಂಜೆ 5.30ಕ್ಕೆ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ, ಸಂಜೆ 6.30ಕ್ಕೆ ನರ್ತನ ಸಂಧ್ಯಾ, ನಿರ್ದೇಶನ : ಶ್ರೀಮತಿ ಕಲ್ಪಿತ ಪ್ರಶಾಂತ್, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ರಂಗಕರ್ಮಿ ಡಾ. ರಾಜಶೇಖರ ಕದಂಬ ಅವರ ಪರಿಚಯಾತ್ಮಕ ಕಿರುಹೊತ್ತಿಗೆ 'ರಂಗಾಭರಣ ಕದಂಬ' ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕೃತಿ ಕುರಿತು : ಪ್ರಸಾರಾಂಗದ ನಿವೃತ್ತ ನಿರ್ದೇಶಕ ಡಾ. ಸಿ. ನಾಗಣ್ಣ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ರಂಗಕರ್ಮಿ ಡಾ. ರಾಜಶೇಖರ ಕದಂಬ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಆರಾಧನೆ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಪೃಥ್ವಿ ಭಾಸ್ಕರ್ ಅವರಿಂದ ಗಾಯನ, ಸಹಕಾರ : ವಿದುಷಿ ಸಿಂಧು ಸುಚೇತನ್, ವಿದ್ವಾನ್ ಜಿ.ಎಸ್. ರಾಮಾನುಜನ್, ವಿದ್ವಾನ್ ವಿ.ಎಸ್. ರಮೇಶ್, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಸ್ಪಿರಿಚ್ಯುಲೈಸಿಂಗ್ ಎವೆರಿಡೇ ಲೈಫ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 59ನೇ ವರ್ಷದ ತೈಪೂಸಂ ಮಹೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 6.30 ರಿಂದ ಅಂತರರಾಷ್ಟ್ರೀಯ ಕಲಾವಿದ ಆಪ್ತಮಿತ್ರ ಖ್ಯಾತಿಯ ವಿದ್ವಾನ್ ಶ್ರೀಧರ್ ಜೈನ್ ಮತ್ತು ತಂಡದವರಿಂದ ನೃತ್ಯ ವೈಭವ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಮೈಸೂರಿನ ಕಲಾಸುರುಚಿ, ಕುತೂಹಲಿ – ಕನ್ನಡ ಮತ್ತು ಕಾಸ್ಮಾಸ್ ಸಂಸ್ಥೆ :** ವಿಜ್ಞಾನ ಸಂಜೆ ಕಾರ್ಯಕ್ರಮ, ಬೆಂಗಳೂರಿನ ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ಪ್ರೊ. ಅನ್ನಪೂರ್ಣಿ ಸುಬ್ರಹ್ಮಣ್ಯಂ ಅವರಿಂದ 'ತಾರೆಗಳ ಜೊತೆ ಹಾಡು' ವಿಷಯ ಕುರಿತು ಇಂಗ್ಲಿಷ್‌ನಲ್ಲಿ ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30 ರಿಂದ.

ಮೈಸೂರು ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ತರಬೇತಿ ಪಡೆಯುತ್ತಿದ್ದ ನೂರಾರು ಟ್ರೈನಿಗಳು ವಜಾ

ಮೈಸೂರು, ಫೆ.7– ಮೈಸೂರು ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ತರಬೇತಿ ಅವಧಿಯಲ್ಲಿದ್ದ ನೂರಾರು ಉದ್ಯೋಗಿ(ಟ್ರೈನಿ)ಗಳನ್ನು ಕೆಲಸದಿಂದ ವಜಾಗೊಳಿಸಲಾಗಿದೆ. ಇನ್ಫೋಸಿಸ್ ಕಂಪನಿ ಉದ್ಯೋಗಿಗಳ ವಾರ್ಷಿಕ ವೇತನ ಹೆಚ್ಚಳ ಘೋಷಣೆ ಬೆನ್ನಲ್ಲೆ ನೂರಾರು ಟ್ರೈನಿಗಳನ್ನು ಕೆಲಸದಿಂದ ವಜಾಗೊಳಿಸಿರುವುದು ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ಕಂಪನಿ, ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ಕಳೆದ ವರ್ಷ ನೇಮಿಸಿಕೊಳ್ಳಲಾಗಿರುವ ಇವರಿಗೆ ಮೈಸೂರು ಕ್ಯಾಂಪಸ್‌ನಲ್ಲಿ ಪ್ರಾಥಮಿಕ ತರಬೇತಿ ನೀಡಲಾಗಿದೆ. ಟ್ರೈನಿಗಳು ತರಬೇತಿ ಬಳಿಕ ಆಂತರಿಕ ಮೌಲ್ಯಮಾಪನದಲ್ಲಿ ಉತ್ತೀರ್ಣರಾಗಲು ಮೂರು ಬಾರಿ ಅವಕಾಶ ನೀಡಲಾಗುತ್ತದೆ. ಆದರೆ ಇವರು ಅನುತ್ತೀರ್ಣರಾಗಿದ್ದರಿಂದ ಒಪ್ಪಂದದ ಪ್ರಕಾರ ಕಂಪನಿಯಲ್ಲಿ ಮುಂದುವರೆಯಲು ಅವಕಾಶ ಇರುವುದಿಲ್ಲ. ಈ ನೇಮಕಾತಿ ಪದ್ಧತಿಯು ಎರಡು ದಶಕದಿಂದಲೂ ಚಾಲ್ತಿಯಲ್ಲಿದೆ ಎಂದು ತಿಳಿಸಿದೆ. ಕಳೆದ 2024ರ ಅಕ್ಟೋಬರ್‌ನಲ್ಲಿ ನೇಮಕಗೊಂಡಿದ್ದ ನೂರಾರು ಮಂದಿಯನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಅವರನ್ನು ಒತ್ತಾಯಪೂರ್ವಕವಾಗಿ ಬೌನ್ಸರ್ಸ್ ಹಾಗೂ ಸೆಕ್ಯೂರಿಟಿ ಗಾರ್ಡ್ ಮೂಲಕ ಕ್ಯಾಂಪಸ್‌ನಿಂದ ಹೊರದಬ್ಬಲಾಗಿದೆ ಎಂದು ವಜಾಗೊಂಡಿರುವವರು ಆರೋಪಿಸಿದ್ದಾರೆ. ಕಂಪನಿಯ ಈ ನಡೆಯಿಂದ ಟ್ರೈನಿಗಳಿಗೆ ತೊಂದರೆ ಆಗಿದೆ. ಈ ಕುರಿತು ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸುವಂತೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯಕ್ಕೆ ಪತ್ರ ಬರೆಯಲಾಗುವುದು ಎಂದು ಐಟಿ ಉದ್ಯೋಗಿಗಳ ಸಂಘಟನೆಯಾದ ಎನ್‌ಐಟಿಇಎಸ್ ತಿಳಿಸಿದೆ.

ಫರ್ನಿಚರ್ ಅಂಗಡಿಗೆ ಆಕಸ್ಮಿಕ ಬೆಂಕಿ

ಮೈಸೂರು, ಫೆ.7(ಎಸ್‌ಪಿಎನ್)–ಫರ್ನಿಚರ್ ಅಂಗಡಿಗೆ ಆಕಸ್ಮಿಕವಾಗಿ ಬೆಂಕಿಬಿದ್ದು ಸಂಪೂರ್ಣ ಸುಟ್ಟು ಕರಕಲಾಗಿರುವ ಘಟನೆ ಮಂಡಿ ಮೊಹಲ್ಲಾದ ಮಿಷನ್ ಆಸ್ಪತ್ರೆ ರಸ್ತೆಯ ಖಾಜಿ ಹೋಟೆಲ್ ಪಕ್ಕ ಶುಕ್ರವಾರ ಜರುಗಿದೆ. ಮಾಲೀಕ ಫಯಾಜ್ ಎಂಬುವವರ ಫರ್ನಿಚರ್ ಅಂಗಡಿಗೆ ಶುಕ್ರವಾರ ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ನೋಡನೋಡುತ್ತಿದ್ದಂತೆ ಅಂಗಡಿ ಸಂಪೂರ್ಣ ಭಸ್ಮವಾಗಿದೆ.

ಸಾರ್ವಜನಿಕರ ಗಮನಕ್ಕೆ

ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಭೈರಾಪುರ, ವಿವೇಕಾನಂದ ನಗರದಲ್ಲಿರುವ ಜಂಜರ್ ನಂ. 590 ಮತ್ತು ಹೊಸ ಜಂಜರ್ ನಂ. 127/ಬಿ ರಲ್ಲಿರುವ ಅಳತೆ 510 x 155 ಅಡಿಗಳುಳ್ಳ ಸ್ವತ್ತಿನಲ್ಲಿ ವೀರಭದ್ರೇಶ್ವರ ರೈಸ್ ಮಿಲ್ ಮತ್ತು ಅನ್ನಪೂರ್ಣೇಶ್ವರಿ ಎಂಬ ಬ್ರಿಕ್ಸ್ ಇಂಡಸ್ಟ್ರೀಸ್ ಎಂಬ ಸ್ವತ್ತುಗಳಿದ್ದು, ಸದರಿ ಸ್ವತ್ತುಗಳ ಬಗ್ಗೆ ವಿಭಾಗಕ್ಕೆ ತಿ.ನರಸೀಪುರ ತಾಲ್ಲೂಕು, ಭೈರಾಪುರ, ವಿವೇಕಾನಂದ ನಗರದಲ್ಲಿ ವಾಸವಾಗಿರುವ ಲೇಟ್ ಹೆಚ್.ಎಂ.ನಾಗೇಶ ರವರ ಎರಡನೇ ಮಗ ಎನ್.ಪ್ರದೀಪ್ ರವರು, ಶ್ರೀ. ಹೆಚ್.ಎಂ.ನಾಗೇಶ (ಪೌತಿ) ಮತ್ತು ಇವರ ಹಿರಿಯ ಮಗ ಶ್ರೀ. ಹೆಚ್.ಎನ್.ವಿಜಯಶಂಕರ್ ರವರುಗಳ ವಿರುದ್ಧ ತಿ.ನರಸೀಪುರದ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 52/2020 ನೇ ನಂಬರ್‌ನಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯು ವಿಚಾರಣೆಯ ಹಂತದಲ್ಲಿರುವುದು ಸರಿಯಷ್ಟೇ.

ಸದರಿ ಮೇಲ್ಕಂಡ ದಾವೆಯು ಅಂತಿಮ ತೀರ್ಮಾನವಾಗುವವರೆಗೂ ಈ ಮೇಲ್ಕಂಡ ಸ್ವತ್ತುಗಳು ಯಾವುದೇ ರೀತಿಯ ಪರಭಾರೆಗೆ ಒಳಪಡುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರವರುಗಳಿಗೆ ತಿಳಿಯಪಡಿಸಿರುತ್ತದೆ.

ಸಹಿ/–ಬಿ.ರಾಜು, ಬಿ.ಎಸ್.ಸಿ., ಎಲ್.ಎಲ್.ಬಿ.,
ವಕೀಲರು, ನಂ. 132, ನಿಲಸೋಗೆ ಗ್ರಾಮ
ಮತ್ತು ಅಂಚೆ, ಮೂಗೂರು ಹೋಬಳಿ, ತಿ.ನರಸೀಪುರ
ತಾಲ್ಲೂಕು. ಮೊಬೈಲ್: 9844033907

ದಿನಾಂಕ: 07-02-2025
ಸ್ಥಳ: ತಿ.ನರಸೀಪುರ.

Central Sericultural Research & Training Institute

[Central Silk Board -Min. of Textiles - Govt. of India]
Manandavadi Road, Srirampura Mysore - 570 008

No. CS & RTI/MBG/PA/JULY/2024-25 Dated: 07/02/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 24/02/2025 at Central Sericultural Research and Training Institute, Srirampura, Mysuru - 570 008 as shown below:

'A' 01 (One) **Project Assistant (PA)** purely on contract basis under CSB approved Project "Final yield evaluation of mulberry genotypes for leaf yield under limited irrigation and fertilizer conditions" (PIE01036 SI) purely on contract basis for a period Up to **December 2028** or completion of project whichever is earlier under CSB Terms and Conditions.

Qualifications for Project Assistant (PA): B.Sc in Sericulture/Agriculture/Botany/Bio-chemistry/Chemistry/ Biotechnology/ Life Sciences with minimum 55% marks (50% for SC/ST candidates). Walk-in-Interview will be held on **24/02/2025,** time 10:00 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, **https://csb.gov.in/** for details.

Sd/- Director
(CSR & TI, Mysore

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಮೆ॥ ಕುಂದುರೇಶ್ವರ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್**. ನೊಂದಾಯಿತ ಕಚೇರಿ ಸಂಖ್ಯೆ 1038/4, ಚಿನ್ಮಯಿ ನಿಲಯ, ವಿವೇಕಾನಂದ ರಸ್ತೆ, ಹಿನಕಲ್, ವಿಜಯನಗರ 2ನೇ ಹಂತ, ಮೈಸೂರು. ಇದರ ಪರವಾಗಿ, ನಿರ್ದೇಶಕರಾದ, ಮೈಸೂರು ಜಿಲ್ಲೆ, ಕೆ. ಆರ್. ನಗರ, ವಾರ್ಡ್ ನಂ.3, ಮನೆ ನಂ. 46ರಲ್ಲಿ ವಾಸವಾಗಿರುವ ಶ್ರೀ. ಜಯಣ್ಣ ಬಿ ಅವರ ಮಗಳು ಮಂದಾರ ಬಿ ಜೆ.ಇವರು ತುಮಕೂರು ಜಿಲ್ಲೆ, ತಿಪಟೂರು, ನಳಂದ ಸ್ಕೂಲ್ ಹತ್ತಿರ, ರೈಲ್ವೇ ಸ್ಟೇಷನ್, ಮನೆ ನಂ. 540ರಲ್ಲಿ ವಾಸವಾಗಿರುವ ಶ್ರೀ. ಕೆ. ಜಯರಾಮ್ ಅವರ ಮಗ ಶ್ರೀ. ಕೆ. ಜೆ. ರಾಜೇಶ್ ಮತ್ತು ತುಮಕೂರು ಜಿಲ್ಲೆ, ತಿಪಟೂರು ಶಾರದನಗರ ಬೈಪ್ ಆಫೀಸ್ ರಸ್ತೆ, "ಬೆನಕ ನಿಲಯ" ಎಂಬ ನಾಮಂಕಿತ ಮನೆಯಲ್ಲಿ ವಾಸವಾಗಿರುವ ಶ್ರೀ. ಎಸ್. ಮಂಜಣ್ಣ ಅವರ ಮಗನಾದ ಶ್ರೀ. ಎಸ್. ಎಂ. ಸಂತೋಷ ಕುಮಾರ್ ಅವರ, ಒಟ್ಟು 8 ಎಕರೆ ಜಮೀನನ್ನು ಕ್ರಯಕ್ಕೆ ಕೊಳ್ಳಲು ಇಚ್ಚಿಸಿದ್ದು, ಕ್ರಯ ಪತ್ರವನ್ನು ಬರೆಸಿಕೊಳ್ಳಲು ಇಚ್ಚಿಸಿರುವುದರಿಂದ, ಷೆಡ್ಯೂಲ್ ಸ್ವತ್ತಿನ ಬಗ್ಗೆ, ಯಾರಿಂದಾದರೂ ಯಾವುದೇ ವಿಧವಾದ ತಂಟೆ, ತಕರಾರು ಇದ್ದಲ್ಲಿ, ದೂರಿನ ಬಗ್ಗೆ, ತಮ್ಮಲ್ಲಿರುವ ದಾಖಲಾತಿಗಳ ಸಹಿತ ಈ ಪ್ರಕಟಣೆಯ ದಿನಾಂಕದಿಂದ **10 ದಿನಗಳ ಒಳಗೆ,** ನಮ್ಮ ಕಕ್ಷಿದಾರರ ವಿಳಾಸಕ್ಕೆ ಅಥವಾ ನನ್ನ ವಿಳಾಸಕ್ಕೆ ಖುದ್ದು ಬಂದು ಲಿಖಿತವಾಗಿ ದೂರನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ವಿಧವಾದ ತಕರಾರು ಇಲ್ಲವೆಂದು ಪರಿಗಣಿಸಿ ನೋಂದಣಿ ಮಾಡಿಸಿಕೊಳ್ಳಲು ನನ್ನ ಕಕ್ಷಿದಾರರು ಇಚ್ಚಿಸಿರುತ್ತಾರೆ. ಅವಧಿಯ ನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ರಟ್ನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ ವಸತಿ ಉದ್ದೇಶಕ್ಕೆ ಆದೇಶ ಸಂಖ್ಯೆ MYSDC-ALN1/ALN/74/ 2017 (3908) DATED : 08.09.2017 ಅವಧಿ ವಿಸ್ತರಿಸಿ ALN(1)MIS:48/2019 DATED : 30.092019 ರಿತ್ಯಾ ಅನ್ಯಕ್ರಾಂತವಾಗಿರುವ ಸರ್ವೇ ನಂ. 166/3 ವಿಸ್ತೀರ್ಣ 6ಎಕರೆ 26ಗುಂಟೆ ಸ್ವತ್ತಿಗೆ **ಚಕ್ಕುಬಂದಿ** :– **ಪೂರ್ವಕ್ಕೆ** : ಲಾ.ಸ. ನಂ. 129 , **ಪಶ್ಚಿಮಕ್ಕೆ** : ಲಾ.ಹಿ. ನಂ.167, **ಉತ್ತರಕ್ಕೆ** : ಲಾ.ಹಿ. ನಂ. 4 ಮತ್ತು ಯಲಚಹಳ್ಳಿ ಗಡಿ, **ದಕ್ಷಿಣಕ್ಕೆ** : ಲಾ.ಹಿ. ನಂ. 2 ಮತ್ತು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ರಟ್ನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ ವಸತಿ ಉದ್ದೇಶಕ್ಕೆ ಆದೇಶ ಸಂಖ್ಯೆ MYSDC-ALN1/ALN/73/2017 DATED :17.04.2017 ಅವಧಿ ವಿಸ್ತರಿಸಿ ALN(1)MIS:48/2019 DATED : 30.092019 ರಿತ್ಯಾ ಅನ್ಯಕ್ರಾಂತವಾಗಿರುವ ಸರ್ವೇ ನಂ. 166/5 ವಿಸ್ತೀರ್ಣ 1ಎಕರೆ 14ಗುಂಟೆ ಸ್ವತ್ತಿಗೆ **ಚಕ್ಕುಬಂದಿ**:– **ಪೂರ್ವಕ್ಕೆ** : ಲಾ.ಹಿ. ನಂ. 1, **ಪಶ್ಚಿಮಕ್ಕೆ** : ಲಾ.ಹಿ. ನಂ. 2, **ಉತ್ತರಕ್ಕೆ** : ಲಾ.ಸ. ನಂ. 129, **ದಕ್ಷಿಣಕ್ಕೆ** : ಲಾ.ಸ. ನಂ. 168.

ಎಂ. ವಿ. ರಮೇಶ. ವಕೀಲರು,
ನಂ. 329/2, ಸಿ. ಹೆಚ್–5/2, ಡಿ.ಸುಬ್ಬಯ್ಯರಸ್ತೆ,
ಚಾಮರಾಜ ಮೊಹಲ್ಲಾ ಮೈಸೂರು–570004.
ಮೊಬೈಲ್: 9480118990

ದಿನಾಂಕ : 08-02-2025
ಸ್ಥಳ : ಮೈಸೂರು

ನಕ್ಕರೆ ಅದೇ ಸ್ವರ್ಗ

ರಮೇಶ : ಒಬ್ಬನಿಗೆ ಗಲ್ಲು ಶಿಕ್ಷೆ ವಿಧಿಸಿ 10 ವರ್ಷವಾದರೂ ಇನ್ನೂ ಗಲ್ಲಿಗೆ ಏರಿಸಿಲ್ಲ.
ರಂಗ : ಕಾರಣವೇನು ಗೆಳೆಯ?
ರಮೇಶ : ಆರ್‌ಸಿಬಿ ಕಪ್ ಗೆಲ್ಲೋದನ್ನು ನೋಡೋದೆ ನನ್ನ ಕೊನೆ ಆಸೆ ಎಂದಿದ್ದಾನಂತೆ. ಜೈಲಾಧಿಕಾರಿಗಳು ಆ ದಿನಕ್ಕಾಗಿ ಕಾಯ್ತಾ ಇದ್ದಾರೆ.

ಮೈಸೂರು ಮಿತ್ರ

ಶನಿವಾರ, 8 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನಿಮ್ಮ ನೂರು ಒಳ್ಳೆಯ ವಿಷಯಗಳು ಒಂದು ಸಣ್ಣ ತಪ್ಪಿನಿಂದಾಗಿ ಮರೆಯಾಗುತ್ತವೆ.

ವೇದ ಸುಳ್ಳಾದರೂ { ತಿನ್ನಲು, ಉಣ್ಣಲು
ಗಾದೆ ಸುಳ್ಳಾಗದು { ಇದ್ದರೆ ಯಾವತ್ತೂ ನೆಂಟರು.

ನಿಮ್ಮ ಪತ್ರಗಳು

■ ಒನ್ ಮಿನಿಟ್ ಅಪಾಲಜಿ ಪುಸ್ತಕ ಓದಿ

ಮಾನ್ಯರೆ,

ಐಪಿಎಸ್ ಅಧಿಕಾರಿ ರೂಪ ಮೌದ್ಗಿಲ್ ವಿರುದ್ಧ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಕೋರ್ಟ್‌ನಲ್ಲಿ ಸಾಕ್ಷ್ಯ ವಿಚಾರಣಾ ನಡೆಯುವ ಸಂದರ್ಭದಲ್ಲಿ ಇಬ್ಬರಿಗೂ ರಾಜೀ ಮಾಡಿಕೊಳ್ಳಲು ಕೋರ್ಟ್ ಸಲಹೆ ನೀಡಿದೆ. ನೀವಿಬ್ಬರೂ ಉತ್ತಮ ಹೆಸರು ಗಳಿಸಿದ ಹಿರಿಯ ಅಧಿಕಾರಿಗಳಾಗಿದ್ದೀರಿ. ನಿಮ್ಮ ಅಮೂಲ್ಯವಾದ ಸಮಯವನ್ನು ಸಮಾಜದ ಒಳಿತಿಗಾಗಿ ಮೀಸಲಿಡಬೇಕು. ಕೋರ್ಟ್ ಕಲಾಪದಲ್ಲಿ ಸಮಯವನ್ನು ವ್ಯಯಿಸುವ ಬದಲು ರಾಜೀ ಮಾಡಿಕೊಳ್ಳಲು ಸಾಧ್ಯವೇ ಯೋಚಿಸಿ ಎಂದು ನ್ಯಾಯಾಧೀಶರಾದ ವಿಜಯ್ ಕುಮಾರ್ ಜಾಟ್ಲಾ ಅವರು ಕಿವಿ ಮಾತು ಹೇಳಿ, ಇಬ್ಬರೂ ಹಿರಿಯ ಅಧಿಕಾರಿಗಳಿಗೆ 'ಒನ್ ಮಿನಿಟ್ ಅಪಾಲಜಿ' ಪುಸ್ತಕ ಓದುವಂತೆ ಸಲಹೆ ನೀಡಿರುವುದು ತುಂಬಾ ಶ್ಲಾಘನೀಯ. ಕಳೆದ ಎರಡು ಮೂರು ವರ್ಷಗಳಿಂದ ಇವರ ವಿಷಯ ಪತ್ರಿಕೆಗಳಲ್ಲಿ ಬಂದಾಗ ಈ ಇಬ್ಬರೂ ಹಿರಿಯ ಅಧಿಕಾರಿಗಳಿಗೆ ಏನಾಗಿದೆ ಎಂದು ಕರ್ನಾಟಕದ ಜನತೆ ಯೋಚನೆ ಮಾಡುತ್ತಿದ್ದುದ್ದು ಸರಿಯಷ್ಟೆ. ನ್ಯಾಯಾಧೀಶರಾದ ವಿಜಯ ಕುಮಾರ್ ಜಾಟ್ಲಾ ಸರ್, ನೀವು ಇಬ್ಬರಿಗೂ ಅತ್ಯುತ್ತಮವಾದ ಸಲಹೆಯನ್ನು ನೀಡಿದ್ದೀರಿ. ನಿಮಗೊಂದು ನನ್ನ ಮನದಾಳದ ಸಲಾಮ್.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಬಿಜೆಪಿ ಬಣ ಬಡಿದಾಟ

ಮಾನ್ಯರೆ,

ಕರ್ನಾಟಕ ಬಿಜೆಪಿಯಲ್ಲಿ ವಿಜಯೇಂದ್ರ ಬಣ, ಯತ್ನಾಳ್ ಬಣ, ತಟಸ್ಥ ಬಣ ಹೀಗೆ ಹಲವು ತಿಂಗಳಿಂದ ಬಣ ಬಡಿದಾಟ ನಡೆಯುತ್ತಿದೆ. ಬಿಜೆಪಿ ವರಿಷ್ಟರು ಇದನ್ನು ಶಮನ ಮಾಡದೆ, ಇತ್ತ ಬಂಡಾಯಗಾರರ ವಿರುದ್ಧ ಕ್ರಮ ಕೈಗೊಳ್ಳದೆ ಕೂಸನ್ನು ತೂಗುವ, ಕುಂಡಿಯನ್ನೂ ಜಿಗುಟುವ ಕೆಲಸ ಮಾಡುತ್ತಿದ್ದಾರೆ. ತಮ್ಮನ್ನು ಕೇಳದೆ, ವಿಶ್ವಾಸಕ್ಕೆ ತೆಗೆದುಕೊಳ್ಳದೆ, ತಮ್ಮನ್ನು ಕಡೆಗಣಿಸಿ ನಿರ್ಧಾರ ಕೈಗೊಳ್ಳುತ್ತಿದ್ದಾರೆ ಎಂದು ಯತ್ನಾಳ್ ಬಣ ವಿಜಯೇಂದ್ರ ವಿರುದ್ಧ ಸಮರ ಸಾರಿದೆ. ಯಡಿಯೂರಪ್ಪನವರ ಕಾರಣದಿಂದಲೇ ಮುಖ್ಯಮಂತ್ರಿಗಳಾಗಿದ್ದ ಸದಾನಂದಗೌಡ, ಬಸವರಾಜ ಬೊಮ್ಮಾಯಿ ಕೂಡ ಈಗ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿರುವುದು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕ ಪಕ್ಷೀಯವಾಗಿ ರಾಜ್ಯ ಘಟಕದ ಅಧ್ಯಕ್ಷರು ನಡೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಸಮರ್ಥಿಸುತ್ತದೆ. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ವಿಜಯೇಂದ್ರರೇ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು, ಅವರ ಕಾರಣದಿಂದಲೇ ಬಿಎಸ್‌ವೈಗೆ ಭ್ರಷ್ಟಾಚಾರದ ಮಸಿ ಮೆತ್ತಿಕೊಂಡಿತು ಎನ್ನುವುದು ಜನರಿಗೆ ತಿಳಿಯದ್ದೇನಲ್ಲ. ಆದರೆ ಈಗಲೂ ಯಡಿಯೂರಪ್ಪನವರ ಹೆಸರಿನ ಬಲದಿಂದಲೇ ವಿಜಯೇಂದ್ರರ ರಥ ಸಾಗುತ್ತಿದೆ. ಆದರೆ, ಅದಕ್ಕೆ ನೂರೆಂಟು ವಿಘ್ನಗಳು ಎದುರಾಗಿವೆ. ಬಿಎಸ್‌ವೈ ಹೆದರಿಕೆ ಹಾಗೂ ಲಿಂಗಾಯತ ಓಟ್ ಬ್ಯಾಂಕ್‌ಗೆ ಹೆದರಿ ಹೈಕಮಾಂಡ್ ಸಂದಿಗ್ಧದಲ್ಲಿದೆ. ಶ್ರೀರಾಮುಲು ಹೇಳಿರುವಂತೆ ಮತ್ತೆ ಬಿಎಸ್‌ವೈರನ್ನೇ ರಾಜ್ಯಾಧ್ಯಕ್ಷರನ್ನಾಗಿ ಮಾಡಿ ಎರಡೂ ಬಣದ ನಾಯಕರನ್ನು ಸಲಹೆಗಾರರಾಗಿ ನೇಮಿಸಲಿ. ಇದೊಂದೇ ಈಗ ಬಿಜೆಪಿ ಬಂಡಾಯ ಶಮನಕ್ಕೆ ಇರುವ ದಾರಿ. ಇಲ್ಲದಿದ್ದರೆ ಬಿಜೆಪಿ ಬಾಗಿಲು, ಗೋಡೆ ಯಾವುದೂ ಇಲ್ಲದ ಸೆಲ್ಲಾರ್‌ನಲ್ಲಿ ನಿಂತ ಗುಜರಿ ಲಾರಿಯಂತಾಗುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸುಣ್ಣದಕೇರಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಫುಟ್‌ಪಾತ್ ರಸ್ತೆ ಆಕ್ರಮಿಸಿದ ಗ್ಯಾರೇಜ್‌ಗಳು



ಮಾನ್ಯರೆ,

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸುಣ್ಣದಕೇರಿ ಫುಟ್‌ಪಾತ್ ಸೇರಿದಂತೆ ರಸ್ತೆಗಳನ್ನೆಲ್ಲಾ ಗ್ಯಾರೇಜ್‌ಗಳು ಆಕ್ರಮಿಸಿಕೊಂಡಿರುವುದರಿಂದ ಪಾದಚಾರಿಗಳು ರಸ್ತೆಯಲ್ಲೇ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಾಹನ ರಿಪೇರಿಗೆ ಬರುವ ದ್ವಿಚಕ್ರ ವಾಹನಗಳು ರಸ್ತೆಯಲ್ಲೇ ನಿಲ್ಲಿಸುವಂತಹ ಕೆಲಸವಾಗುತ್ತಿದೆ. ಫುಟ್‌ಪಾತ್ ಬಳಿ ಕೂಡ ತಮ್ಮ ವಾಹನ ನಿಲ್ಲಿಸಿ ಸ್ಥಳೀಯ ನಿವಾಸಿಗಳಿಗೆ, ಸಾರ್ವಜನಿಕರಿಗೆ ಹಾಗೂ ರಸ್ತೆಯಲ್ಲಿ ಸಂಚಾರ ಮಾಡುವ ಸವಾರರಿಗೆ ಕಂಟಕವಾಗಿದೆ. ಫುಟ್‌ಪಾತ್ ಹಾಗೂ ರಸ್ತೆಯನ್ನು ಕೂಡ ಆಕ್ರಮಿಸಿಕೊಂಡಿರುವ ಗ್ಯಾರೇಜ್ ಮಾಲೀಕರು ಯಾವುದಕ್ಕೂ ಜಗ್ಗದೆ ಕೆಲಸ ಮಾಡುತ್ತಿದ್ದಾರೆ. ಇದರಿಂದ ಸ್ಥಳೀಯ ನಿವಾಸಿಗಳು, ಪಾದಚಾರಿಗಳು ತೊಂದರೆ ಅನುಭವಿಸುತ್ತಿದ್ದಾರೆ. ವಾಹನಗಳನ್ನು ಎಲ್ಲೆಂದರಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುತ್ತಾರೆ. ಜನರು ರಸ್ತೆಯಲ್ಲಿ ನಡೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಅತಿ ವೇಗವಾಗಿ ಹೋಗುವ ವಾಹನಗಳಿಂದ ಸಾರ್ವಜನಿಕರಿಗೆ ಅಪಾಯವಾಗುವ ಸಾಧ್ಯತೆ ಹೆಚ್ಚಿದೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಬೇಕು.

– ಸ್ಥಳೀಯ ನಿವಾಸಿಗಳು, ಹಿರಿಯ ನಾಗರಿಕ ಸೋಮಶೇಖರ್, ರಹಮಾನೀಯ ಮೊಹಲ್ಲಾ

■ ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ...

ಮಾನ್ಯರೆ,

ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ 2025–2026 ಸಾಲಿಗೆ ಲೋಕ ಸಭೆಯಲ್ಲಿ ಮಂಡಿಸಿರುವ ಬಜೆಟ್ ಕೆಲವು ಉತ್ತಮ ಅಂಶಗಳಿಂದ ಕೂಡಿದ್ದರೂ ಸಹ, ಕೆಲವು ಪಕ್ಷಪಾತ ಧೋರಣೆಗಳಿಂದಾಗಿ ತೀವ್ರ ರೀತಿಯ ಟೀಕೆಗಳಿಗೆ ಗುರಿಯಾಗಿದೆ. ಬಹುಮುಖ್ಯವಾಗಿ, ಆದಾಯ ತೆರಿಗೆಯ ಮಿತಿಯನ್ನು ಏರಿಸುವ ಮೂಲಕ ವರ್ಷಕ್ಕೆ ರೂ 12,00,000 ರೂಪಾಯಿಗಳವರೆಗೆ ವೇತನ ಪಡೆಯುವ ನೌಕರರಿಗೆ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿರುವುದು ಈ ಬಾರಿಯ ಬಜೆಟ್ಟಿನ ಒಂದು ಗುಣಾತ್ಮಕ ಅಂಶವೆನ್ನಬಹುದು. ಇದರಿಂದ ಸರ್ಕಾರಿ ನೌಕರರು ಹಾಗೂ ಖಾಸಗಿ ವಲಯಗಳಲ್ಲಿ ಕಾರ್ಯ ನಿರ್ವಹಿಸುವ ಕೋಟ್ಯಾಂತರ ಜನ ಉದ್ಯೋಗಿಗಳು ನಿರಾಳವಾಗಬಹುದು. ಇದರಿಂದ ಅಂತಹ ನೌಕರರಲ್ಲಿ ಉಳಿತಾಯ ಮನೋಭಾವನೆಯನ್ನು ಹೆಚ್ಚಿಸಬಹುದು. ಆದರೆ, ದೇಶದ ಆರ್ಥಿಕ ಪರಿಸ್ಥಿತಿ ಆಶಾದಾಯಕವಲ್ಲವಾಗಿರುವುದು, ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದು, ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಉತ್ತೇಜನ ನೀಡದಿರುವುದು, ಅನೇಕ ಇಲಾಖೆಗಳಿಗೆ ನೀಡುತ್ತಿರುವ ಅನುದಾನದ ಪ್ರಮಾಣವನ್ನು ಕಡಿತಗೊಳಿಸಿರುವುದು ಮುಂತಾದ ನಕಾರಾತ್ಮಕ ಅಂಶಗಳು ಕಟು ಟೀಕೆಗಳಿಗೆ ಒಳಗಾಗುತ್ತಿದೆ. ಶೀಘ್ರದಲ್ಲೇ ಚುನಾವಣೆ ಎದುರಿಸಬೇಕಾಗಿರುವ ಬಿಹಾರ ರಾಜ್ಯಕ್ಕೆ ಹಲವಾರು ಹೊಸ ಯೋಜನೆಗಳನ್ನು ಪ್ರಕಟಿಸಿರುವ ವಿತ್ತ ಸಚಿವರು ಕಾಂಗ್ರೆಸ್ ಆಡಳಿತ ಇರುವ ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಮೂಲಕ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎಂಬ ನಾಣ್ನುಡಿಯನ್ನು ನಿಜವಾಗಿಸಿದ್ದಾರೆ. ಒಕ್ಕೂಟ ವ್ಯವಸ್ಥೆಯಲ್ಲಿ ಈ ರೀತಿಯ ಪಕ್ಷಪಾತ ಅಥವಾ ತಾರತಮ್ಯ ಧೋರಣೆ ಖಂಡನೀಯವಾಗಿದೆ. ಅಂದ ಹಾಗೆ ಮಾನ್ಯ ಅರ್ಥ ಸಚಿವೆ ತಾವು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಗೊಂಡಿರುವ ವಿಷಯವನ್ನು ಮರೆತಿರುವ ಹಾಗೆ ಕಾಣುತ್ತದೆ!

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಕಷ್ಟದಲ್ಲೂ ಇರುವುದುಂಟು ಇಷ್ಟದ ಬದುಕು!

ನಾವು ನಮ್ಮ ದೇಹವನ್ನು ಸುಖಕ್ಕೆ ಒಗ್ಗಿಸಿಕೊಂಡುಬಿಟ್ಟಿರುತ್ತೇವೆ. ಅದರಿಂದಾಗಿ ಅದು ಬರುವ ಕಷ್ಟವನ್ನು ಸಹಿಸುವುದಿಲ್ಲ. ಹಾಗಾದರೆ ಯಾವುದು ಕಷ್ಟ, ಯಾವುದು ಸುಖ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಹೇಳಬಹುದಾದ ಸರಳ ಉತ್ತರ ನಮಗೆ ಯಾವುದರಿಂದ ಹಿತವಾಗುವುದೋ ಅದೇ ಸುಖ. ನಮಗೆ ಚಳಿಗಾಲದಲ್ಲಿ ಬೆಚ್ಚನೆಯ ಅನುಭವ ನೀಡಿದರೆ, ಬೇಸಿಗೆಯಲ್ಲಿ ಚಳಿಯ ಸಂಪರ್ಕ ಹಿತವಾಗುತ್ತದೆ. ಮಳೆಗಾಲದಲ್ಲಿ ಮಳೆ ಇಲ್ಲದಿರುವುದು ಹಿತವೆನಿಸಿದರೆ, ಬಿಸಿಲು ಅತಿಯಾದಾಗ ಮಳೆ ಬಂದರೆ ಚೆನ್ನಾಗಿರುತ್ತದೆ ಎನ್ನಿಸುತ್ತದೆ. ಹೀಗೆ ನಮ್ಮ ಸುಖ ಹಾಗೂ ಕಷ್ಟದ ವಿವರಣೆ ಆಗಾಗ್ಗೆ ಬದಲಾಗುತ್ತಿರುತ್ತದೆ. ಆದರೆ ಬೀದಿ ಬದಿಯಲ್ಲಿ ವಾಸಿಸುವ ನಿರಾಶ್ರಿತರು, ನಿರ್ಗತಿಕರಿಗೆ ಈ ಕಷ್ಟಸುಖಗಳ ಅರಿವೇ ಇರುವುದಿಲ್ಲ. ಅವರಿಗೆ ಎಲ್ಲ ದಿನಗಳೂ ಒಂದೆಯೇ. ಹೆಚ್ಚು ಚಳಿಯಾದಾಗ ಸ್ವಲ್ಪ ಚಳಿ ಕಡಿಮೆ ಇರುವ ಪ್ರದೇಶ ಅವರಿಗೆ ಹಿತ ನೀಡುತ್ತದೆ. ಮಳೆ ಬಂದಾಗ ಮಳೆ ನೀರು ಸೋರದ ಪ್ರದೇಶ ಅವರ ಆದ್ಯತೆಯಾಗುತ್ತದೆ.

ಇತ್ತೀಚಿಗೆ ಚಳಿ ಹೆಚ್ಚಾದ ಸಮಯದಲ್ಲಿ ಮೈಸೂರಿನ ಒಂದು ಸಂಸ್ಥೆ ಕೆಲವರಿಂದ ಹಣವನ್ನು ದೇಣಿಗೆ ಪಡೆದು ಹೊದಿಕೆಗಳನ್ನು ಖರೀದಿಸಿ, ಮಧ್ಯರಾತ್ರಿಯಲ್ಲಿ ನಗರದಲ್ಲಿ ದ್ವಿಚಕ್ರ ವಾಹನಗಳಲ್ಲಿ ಸಂಚರಿಸಿ, ರಸ್ತೆ ಬದಿ, ಬಸ್ ಪ್ರಯಾಣಿಕರ ತಂಗುದಾಣಗಳು, ಪಾರ್ಕ್‌ಗಳಲ್ಲಿ ಮಲಗಿದ್ದವರನ್ನು ಹುಡುಕಿತು. ಯಾರು ಚಳಿಯಲ್ಲೇ ಹೊದಿಕೆ ಇಲ್ಲದೆ ಮಲಗಿದ್ದರೋ ಅವರ ನಿದ್ರೆಗೆ ಭಂಗವಾಗದಂತೆ ಹೊದಿಕೆ ಹೊದಿಸಿ ಮತ್ತೊಬ್ಬರೆಡೆಗೆ ಹೋಗುತ್ತಿದ್ದರು. ಮಲಗಿದ್ದವರಲ್ಲಿ ಕೆಲವರು ಹೊದಿಕೆ ಹೊದಿಸಿದಾಗ ಎಚ್ಚರಗೊಂಡು ಹೊದಿಸಿದವರಿಗೆ ನಮಸ್ಕರಿಸಿದರೆ, ಕೆಲವರಿಗೆ ಅದೆಂತಹ ನಿದ್ರೆ ಎಂದರೆ ಅವರು ಎಚ್ಚರಗೊಳ್ಳುತ್ತಲೇ ಇರಲಿಲ್ಲ. ಅದು ಚಳಿ ಹೆಚ್ಚಿದ್ದ ದಿನಗಳು. ಸುಸ್ಥಿತಿಯಲ್ಲಿರುವ ಮನೆಗಳಲ್ಲಿ ಮನೆಯವರು ಎರಡೆರಡು ಹೊದಿಕೆ ಹೊದ್ದು ಮಲಗಿಯೂ ಯಾಕೋ ಇಂದು ಚಳಿ ಜಾಸ್ತಿ ಇದೆ ಎಂದು ಪರದಾಡುತ್ತಿದ್ದ ಸಮಯವದು. ಆದರೆ ಈ ನಿಸ್ಪೃಹ ತಂಡ, ಹುಡುಕಿ ಹುಡುಕಿ ಈ ರೀತಿ ರಸ್ತೆ ಬದಿ ಮಲಗಿದ್ದವರಿಗೆ ಹೊದಿಕೆ ವಿತರಿಸಿತು. ಇದೊಂದು ಶ್ಲಾಘನೀಯ ಕಾರ್ಯ. ದೇಣಿಗೆ ನೀಡಿದವರ ಗಮನಕ್ಕೆ ತರಲು ಮಾತ್ರ ವಿತರಣೆಯ ವಿಧಾನವನ್ನು ಚಿಕ್ಕದಾಗಿ ವಿಡಿಯೋ ಮಾಡಿ ಕಳುಹಿಸಲಾಯಿತೇ ಹೊರತು, ಅದನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳಲಿಲ್ಲ.

ಅಂತಹ ಚಳಿಯಲ್ಲೂ ಯಾವುದೇ ಹೊದಿಕೆ ಇಲ್ಲದೆ ನಿದ್ರೆ ಮಾಡುತ್ತಿದ್ದಂತಹವರನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಅವರ ನಿದ್ರೆಗೆ ಚಳಿ ಅಡ್ಡವಾಗಲಿಲ್ಲ ಎಂಬುದನ್ನು ಕಂಡಾಗ ಮಹಾಸೋಜಿಗವೇ ಸರಿ. ಅವರ ದೇಹ ಅದಕ್ಕೆ ಹೊಂದಿಕೊಂಡಿತ್ತು. ಅವರಿಗೆ ಎಲ್ಲರಿಗಿರುವಂತಹುದೇ ದೇಹವಾದರೂ ಅವರ ಆದ್ಯತೆ ಚಳಿಯಿಂದ ದೇಹವನ್ನು ರಕ್ಷಿಸಿಕೊಳ್ಳಬೇಕು ಎಂಬುದರೆಡೆಗೆ ಇರಲಿಲ್ಲ. ದಣಿದ ಫಲವಾಗಿ, ಇಲ್ಲವೇ ಅನಾರೋಗ್ಯದಿಂದಲೂ ಹಾಗೆಯೇ ಸುಖ ನಿದ್ರೆ ಕಾಣುತ್ತಿದ್ದರು. ತಲೆಗೆ ದಿಂಬಿಲ್ಲ, ಮೈಮೇಲೆ ಹೊದಿಕೆ ಇಲ್ಲ. ಆದರೂ ಅವರಿಗೆ ಸುಖ ನಿದ್ರೆ ಹೇಗೆ ಬರುತ್ತಿತ್ತು ಎಂಬುದು ಆಶ್ಚರ್ಯ ಸಂಗತಿ ಅಲ್ಲವೆ. ಅಂದರೆ ಒಬ್ಬರಿಗೆ ಕಷ್ಟವೆನಿಸಿದ್ದು, ಮತ್ತೊಬ್ಬರಿಗೆ ಹಾಗೆ ಅನ್ನಿಸುವುದಿಲ್ಲ ಎಂಬುದಕ್ಕೆ ಇದು ಉದಾಹರಣೆ ಅಷ್ಟೇ. ಅಲ್ಲದೆ ಇಂತಹವರಿಗೆ ಹೊದಿಕೆ ಹೊದಿಸಿದ ಆ ಯುವ ಕಾರ್ಯಕರ್ತರ ಮನೋಭಾವ ಶ್ಲಾಘನೀಯ. ಅವರು ಈ ಕೆಲಸವನ್ನು ಪ್ರತಿ ವರ್ಷ ಚಳಿಗಾಲದಲ್ಲಿ ಮಾಡುತ್ತಾರೆ.



> **ಕಷ್ಟ ಪಡುವವರಿಗೆ ಸುಖ ಸ್ವಲ್ಪ ಖುಷಿ ನೀಡುವುದಾದರೂ, ಸುಖವನ್ನೇ ಕಂಡವರಿಗೆ ಸ್ವಲ್ಪ ಕಷ್ಟ ದೊಡ್ಡದಾಗಿಯೇ ಕಾಣುತ್ತದೆ. ಆದ್ದರಿಂದ ಒಂದಷ್ಟು ಕಷ್ಟ ಬಂದಾಗ ಅದರ ಬಗ್ಗೆ ಬೇಸರಿಸದೆ ಸಹಿಸಿಕೊಂಡರೆ ಜೀವನದಲ್ಲಿ ಸುಖ ಎಂಬುದರ ಬೆಲೆ ಏನು ಎಂಬುದು ಅರ್ಥವಾಗುತ್ತದೆ. ನಮ್ಮಲ್ಲಿನ ಬೀದಿ ಬದಿಯ ನಾಯಿಗಳನ್ನು ಗಮನಿಸಬಹುದು. ಅವುಗಳಿಗೂ ಚಳಿ ತಟ್ಟುತ್ತದೆ. ಆದರೆ ಅವುಗಳಿಗೆ ಹೊದಿಕೆ ಇಲ್ಲ. ರಸ್ತೆ ಮಧ್ಯದಲ್ಲಿಯೇ ತಮ್ಮ ದೇಹದ ಶಾಖವನ್ನೇ ಕಾಪಾಡಿಕೊಳ್ಳುವಂತಹ ಭಂಗಿಯಲ್ಲಿ ಮಲಗಿ, ಚಳಿ ಸಹಿಸುತ್ತವೆ. ಅದೇ ರೀತಿ ಬೀದಿ ಬದಿಯ ಇತರೆ ಪ್ರಾಣಿಗಳೂ ಸಹ. ಅವು ಅದನ್ನು ಕಷ್ಟ ಎಂದುಕೊಳ್ಳುವುದಿಲ್ಲ. ಒಂದು ರೀತಿಯಲ್ಲಿ ಅದು ಅನಿವಾರ್ಯ. ಅಂದರೆ ಕಷ್ಟಗಳು ಬಂದಾಗ ಅದನ್ನು ಅನಿವಾರ್ಯ ಎಂದು ಭಾವಿಸಿದಾಗ ಅದು ಅಂತಹ ಕಷ್ಟ ಎನ್ನಿಸುವುದಿಲ್ಲ.**

ಇಂತಹವರಿಗೆ ಒಂದಷ್ಟು ಸಹಾಯ ಮಾಡಿದ ತೃಪ್ತಿ ದಾನಿಗಳಿಗೆ. ಆದರೆ ಅದು ಪ್ರಚಾರಕ್ಕೆ ಅಲ್ಲ. ಅಂತಹವರಿಗೆ ಅಂತಹ ಮನೋಭಾವದವರೇ ದೇಣಿಗೆಯನ್ನೂ ನೀಡುತ್ತಾರೆ. ಇಂತಹ ಹಲವು ರೀತಿಯ ಸಮಾಜ ಸೇವಾ ಪ್ರಕರಣಗಳನ್ನು, ಸನ್ನಿವೇಶಗಳನ್ನು ನಾವು ನಮ್ಮ ಸಮಾಜದಲ್ಲಿ ಈಗಲೂ ಕಾಣುತ್ತೇವೆ.

ಕಷ್ಟ ಪಡುವವರಿಗೆ ಸುಖ ಸ್ವಲ್ಪ ಖುಷಿ ನೀಡುವುದಾದರೂ, ಸುಖವನ್ನೇ ಕಂಡವರಿಗೆ ಸ್ವಲ್ಪ ಕಷ್ಟ ದೊಡ್ಡದಾಗಿಯೇ ಕಾಣುತ್ತದೆ. ಆದ್ದರಿಂದ ಒಂದಷ್ಟು ಕಷ್ಟ ಬಂದಾಗ ಅದರ ಬಗ್ಗೆ ಬೇಸರಿಸದೆ ಸಹಿಸಿಕೊಂಡರೆ ಜೀವನದಲ್ಲಿ ಸುಖ ಎಂಬುದರ ಬೆಲೆ ಏನು ಎಂಬುದು ಅರ್ಥವಾಗುತ್ತದೆ.

ನಮ್ಮಲ್ಲಿನ ಬೀದಿ ಬದಿಯ ನಾಯಿಗಳನ್ನು ಗಮನಿಸಬಹುದು. ಅವುಗಳಿಗೂ ಚಳಿ ತಟ್ಟುತ್ತದೆ. ಆದರೆ ಅವುಗಳಿಗೆ ಹೊದಿಕೆ ಇಲ್ಲ. ರಸ್ತೆ ಮಧ್ಯದಲ್ಲಿಯೇ ತಮ್ಮ ದೇಹದ ಶಾಖವನ್ನೇ ಕಾಪಾಡಿಕೊಳ್ಳುವಂತಹ ಭಂಗಿಯಲ್ಲಿ ಮಲಗಿ ಚಳಿ ಸಹಿಸುತ್ತವೆ. ಅದೇ ರೀತಿ ಬೀದಿ ಬದಿಯ ಇತರೆ ಪ್ರಾಣಿಗಳೂ ಸಹ. ಅವು ಅದನ್ನು ಕಷ್ಟ ಎಂದು ಕೊಳ್ಳುವುದಿಲ್ಲ. ಒಂದು ರೀತಿಯಲ್ಲಿ ಅದು ಅನಿವಾರ್ಯ. ಅಂದರೆ ಕಷ್ಟಗಳು ಬಂದಾಗ ಅದನ್ನು ಅನಿವಾರ್ಯ ಎಂದು ಭಾವಿಸಿದಾಗ ಅದು ಅಂತಹ ಕಷ್ಟ ಎನ್ನಿಸುವುದಿಲ್ಲ.

ಹಿಂದೆ ಓದಿದ್ದ ಗಿಡುಗ ಪಕ್ಷಿಯ ಬಗೆಗಿನ ಮಾಹಿತಿ ರೋಮಾಂಚನವಾದುದು. ಗಿಡುಗಗಳು ಸುಮಾರು 70 ವರ್ಷ ಬದುಕುತ್ತವೆ ಎಂಬುದು ಒಂದು ಅಂದಾಜು. ಆರಂಭದಿಂದ ಸುಮಾರು 40 ವರ್ಷಗಳವರೆಗೆ ಅದು ಆರಾಮವಾಗಿ ಬದುಕುತ್ತದೆ. ಅದರ ಶಕ್ತಿ ಎಂದರೆ ಅದರ ಕೊಕ್ಕು, ಕಾಲಿನ ಬೆರಳು ಹಾಗೂ ರೆಕ್ಕೆ. ತನ್ನ ಕೊಕ್ಕಿನಿಂದ ಸಿಕ್ಕ ಪ್ರಾಣಿಗಳ ಬೇಟೆಯಾಡಿ ಕುಕ್ಕಿ ಕುಕ್ಕಿ ಬೇಕಾದಷ್ಟು ಆಹಾರ ತಿನ್ನುತ್ತದೆ. ಅದು ಬೇಟೆಯಾಡುವುದು ಮುಖ್ಯವಾಗಿ ತನ್ನ ಕಾಲಿನ ಮೊನಚಾದ ಉಗುರುಗಳಿಂದ. ಎತ್ತರದಲ್ಲಿ ಹಾರುತ್ತಲೇ ಕೆಳಗೆ ನೆಲದಲ್ಲಿ ಕಾಣಿಸಿದ ಪುಟ್ಟ ಪ್ರಾಣಿಗಳನ್ನು ತನ್ನ ಉಗುರುಗಳಿಂದ ಬಿಗಿದು ಹಾರಿಹೋಗಿ, ಸುರಕ್ಷಿತವಾದ ಜಾಗದಲ್ಲಿ ಕುಳಿತು ಅದನ್ನು ತಿನ್ನುತ್ತದೆ. ಅದು ಎಷ್ಟು ದೂರ ಬೇಕಾದರೂ, ಎಷ್ಟು ಹೊತ್ತಾದರೂ ಹಾರಬಲ್ಲದು. ಅದರ ರೆಕ್ಕೆಗೆ ಅಂತಹ ಶಕ್ತಿ. ಹಾಗಾಗಿ ಅಲ್ಲಿಯವರೆಗೆ ಅದರದ್ದು ಸುಖ ಜೀವನ. ಆದರೆ 40 ವರ್ಷವಾಗುತ್ತಿದ್ದಂತೆಯೇ ಅದರ ಕಾಲಿನ ಉಗುರುಗಳು ಉದ್ದವಾಗಿ ಬೆಳೆಯಲು ಆರಂಭವಾಗುತ್ತದೆ. ಹಾಗೆ ಬೆಳೆಯುವಾಗ ಅವು ಮೃದುವಾಗುತ್ತವೆ. ಇದರಿಂದಾಗಿ ಬೇಟೆಯನ್ನು ಬಿಗಿಯಾಗಿ ಕಾಲಿನಿಂದ ಬಿಗಿಯಾಗಿ ಹಿಡಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಿಡಿದ ಬೇಟೆಯು ಕಾಲಿನಿಂದ ಜಾರಿಹೋಗಲು ಪ್ರಾರಂಭಿಸುತ್ತದೆ. ಇನ್ನು ಅದರ ಕೊಕ್ಕು ಬಾಗಲು ಪ್ರಾರಂಭವಾಗುತ್ತದೆ. ಬಾಗುವುದು ಹೆಚ್ಚಾದಂತೆ ಆಹಾರವನ್ನು ಕುಕ್ಕಿ ಕುಕ್ಕಿ ತಿನ್ನಲು ಸಾಧ್ಯವಾಗದೆ ಸುಸ್ತಾಗುತ್ತದೆ. ಒಂದು ರೀತಿ ಸಂಕಷ್ಟ ಪರಿಸ್ಥಿತಿ ಎದುರಾಗುತ್ತದೆ. ಇಷ್ಟಲ್ಲದೆ ಅದರ ರೆಕ್ಕೆಗಳು ವಯಸ್ಸಿನ ಕಾರಣ ಭಾರವಾಗುತ್ತಾ ಹೋಗುತ್ತದೆ. ಅದರಿಂದ ಬೇಟೆಯನ್ನು ಹುಡುಕಿಕೊಂಡು ದೂರದೂರ ಹಾರಲಾಗುವುದಿಲ್ಲ. ಹಾಗಾಗಿ ಅದರ ಜೀವನದುಸ್ತರವಾಗುತ್ತದೆ.

ಇಂತಹ ಸಮಯದಲ್ಲಿ ಅದಕ್ಕೆ ಮೂರು ದಾರಿಗಳಿರುತ್ತವೆ. ಒಂದು ಎಲ್ಲವನ್ನೂ ತ್ಯಜಿಸಿ ದೇಹತ್ಯಾಗ ಮಾಡುವುದು. ಮತ್ತೊಂದು ಜೀವಂತ ಪ್ರಾಣಿಗಳ ಬೇಟೆಯನ್ನು ಬಿಟ್ಟು, ಹದ್ದುಗಳಂತೆ ಸತ್ತ ಪ್ರಾಣಿಗಳ ಮಾಂಸ ತಿನ್ನುವುದು. ಮೂರನೆಯದು ತನಗಾದ ದುಸ್ಥಿತಿಯಿಂದ ಹೊರಬರುವುದು. ಆದರೆ ಅದು ಸುಲಭದ ಕೆಲಸವಲ್ಲ. ಆದರೂ ಗಿಡುಗ ಮೂರನೆಯದನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಮೊದಲು ಅತೀ ಎತ್ತರದ ಬೆಟ್ಟದ ಮೇಲಿನ ಗಟ್ಟಿಯಾದ ಬಂಡೆಕಲ್ಲು ಆಯ್ಕೆ ಮಾಡುತ್ತದೆ. ಅದರ ಮೇಲೆ ತನ್ನ ಕೊಕ್ಕಿನಿಂದ ಕುಕ್ಕಲು ಪ್ರಾರಂಭಿಸುತ್ತದೆ. ಅದು ಅತೀವ ನೋವಿನ ವಿಧಾನ. ಬಾಯಿಯಿಂದ ರಕ್ತ ಹರಿಯುತ್ತದೆ, ಅಸಾಧ್ಯವಾದ ನೋವೂ ಆಗುತ್ತದೆ. ಕುಕ್ಕಿಕುಕ್ಕಿ ಸುಸ್ತಾಗುತ್ತದೆ. ಆದರೂ ಛಲ ಬಿಡದೆ ಮುಂದುವರೆಸುತ್ತದೆ. ತನ್ನ ಕೊಕ್ಕು ಮುರಿಯುವವರೆಗೂ ಹಾಗೆ ಮಾಡುತ್ತಾ ಹೋಗುತ್ತದೆ. ಕೊಕ್ಕು ಮುರಿದ ನಂತರ ಹೊಸದಾಗಿ ಕೊಕ್ಕು ಬೆಳೆಯಲು ಪ್ರಾರಂಭವಾಗುತ್ತದೆ. ಹಾಗೆಯೇ ಕಾಲಿನ ಉಗುರುಗಳು ಕಿತ್ತು ಬೀಳುವವರೆಗೂ ಕಾಲನ್ನು ಬಂಡೆಗೆ ಉಜ್ಜುತ್ತಲೇ ಇರುತ್ತದೆ. ಕೊನೆಗೆ ಉಗುರು ಕಿತ್ತು ಬರುತ್ತದೆ. ನಂತರ ಮತ್ತೆ ಅಲ್ಲಿ ಹೊಸ ಉಗುರು ಬೆಳೆಯಲು ಆರಂಭವಾಗುತ್ತದೆ.

ಹೀಗೆ ಕಿತ್ತ ಜಾಗದಲ್ಲಿ ಬರುವ ಉಗುರು ಹಾಗೂ ಕೊಕ್ಕಿನಿಂದ ತನ್ನ ಭಾರವಾದ ರೆಕ್ಕೆಗಳ ಒಂದೊಂದೇ ಪುಕ್ಕವನ್ನು ಹೆಕ್ಕಿಹೆಕ್ಕಿ ಕೀಳತೊಡಗುತ್ತದೆ. ಎಲ್ಲ ಪುಕ್ಕಗಳೂ ಕಿತ್ತ ನಂತರ ಅಲ್ಲಿ ಹೊಸಪುಕ್ಕಗಳು ಬೆಳೆಯುತ್ತವೆ. ಹೊಸದಾಗಿ ಬರುವ ಪುಕ್ಕಗಳಿಂದ ರೆಕ್ಕೆಯನ್ನು ಹಗುರವಾಗಿರಿಸಿಕೊಂಡು ಮೊದಲಿನಂತೆ ಹಾರಲು ಪ್ರಯತ್ನಿಸುತ್ತದೆ. ಇದಕ್ಕೆಲ್ಲಾ ಸುಮಾರು 150 ದಿನಗಳು ಬೇಕಾಗುತ್ತದೆ ಎಂಬುದು ಒಂದು ಅಂದಾಜು. ಅಲ್ಲಿಯವರೆಗೆ ನೋವು, ಹಸಿವು ಸಹಿಸಿಕೊಳ್ಳುತ್ತದೆ. ನಂತರ ಮೊದಲಿನಂತೆ ಹಾರುವುದು, ಬೇಟೆಯಾಡುವುದು, ಕುಕ್ಕಿ ತಿನ್ನುವುದು ಮಾಡಬಹುದಾಗುತ್ತದೆ. ಈ ಹಂತ ದಾಟಿದ ನಂತರ ಅದು ಇನ್ನೂ ಮೂವತ್ತು ವರ್ಷಗಳವರೆಗೆ ಸ್ವಚ್ಛಂದವಾಗಿ ಬದುಕುತ್ತದೆ.

ಇದು ನಮಗೆ ಒಂದು ಉತ್ತಮ ಸಂದೇಶ ನೀಡುತ್ತದೆ. ನಾವು ಅಸಹಾಯಕರಾದಾಗ ನಮಗೆ ಯಾರೂ ಸಹಾಯ ಮಾಡುವುದಿಲ್ಲ, ಹಾಗೆ ಸಹಾಯ ಮಾಡಬಹುದು ಎಂದು ಕಾಯಲೂಬಾರದು. ನಾವು ತೊಂದರೆಯಲ್ಲಿದ್ದಾಗ ಯಾರೂ ನಮ್ಮ ಸಹಾಯಕ್ಕೆ ಬರುವುದಿಲ್ಲ. ಆದರೆ ಪ್ರಕೃತಿ ನಮಗೆ ಸಹಾಯ ಮಾಡುತ್ತದೆ. ಇದನ್ನು ದೇವರ ಇರುವಿಕೆಗೆ ಹೋಲಿಸಲಾಗುತ್ತದೆ. 'ಅನಾಥೋ ದೈವ ರಕ್ಷಕಃ' ಎಂಬಂತೆ ದೇವರು ಸಹಾಯ ಮಾಡುತ್ತಾನೆ. ಆದರೆ ದೇವರೇ ಬಂದು ಸಹಾಯ ಮಾಡಲಿ ಎಂದು ಕುಳಿತು ಕೊಳ್ಳುವಂತಿಲ್ಲ. ನಮ್ಮ ಪ್ರಯತ್ನ ಮಾಡಬೇಕಾಗುತ್ತದೆ. ಬಂದಿದ್ದನ್ನು ಎದುರಿಸಬೇಕಾಗುತ್ತದೆ. ನನಗೆ ಸಹಾಯಕ ನಾನೇ ಆಗಬೇಕು. ಯಾರೂ ನನಗೆ ಸಹಾಯ ಮಾಡುತ್ತಿಲ್ಲ ಎಂದು ದೂರುತ್ತಾ ಕುಳಿತರೆ, ಕೊನೆಗೆ ಆ ದೇವರೂ ಸಹಾಯ ಮಾಡುವುದಿಲ್ಲ. ನಮಗೆ ನಾವೇ ಸಹಾಯಕರಾಗಬೇಕು. ಬಂದ ಕಷ್ಟವನ್ನು ಸಂಘರ್ಷದ ದಾರಿಯಿಂದ ಬಗೆಹರಿಸಿಕೊಳ್ಳ ಬೇಕು. ಗಿಡುಗ ಆ ಕಷ್ಟದ ನಂತರ ಮತ್ತೆ ಹಲವಾರು ವರ್ಷ ಮೊದಲಿನಂತೆಯೇ ಬದುಕುತ್ತದೆ. ಹಾಗೇ ನಾವೂ ಬದುಕಬಹುದು.

ಕಷ್ಟಗಳು ಸುಖದ ಮತ್ತೊಂದು ಮುಖ. ಒಂದೇ ಮುಖ ಯಾವಾಗಲೂ ಇರಲಿ ಎಂದು ಬಯಸಲಾಗದು. ಸುಖದ ನಂತರ ಕಷ್ಟ ಹಾಗೂ ಕಷ್ಟದ ನಂತರ ಸುಖ, ಇದು ಒಂದು ರೀತಿ ಕಡ್ಡಾಯ. ಒಂದೇ ರೀತಿ ಇರಲಾಗದು. ಹೆಚ್ಚು ಕಷ್ಟಪಟ್ಟವನು ಖಂಡಿತಾ ಮುಂದೆ ಬರುತ್ತಾನೆ. ಕಷ್ಟ ಪಡದೇ ಹೆಚ್ಚು ತಿಂದವನು ಅಜೀರ್ಣದಿಂದ ಬಳಲುತ್ತಾನೆ. ಇದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕು. ಸುಖವೇ ಜೀವನವಲ್ಲಾ, ಹಾಗೆಯೇ ಕಷ್ಟವೂ ಶಾಶ್ವತವಲ್ಲ. ಪರಿಹಾರ ನಮ್ಮ ಕೈಯಲ್ಲೇ ಇರುವಂತಹುದು.

ರಂಗಭೂಮಿ, ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರಕ್ಕೆ ಚಾಲನೆ

ರಂಗಭೂಮಿ ಚಟುವಟಿಕೆಗಳು ಎಲ್ಲರಿಗೂ ಆಸಕ್ತಿದಾಯಕ: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಿಮತ

ಮೈಸೂರು, ಫೆ.7(ಎಸ್‌ಪಿಎನ್)– ರಂಗಭೂಮಿ ಮತ್ತು ಜಾನಪದ ಸೇರಿದಂತೆ ಇತರೆ ಕಲಾಕ್ಷೇತ್ರ ಎಲ್ಲರನ್ನು ಆಕರ್ಷಿಸುತ್ತದೆ. ಈ ಕ್ಷೇತ್ರ ಎಲ್ಲಾ ವಿಭಾಗದ ವಿದ್ಯಾರ್ಥಿಗಳ ಒಂದೆಡೆ ಸೇರಿಸುವ ಸಂಗಮವಾಗಿದೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಆವರಣದ ಕಾರಂತರ ರಂಗಚಾವಡಿಯಲ್ಲಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ಸಹಯೋಗದೊಂದಿಗೆ ಏರ್ಪಡಿಸಿರುವ ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ–2025ಕ್ಕೆ ಡೋಲು ಬಾರಿಸುವ ಮೂಲಕ ಚಾಲನೆ ನೀಡಿದರು.

ಕೋವಿಡ್–19 ನಂತರ ರಂಗಭೂಮಿ ಚಟುವಟಿಕೆಗಳು ಮೈಸೂರಲ್ಲಿ ಬಿರುಸು ಪಡೆದುಕೊಂಡಿವೆ. ಇದಕ್ಕೆ ಹವ್ಯಾಸಿಗಳ ಸಂಘಟನೆ ಪಾತ್ರ ದೊಡ್ಡದು. ಅಲ್ಲದೆ, ರಂಗಶಿಬಿರಗಳು ಬೇರೆಬೇರೆ ವಿಷಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಒಂದುಗೂಡಿಸುವ ವೇದಿಕೆಯಾಗಿದ್ದು, ಇಂತಹ ಚಟುವಟಿಕೆಗಳಿಗೆ ರಂಗಾಯಣ ಮೊದಲ ಆದ್ಯತೆ ನೀಡಬೇಕಿತ್ತು. ಆದರೆ, ಈ ಸ್ಥಾನದಲ್ಲಿ ಮೈಸೂರಿನ ಹವ್ಯಾಸಿ ರಂಗತಂಡಗಳು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿರುವುದರಿಂದ ರಂಗಾಯಣದ ಜವಾಬ್ದಾರಿಯನ್ನು ಕಡಿಮೆ ಮಾಡಿದೆ ಎಂದರು.

ಈ ರಂಗಶಿಬಿರದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕೇವಲ ಜಾನಪದ ನೃತ್ಯ ಕಲಿಕೆಗೆ ಸೀಮಿತವಾಗದೇ ವರ್ಷ ಪೂರ್ತಿ ಬೇರೆಬೇರೆ ರಂಗಚಟುವಟಿಕೆಗಳಲ್ಲಿ ಭಾಗಿಯಾಗಿ ಇತರೆ ಕಲೆಗಳ ಕಲಿಕೆಗೂ ಆಸಕ್ತಿ ತೋರುವಂತೆ ಸಲಹೆ ನೀಡಿದ ಅವರು, ರಂಗ ಚಟುವಟಿಕೆಗಳಲ್ಲಿ ಭಾಗಿಯಾದರೆ, ವ್ಯಕ್ತಿತ್ವ ವಿಕಾಸ, ವ್ಯಕ್ತಿಗತ ವಿಶ್ವಾಸ ಹೆಚ್ಚಾಗುತ್ತದೆ. ತಮ್ಮನ್ನು ತಾವು ಸಮಾಜಮುಖಿಯಾಗಿಸಲು ರಂಗ ಚಟುವಟಿಕೆಗಳು ಸಹಕಾರಿಯಾಗುತ್ತವೆ ಎಂದು ಸಲಹೆ ನೀಡಿದರು.



ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ–2025ಕ್ಕೆ ಡೋಲು ಬಾರಿಸುವ ಮೂಲಕ ಚಾಲನೆ ನೀಡಲಾಯಿತು.

ಮೈಸೂರು ರಾಜೇಶ್ವರಿ ವಸ್ತ್ರಾಲಂಕಾರ ಸಂಸ್ಥೆಯ ಮಾಲೀಕರೂ ಆದ ಹಿರಿಯ ರಂಗಕರ್ಮಿ ಬಿ.ಎಂ. ರಾಮಚಂದ್ರ ಮಾತನಾಡಿ, ರಂಗಭೂಮಿ ವಿವಿಧ ವಿಭಾಗದಲ್ಲಿ ಗುರುತಿಸಿಕೊಂಡವರನ್ನು ಮಾಲೀಕ ಎಂದು ಕರೆಯುವುದಕ್ಕೆ ನನ್ನ ಆಕ್ಷೇಪವಿದೆ. ನಮಗೆಲ್ಲಾ ಮಾಲೀಕ ಎಂದರೆ ಅದು 'ರಂಗಭೂಮಿಯೇ'. ಏಕೆಂದರೆ, ರಂಗಭೂಮಿ ಕಲಾವಿದ, ಸಂಗೀತ ಕಲಾವಿದ, ನೈಪಥ್ಯದಲ್ಲಿ ಕೆಲಸ ಮಾಡುವವರೆಲ್ಲಾ ಒಂದೇ. ಹಾಗಾಗಿ ನಾನೂ ಇಲ್ಲಿನ ಒಬ್ಬ ಸದಸ್ಯನೇ. ಹಾಗಾಗಿ ವಿನ್ಯಾಸ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಾತ್ರಕ್ಕೆ ಕಾರ್ಯಕ್ರಮ ನಿರೂಪಕರು ಹೇಳಿದಂತೆ ನಾನು ಮಾಲೀಕನಲ್ಲ. ಮುಂದೆ ನೀವು ಯಾರಾದರೂ ಗುರುತಿಸಿಕೊಂಡರೆ ಮಾಲೀಕನೆಂಬ ಅಹಂನಲ್ಲಿ ಮುಳುಗಬೇಡಿ ಎಂದು ಕಿವಿಮಾತು ಹೇಳಿದ ಅವರು, ರಂಗಾಯಣದಲ್ಲಿ ಒಮ್ಮೆ ರಾಜಕಾರಣಿಯೊಬ್ಬರನ್ನು ಕಾರ್ಯಕ್ರಮದ ಉದ್ಘಾಟನೆಗೆ ಕರೆದಿದ್ದರು. ಆಗ ಆ ರಾಜಕಾರಣಿ ಬರುವುದು ತಡವಾಗಿ, ನಾಟಕ ಪ್ರದರ್ಶನಕ್ಕೆ ವಿಳಂಬವಾಗಿದ್ದಕ್ಕೆ ಬೇಸರಗೊಂಡ ಹಿರಿಯ ರಂಗಕರ್ಮಿ ದಿ.ನ.ರತ್ನ ಅವರು, ಎದ್ದು ನಿಂತು ಆಯೋಜಕರ ನಿಲುವನ್ನು ಖಂಡಿಸಿದ್ದ ಏಕೈಕ ವ್ಯಕ್ತಿ. ಅಂತಹ ಆದರ್ಶ ವ್ಯಕ್ತಿಗಳ ಬಗ್ಗೆ ಇಂದಿನ ಯುವಸಮೂಹ ತಿಳಿದುಕೊಳ್ಳಬೇಕು ಎಂದರು.

ಮೈಸೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಮೈಸೂರು ಕಲಾಮಂದಿರ ಆವರಣದಲ್ಲಿ ಒಂದಿಲ್ಲೊಂದು ಹವ್ಯಾಸಿ ಸಂಘಟನೆಗಳಿಂದ ರಂಗಶಿಬಿರ, ಜಾನಪದ, ನಾಟಕಗಳ ಅಭಿನಯ ಸೇರಿದಂತೆ ಬೇರೆ ಕಲಾಪ್ರಕಾರಗಳ ಕಲಿಕಾ ಶಿಬಿರ ನಡೆಯುತ್ತಿರುವುದು ಸಂತೋಷದ ಸಂಗತಿ. ಈ ಆವರಣದಲ್ಲಿ ಯಾವುದೇ ಶಿಬಿರಗಳು ನಡೆದರೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಂತೋಷದಿಂದ ಪಾಲ್ಗೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು. ವೇದಿಕೆಯಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಸೇರಿದಂತೆ ಇತರೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶನಿವಾರ 8 ಫೆಬ್ರವರಿ 2025

ಸಮತೆ-ಮಮತೆ ಆಧಾರದಲ್ಲಿ ಎಲ್ಲಾ ವರ್ಗದವರನ್ನು ಜೋಡಿಸಿರುವುದು ಸಂವಿಧಾನ

ಕೆಪಿಸಿಸಿ ವಕ್ತಾರ ನಿಖಿತ್ ರಾಜ್ ಮೌರ್ಯ ಅಭಿಮತ



'ಸಂವಿಧಾನ ಒಂದು ವರ್ಗಕ್ಕೆ ಮೀಸಲ ?' ವಿಚಾರ ಮಂಡನೆ ಕಾರ್ಯಕ್ರಮದಲ್ಲಿ ಕೆಪಿಸಿಸಿ ವಕ್ತಾರ ನಿಖಿತ್ ರಾಜ್ ಮೌರ್ಯ ಮಾತನಾಡಿದರು.

ಮೈಸೂರು, ಫೆ.7(ಎಂಕೆ)- ಸಮತೆ-ಮಮತೆ ಆಧಾರದಲ್ಲಿ ಸಮಾಜದ ಎಲ್ಲಾ ವರ್ಗದವರನ್ನು ಜೋಡಿಸಿರುವುದು ಡಾ.ಬಿ.ಆರ್.ಅಂಬೇಡ್ಕರ್ ರಚಿತ ಭಾರತ ಸಂವಿಧಾನ ಎಂದು ಕೆಪಿಸಿಸಿ ವಕ್ತಾರ ನಿಖಿತ್ ರಾಜ್ ಮೌರ್ಯ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮಾನಿಕೇತನ ಕಲ್ಯಾಣ ಮಂಟಪದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ 'ಸಂವಿಧಾನ ಒಂದು ವರ್ಗಕ್ಕೆ ಮೀಸಲ ?' ವಿಚಾರ ಮಂಡನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಬೇರೆ ಬೇರೆ ಜಾತಿ-ಧರ್ಮದವರಾದರೂ ಒಂದೇ ವೇದಿಕೆ ಮೇಲೆ ಸಮಾನವಾಗಿ ಕುಳಿತಿರುವುದಕ್ಕೆ ಕಾರಣ ಭಾರತ ಸಂವಿಧಾನ ಎಂದರು.

78 ವರ್ಷದ ಹಿಂದೆ ಈ ದೇಶದ ಓರ್ವ ಹೆಣ್ಣು ಮಗಳು ಪುರುಷರಿಗೆ ಸರಿಸಮಾನವಾಗಿ ಕುಳಿತುಕೊಳ್ಳುವ ಕನಸು ಕಾಣುವುದಕ್ಕೆ ಸಾಧ್ಯವಿತ್ತ. ಅಡುಗೆ ಕೋಣೆಯಲ್ಲಿ ಹೊಗೆ ಕುಡಿಯುತ್ತಿದ್ದ ಹೆಣ್ಣು ಮಗಳು ಇವತ್ತು ಪುರುಷರಿಗೆ ಸರಿಸಮಾನವಾಗಿ, ನಾನು ಕೂಡ ಮಹಿಳಾ ನಾಯಕಿ ಎನ್ನುತ್ತಿರುವುದಕ್ಕೆ ಕಾರಣ ಮನು ಸಂವಿಧಾನವಲ್ಲ, ಅಂಬೇಡ್ಕರ್ ಬರೆದ ಭಾರತ ಸಂವಿಧಾನ. ಈ ಸಂವಿಧಾನ ಉಳಿದರೆ ಸಮಾನತೆ ಉಳಿಯಲಿದೆ ಎಂದರು.

ಈ ಸಮತೆ-ಮಮತೆಯ ಸಂವಿಧಾನ ಇಲ್ಲದೇ ಹೋದರೆ ಭಾರತ ಏನಾಗ ಬಹುದು ಎಂಬುದನ್ನು ಯೋಚನೆ ಮಾಡಬೇಕಿದೆ. ಜಾತಿಗಳ ಹೆಸರಿನಲ್ಲಿ, ಧರ್ಮಗಳ ಹೆಸರಿನಲ್ಲಿ ಈ ಸಮಾಜವನ್ನು ಹೊಡೆದು ಚಿಂದಿ ಚಿಂದಿ ಮಾಡಲು ಕೆಲ ಶಕ್ತಿಗಳು ಕಾಯುತ್ತಿವೆ. ಹಾಗೆಯೇ ಸಮತೆ-ಮಮತೆಯ ಆಧಾರದ ಮೇಲೆ ಈ ಸಮಾಜವನ್ನು ಜೋಡಿಸಬೇಕು ಎನ್ನುವ ಶಕ್ತಿಗಳು ಕೂಡ ಮತ್ತೊಂದು ಕಡೆ ಹಿಂದಿನ ಕಾಲದಿಂದಲೂ ಕೆಲಸ ಮಾಡುತ್ತಿವೆ. ಮನುಷ್ಯನಾಗಿ ಹುಟ್ಟಿದ ಮೇಲೆ ಕನಿಷ್ಟ ಪಕ್ಷ ಸಮಾನ ಗೌರವ ಸಿಗದೆ ಸಾವಿರಾರು ವರ್ಷಗಳ ಕಾಲ ನಮ್ಮ ಪೂರ್ವಿಕರು ಬದುಕಿದ್ದಾರೆ. ಇವತ್ತು ನಮ್ಮೆಲರಿಗೂ ಸಮಾನತೆ, ಸಮಾನ ಅವಕಾಶಗಳು ಸಿಕ್ಕಿರುವುದು ಭಾರತ ಸಂವಿಧಾನದಿಂದ ಎಂದು ತಿಳಿ ಹೇಳಿದರು.

ಭಗವಾನ್ ಬುದ್ಧ ಹೋರಾಟ ಮಾಡಿದ್ದು ಸಮಾನತೆಗೋಸ್ಕರ, ಭಗವಾನ್ ಮಹಾವೀರ ಹೋರಾಡಿದ್ದು ಕೂಡ ಸಮಾನತೆಗಾಗಿ. ಬಸವಣ್ಣ ನವರ ಹೋರಾಟ ಎಲ್ಲರಿಗೂ ಸಮಾನತೆ ಸಿಗಬೇಕು ಎನ್ನುವುದೇ ಆಗಿತ್ತು. ಹಾಗಾಗಿಯೇ ಬಸವಣ್ಣರ ಅನುಭವ ಮಂಟಪದಲ್ಲಿ ಓರ್ವ ಚಮ್ಮಾರ, ಕುಂಬಾರ ಕೂಡ ಶರಣರಾಗಿ ಬೆಳೆದರು. ನಾರಾಯಣ ಗುರು, ಕನಕದಾಸರು, ಮಹಾತ್ಮ ಗಾಂಧಿ, ಅಂಬೇಡ್ಕರ್ ಕಡೆಗೆ ಭಾರತ ಸಂವಿಧಾನದ ಆಶಯವೂ ಕೂಡ ಸಮಾನತೆಯಾಗಿದೆ. ಈ ಸಂವಿಧಾನವನ್ನು ನಿರಾಕರಿಸುವುದು ಅಥವಾ ಕಿತ್ತು ಹಾಕುವುದು ಎಂದರೆ, ಬುದ್ಧ, ಬಸವ, ನಾರಾಯಣ ಗುರು, ಕನಕದಾಸರು, ಸೂಫಿಗಳು, ಶರಣರು, ಮಹಾತ್ಮ ಗಾಂಧಿ, ಅಂಬೇಡ್ಕರ್ ಅವರ ಚಿಂತನೆಗಳನ್ನು ನಿರಾಕರಿಸುವುದು ಎಂದರ್ಥ ಎಂದು ಎಚ್ಚರಿಸಿದರು.

ಮೀಸಲಾತಿ ಎಂದರೆ ಕೆಲವರಿಗೆ, ಅಂಬೇಡ್ಕರ್ ಎಂದರೆ ಕೆಲ ಸಮುದಾಯಕ್ಕೆ ಮೀಸಲು ಎನ್ನುತ್ತಿದ್ದವರೂ ಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದಾರೆ. ಸಂವಿಧಾನದ ವಿರುದ್ಧ ಮಾತನಾಡುವವರೆ ಸಂವಿಧಾನ ಸೌಲಭ್ಯ ಪಡೆದಿದ್ದಾರೆ. ಈ ದೇಶದ ಎಲ್ಲಾ ವರ್ಗವನ್ನು ಸಮಾನತೆಯಿಂದ ಬದುಕಲು ಅವಕಾಶ ಮಾಡಿಕೊಟ್ಟಿರುವುದು. ದೇಶದ ಎಲ್ಲಾ ಜನತೆಯೂ ನೆಮ್ಮದಿಯಾಗಿ ಜೀವಿಸಲು ಅವಕಾಶ ಮಾಡಿಕೊಟ್ಟಿರುವುದು ಡಾ.ಬಿ.ಆರ್. ಅಂಬೇಡ್ಕರ್ ರಚಿತ ಭಾರತ ಸಂವಿಧಾನ.

- ಎಂ.ಕೆ.ಸೋಮಶೇಖರ್, ಮಾಜಿ ಶಾಸಕ

ಹೃದಯವಂತ ಜನನಾಯಕ ಸೋಮಣ್ಣ: ವಿಧಾನಸೌಧದ ಪಡಸಾಲೆಯ ಸುತ್ತಾಗೆದ್ದಿರುವ ನಿಮ್ಮೂರಿನ ಶಾಸಕರು ಕಾಣಿಸಲ್ಲ. ಬಹಳ ಕಡಿಮೆ ಅಂತರದಿಂದ ಸೋತಿರುವ ಸೋಮಣ್ಣ ಇವತ್ತಿಗೂ ಕೈ ತುಂಬಾ ಫೈಲ್‌ಗಳನ್ನಿಡು ಕಾಣಿಸುತ್ತಾರೆ. ಬಹಳಷ್ಟು ಜನ ಶಾಸಕರು, ಟ್ರಾನ್ಸ್‌ಫರ್ ಇನ್ನಿತರೆ ಸಂಬಂಧಿ ಫೈಲ್‌ಗಳನ್ನು ಹಿಡಿದುಕೊಂಡಿದ್ದರೆ, ಸೋಮಣ್ಣ ಅವರ ಕೈಯಲ್ಲಿ, ಕಾಯಿಲೆ ಬಿದ್ದಿರುವ ಈ ಕ್ಷೇತ್ರದಲ್ಲಿ ರೋಗಿಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಹಣ ಕೊಡಿಸುವ ರಾಶಿ ರಾಶಿ ಫೈಲ್‌ಗಳಿರುತ್ತವೆ. ಬಹುಶಃ ಇಡೀ ಕರ್ನಾಟಕ ರಾಜ್ಯದಲ್ಲಿ ನಮ್ಮ ಸರ್ಕಾರ ಬಂದಾಗಿನಿಂದಲೂ ಅತೀ ಹೆಚ್ಚು ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಹಣವನ್ನು ಕೊಡಿಸಿದಂತಹ ಹೃದಯವಂತ ಜನನಾಯಕ ಸೋಮಣ್ಣ ಎಂದು ಶ್ಲಾಘಿಸಿದರು.

ಮಾಜಿ ಮೇಯರ್‌ಗಳಾದ ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಕಾಂಗ್ರೆಸ್ ಮುಖಂಡರಾದ ರಾಮಸ್ವಾಮಿ, ಸುಬ್ರಹ್ಮಣ್ಯ, ಚಿಕ್ಕಣ್ಣ, ಶೋಭ, ಸುಶೀಲ ಕೇಶವಮೂರ್ತಿ, ರಾಧಾಮಣಿ, ಲೀಲಾ ಪಂಪಾಪತಿ, ಭವ್ಯ, ನಾಗರತ್ನ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ದಿ ಗ್ರೇಟ್ ವಾಲ್...!

ಕರ್ನಾಟಕ ರಾಜ್ಯದಲ್ಲಿ ಸಂವಿಧಾನದ ಪರವಾಗಿ ದಿ ಗ್ರೇಟ್ ವಾಲ್(ಗೋಡೆ) ಆಫ್ ಚೈನಾ ರೀತಿ ಗಟ್ಟಿಯಾಗಿ ನಿಂತಿರುವ ಏಕೈಕ ರಾಜಕಾರಣಿ ಸಿದ್ದರಾಮಯ್ಯ ಅವರನ್ನು ಹೇಗಾದರು ಹೊಡೆದುರುಳಿಸಬೇಕೆಂಬ ಪ್ರಯತ್ನಗಳೂ ನಡೆಯುತ್ತಲೇ ಇವೆ. ಮುಡಾ ಇನ್ನಿತರೆ ಆರೋಪಗಳು ಸಿದ್ದರಾಮಯ್ಯ ಅವರ ಮೇಲೆ ನಡೆಯುತ್ತಿರುವ ವೈಯಕ್ತಿಕ ದಾಳಿಯಲ್ಲ. ಅವರಲ್ಲಿನ ಚಿಂತನೆಗಳ ಮೇಲೆ ನಡೆಯುತ್ತಿರುವ ದಾಳಿ. ಸಮಾಜದ ಎಲ್ಲರಿಗೂ ಸಮಾನ ಅವಕಾಶ ಎನ್ನುತ್ತಾರಲ್ಲ. ಅದಕ್ಕಾಗಿ ಅವರನ್ನು ಹೇಗಾದರೂ ಸದೆಬಡಿಯುವ ಪ್ರಯತ್ನ ನಡೆಯುತ್ತಿದೆ. ಇದೇ ದಾಳಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಕುವೆಂಪು ಅವರ ಮೇಲೂ ನಡೆದಿತ್ತು.

- ನಿಖಿತಾ ರಾಜ್ ಮೌರ್ಯ, ಕೆಪಿಸಿಸಿ ವಕ್ತಾರ

ಕೆ.ಆರ್.ಆಸ್ಪತ್ರೆ ಬ್ಲಡ್ ಬ್ಯಾಂಕ್‌ನಲ್ಲಿ ರಕ್ತದಾನ ಶಿಬಿರ



ಮೈಸೂರು, ಫೆ. 7(ಆರ್‌ಕೆ)- ಮೈಸೂರಿನ ಕೆ.ಆರ್ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ನಲ್ಲಿ ಇಂದು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಕೆಆರ್ ಆಸ್ಪತ್ರೆಯ ನರ್ಸಿಂಗ್ ಕಾಲೇಜು ವತಿಯಿಂದ ಆಯೋಜಿಸಿದ್ದ ಶಿಬಿರವನ್ನು ಎಂಎಂಸಿಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಆರ್. ದಾಕ್ಷಾಯಿಣಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ರಕ್ತದಾನ ಮಹಾದಾನವಾಗಿದ್ದು, ಬೇರೆಯವರ ಪ್ರಾಣ ಉಳಿಸುವ ಪವಿತ್ರ ಕಾರ್ಯದಲ್ಲಿ ತೊಡಗಿರುವ ನರ್ಸಿಂಗ್ ವಿದ್ಯಾರ್ಥಿಗಳು ಸಮಾಜದ ಇತರ ಯುವಕರಿಗೆ ಮಾದರಿಯಾಗಿದ್ದಾರೆ ಎಂದರು. ರೋಗಿಗಳ ಶುಶ್ರೂಷೆ, ಪಾಲನಾ ವೃತ್ತಿಯಲ್ಲಿ ತೊಡಗಲು ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸುತ್ತಿರುವುದು ಶತಮಾನ ಪೂರೈಸಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಅಧೀನ ಆಸ್ಪತ್ರೆಗಳಿಗೆ ಹೆಮ್ಮೆ ಎನಿಸಿದೆ ಎಂದು ಅವರು ಮುಕ್ತಕಂಠದಿಂದ ಶ್ಲಾಘಿಸಿದರು.

ಇಂದಿನ ಶಿಬಿರದಲ್ಲಿ 69 ವಿದ್ಯಾರ್ಥಿಗಳು ಕೆಆರ್ ಆಸ್ಪತ್ರೆ ರಕ್ತನಿಧಿಗೆ ರಕ್ತದಾನ ಮಾಡಿದರು. ರಕ್ತನಿಧಿ ಅಧಿಕಾರಿ ಡಾ. ಕುಸುಮಾ, ನರ್ಸಿಂಗ್ ಕಾಲೇಜು ಪ್ರಾಂಶುಪಾಲ ನಂದಕಿಶೋರ್, ಚಂದ್ರಶೇಖರ್, ನರ್ಸಿಂಗ್, ಬಿಎಸ್ಸಿ ನರ್ಸಿಂಗ್ ಕಾಲೇಜು ಶಿಕ್ಷಕರು ಈ ಸಂದರ್ಭ ಉಪಸ್ಥಿತರಿದ್ದರು.

ಸಹಕಾರ ಸಂಘಗಳಿಗೆ ಲೆಕ್ಕಪರಿಶೋಧಕರ ಆಯ್ಕೆ ಮಾಹಿತಿ ನೀಡುವಂತೆ ಸೂಚನೆ

ಮೈಸೂರು,ಫೆ.7- ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 29-ಬಿ (8) ರನ್ವಯ ವಾರ್ಷಿಕ ಮಹಾಸಭೆಯಲ್ಲಿ ಸಹಕಾರ ಸಂಘದ 2024-25ನೇ ಲೆಕ್ಕ ಪರಿಶೋಧನೆಗೆ ಲೆಕ್ಕ ಪರಿಶೋಧಕರನ್ನು ಆಯ್ಕೆ ಮಾಡಿಕೊಂಡು ಕಚೇರಿಗೆ 7 ದಿನಗೊಳಗಾಗಿ ಸಲ್ಲಿಸಬೇಕಾಗಿರುತ್ತದೆ. ಇದುವರೆಗೂ ಈ ಮಾಹಿತಿಯನ್ನು ಮೈಸೂರು ಜಿಲ್ಲೆಯಲ್ಲಿನ ಒಟ್ಟು 2345 ಕಾರ್ಯನಿರತ ಸಹಕಾರ ಸಂಘಗಳ ಪೈಕಿ 1372 ಸಹಕಾರ ಸಂಘಗಳು ಸಲ್ಲಿಸಿದ್ದು ಇನ್ನೂ 973 ಸಹಕಾರ ಸಂಘಗಳು ಈ ಕಚೇರಿಗೆ ಸಲ್ಲಿಸಿರುವುದಿಲ್ಲ. ಅಂತಹ ಸಂಘಗಳು ಈ ಪ್ರಕಟಣೆಯ ಮುಂದಿನ 7 ದಿನಗಳಲ್ಲಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ತಪ್ಪಿದ್ದಲ್ಲಿ ಕಾನೂನಿನ ರೀತ್ಯಾ ಲೆಕ್ಕಪರಿಶೋಧನೆಗೆ ವ್ಯವಸ್ಥೆ ಮಾಡಲಾಗುವುದು ಎಂದು ಮೈಸೂರು ಜಿಲ್ಲೆಯ ಜಂಟಿ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಲಿತಮಹಲ್ ಪ್ಯಾಲೇಸ್ ಹೋಟೆಲು 'ತಾಜ್' ಒಡಲು ಸೇರುವುದು ಮರೀಚಿಕೆ



ಮೈಸೂರು, ಫೆ 7(ಆರ್‌ಕೆ)- ಕರ್ನಾಟಕ ರಾಜ್ಯ ಸರ್ಕಾರದ ಅಂಗ ಸಂಸ್ಥೆ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ (ಜೆಎಲ್‌ಆರ್) ಅಡಿ ಬರುವ ಮೈಸೂರಿನ ಪ್ರಸಿದ್ಧ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ 'ತಾಜ್ ಗ್ರೂಪ್' ಸೇರುವುದು ಮರೀಚಿಕೆಯಾಗಿದೆ.

ತಾಜ್ ಬ್ರಾಂಡ್ ಹೊಂದಿರುವ ಇಂಡಿಯನ್ ಹೋಟೆಲ್ ಕಂಪನಿ ಲಿಮಿಟೆಡ್ (ಐಹೆಚ್‌ಸಿಎಲ್) ಮೈಸೂರಲ್ಲಿ ಐಷಾರಾಮಿ ಹೋಟೆಲ್ ನಿರ್ವಹಿಸಲು ಡಿಎಂ ದಕ್ಷಿಣ ಭಾರತ ಆತಿಥ್ಯಗಾರರ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದವು ಎಂಜಿ ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ಸಂಕೀರ್ಣವನ್ನು ಒಳಗೊಂಡಿದೆ. ನಾಲ್ಕು ಖಂಡಗಳು, 12 ದೇಶಗಳ 50 ಸ್ಥಳಗಳಲ್ಲಿ 335ಕ್ಕೂ ಹೆಚ್ಚು ಹೋಟೆಲುಗಳನ್ನು ಹೊಂದಿರುವ ಭಾರತದ ಅತೀ ದೊಡ್ಡ ಆತಿಥ್ಯ ಸಮೂಹವಾದ ಐಹೆಚ್‌ಸಿಎಲ್, ಮೈಸೂರಿನಲ್ಲಿ ಐಷಾರಾಮಿ ಹೋಟೆಲ್ ನಿರ್ವಹಣೆ ಒಪ್ಪಂದಕ್ಕೆ ಸಹಿ ಹಾಕಿರುವುದಾಗಿ ಅಧಿಕೃತವಾಗಿ ಘೋಷಿಸಿರುವುದರಿಂದ ಸಾಂಸ್ಕೃತಿಕ ರಾಜಧಾನಿಗೆ ಪ್ರತಿಷ್ಠಿತ ತಾಜ್ ಬ್ರಾಂಡ್ ಪ್ರವೇಶಿಸುವುದು ಖಚಿತವಾಗಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ನಿರ್ದೇಶಕರು, ನಾವು ಕಾರ್ಯಾಚರಿಸುತ್ತಿರುವ ಸಂಕೀರ್ಣವು ಡಿಎಂ ಸೌತ್ ಇಂಡಿಯಾ ಹಾಸ್ಪಿಟಾಲಿಟಿ ಒಡೆತನದಲ್ಲಿದ್ದು, ಅವರು ಐಹೆಚ್‌ಸಿಎಲ್ ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ನಮ್ಮ ಒಡಂಬಡಿಕೆಯು ಮಾರ್ಚ್‌ನಲ್ಲಿ ಕೊನೆಗೊಳ್ಳಲಿದ್ದು, ನಂತರ ತಾಜ್ ಗ್ರೂಪ್ ಸ್ವಾಧೀನಪಡಿಸಿಕೊಳ್ಳಲಿದೆ. ಐದಾರು ತಿಂಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಹೊಸ ನಿರ್ವಹಣೆಯಾಗುವ ನಿರೀಕ್ಷೆ ಇದೆ ಎಂದರು.

ಲಲಿತ ಮಹಲ್ ಪ್ಯಾಲೇಸ್ ಒಪ್ಪಂದ ವಿಫಲವೇಕೆ?: ಐಹೆಚ್‌ಸಿಎಲ್, ಮೈಸೂರಿನ ಲಲಿತಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಒಳಗೊಳ್ಳಲು ಆಸಕ್ತಿ ತೋರಿತ್ತು ಎನ್ನಲಾಗಿದ್ದು, ಆದರೆ, ಜೆಎಲ್‌ಆರ್ ಹಲವು ಕ್ಲಿಷ್ಟಕರ ಷರತ್ತುಗಳನ್ನು ವಿಧಿಸಿದ್ದು, ಒಪ್ಪಂದ ಏರ್ಪಡದಿರಲು ಕಾರಣ ಎಂದು ಮೂಲಗಳು ತಿಳಿಸಿವೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಅಧ್ಯಕ್ಷ ಅನಿಲ್ ಚಿಕ್ಕಮಾದು, ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದ್ದು, ಹಲವು ಪ್ರತಿಷ್ಠಿತ ಖಾಸಗಿ ಹೋಟೆಲ್ ಮಾಲೀಕರು ಆಸಕ್ತಿ ತೋರಿ, ಟೆಂಡರ್‌ನಲ್ಲಿ ಪಾಲೊಂಡಿದ್ದಾರೆ. ಫೆಬ್ರವರಿ 18ರಂದು ಟೆಂಡರ್ ತೆರೆಯಲಾಗುವುದು ಎಂದರು.

ರಾಜ-ಮಹಾರಾಜರು ನಿರ್ಮಿಸಿದ ಈ ಐತಿಹಾಸಿಕ ಹೋಟೆಲ್ ಅನ್ನು ಯಾರು ನಿರ್ವಹಿಸಬೇಕೆಂಬುದು ಮುಂದೆ ನಿರ್ಧಾರವಾಗಲಿದೆ. ಲಲಿತ ಮಹಲ್ ಪ್ಯಾಲೇಸ್ ಹೋಟೆಲನ್ನು ತಾಜ್ ಗ್ರೂಪ್‌ಗೆ ಹಸ್ತಾಂತರಿಸಲು ಅಭ್ಯಂತರವೇನಿಲ್ಲ. ಅವರು ನಮ್ಮ ಷರತ್ತುಗಳಿಗೆ ಒಪ್ಪಿದರೆ ನಾವು ಅವರೊಂದಿಗೆ ಒಪ್ಪಂದಕ್ಕೆ ಸಿದ್ಧರಿದ್ದೇವೆ ಎಂದು ಅವರು ತಿಳಿಸಿದರು.

ಎಂ.ಕೆ.ಸೋಮಶೇಖರ್‌ಗೆ ಹುಟ್ಟುಹಬ್ಬದ ಶುಭಾಶಯ



ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹುಟ್ಟುಹಬ್ಬದ ಅಂಗವಾಗಿ ಅಶೋಕಪುರಂ ಆದಿಕರ್ನಾಟಕ ಮಹಾಸಂಸ್ಥೆ ವತಿಯಿಂದ ಶುಭಾಶಯ ಕೋರಿ, ಸನ್ಮಾನಿಸಲಾಯಿತು. ಈ ವೇಳೆ ಅಧ್ಯಕ್ಷ ಸಿದ್ದರಾಜು.ಪಿ (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಮುಖಂಡರಾದ ಆರ್.ಸಿ.ಮಹೇಶ್, ಸಿದ್ದೇಶ್, ರಾಜ್‌ಮೋಗ, ಹಿರಿಯರಾದ ಮಹಾಲಿಂಗು, ಷಣ್ಮುಗ, ವೆಂಕಟಸ್ವಾಮಿ, ಬಿಲ್ಲಯ್ಯ, ಸಿದ್ದರಾಜು, ಕೃಷ್ಣಮೂರ್ತಿ, ಮಂಜುನಾಥ್ ಉಪಸ್ಥಿತರಿದ್ದಾರೆ.

ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಸ್ತನ ಆರೈಕೆ ಕ್ಲಿನಿಕ್ ಆರಂಭ



ಮೈಸೂರು, ಫೆ.7(ಜಿಎ)-ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಮಹಿಳಾ ತಜ್ಞರ ನೇತೃತ್ವದಲ್ಲಿ ಸ್ತನ ಆರೈಕೆ ಕ್ಲಿನಿಕ್ ಆರಂಭಿಸಲಾಗಿದೆ ಎಂದು ಆಸ್ಪತ್ರೆಯ ಮುಖ್ಯಸ್ಥ ಭರತೇಶ್ ರೆಡ್ಡಿ ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಕ್ಯಾನ್ಸರ್ ಅನಾರೋಗ್ಯವನ್ನು ಅಧಿಸೂಚಿತ ರೋಗ ಎಂದು ಘೋಷಿಸಬೇಕು. ಈ ರೀತಿ ಮಾಡುವುದರಿಂದಾಗಿ ಪ್ರತಿ ಕ್ಯಾನ್ಸರ್ ಪ್ರಕರಣದ ದಾಖಲೀಕರಣ, ಸಹಾನುಭೂತಿಯ ಆರೈಕೆ ಸಾಧ್ಯ. ಹೀಗಾಗಿ ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಮಾಡಲು ಅಪೊಲೊ ಆಸ್ಪತ್ರೆ ವತಿಯಿಂದ ವಿಶ್ವ ಕ್ಯಾನ್ಸರ್ ದಿನದ ಹಿನ್ನೆಲೆಯಲ್ಲಿ ಡಿಜಿಟಲ್ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಈ ರೀತಿ ಮಾಡಿದಲ್ಲಿ ಕ್ಯಾನ್ಸರ್ ಸಮೀಕ್ಷಾ ಮಾಹಿತಿ ದೊರೆಯುತ್ತದೆ. ಕಡ್ಡಾಯ ವರದಿಯಿಂದಾಗಿ ಕ್ಯಾನ್ಸರ್ ಮಾದರಿಗಳ ನಿಖರ ಅಂಕಿ ಅಂಶ ದೊರೆಯುತ್ತದೆ ಅಲ್ಲದೆ, ರೋಗಿಗೆ ಪ್ರಾಮುಖ್ಯತೆ ದೊರೆಯತ್ತದೆ. ಜೊತೆಗೆ ರೋಗದ ಮಾದರಿಗಳನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಕ್ಯಾನ್ಸರ್ ಪ್ರವೇತ್ತಿಗಳು, ಫಲಿತಾಂಶಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದೇ ವೇಳೆ ಅಪೊಲೊ ಕ್ಯಾನ್ಸರ್ ಕೇಂದ್ರಗಳು ಸಮಗ್ರ ಕ್ಯಾನ್ಸರ್ ಆರೈಕೆ ಒದಗಿಸುತ್ತವೆ ಎಂದು ಮಾಹಿತಿ ನೀಡಿದರು.

ನಂತರ ಡಾ.ರಮ್ಯ ಮಾತನಾಡಿ, ಸ್ತನ ಕ್ಯಾನ್ಸರ್ ಮಹಿಳೆ ಹಾಗೂ ಪುರುಷ ಇಬ್ಬರಲ್ಲೂ ಕಂಡು ಬರುತ್ತದೆ. ಸ್ತನದಲ್ಲಿ ನೋವು ರಹಿತ ಗಟ್ಟಿ ಇರುವುದು ಪ್ರಮುಖ ಗುಣ ಲಕ್ಷಣವಾಗಿದ್ದು, ಭಾರತದಲ್ಲಿ ಶೇ.30 ರಷ್ಟು ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಹಿಂಜರಿಕೆಯಿಂದ ಬಹುತೇಕರು ಕೊನೆ ಹಂತದಲ್ಲಿ ಚಿಕಿತ್ಸೆಗೆ ಬರುತ್ತಾರೆ. ಆದರ ಬದಲೂ ಲಕ್ಷಣಗಳು ಪತ್ತೆಯಾದ ತಕ್ಷಣ ವೈದ್ಯರ ಸಲಹೆ ಪಡೆಯುವುದು ಮುಖ್ಯ ಎಂದರು.

ಈ ವೇಳೆ ಡಾ.ಚೈತ್ರಾ, ಡಾ. ಅನಿತಾ, ಡಾ.ಡಿ.ಪರಮೇಶ್ವರ್ ನಾಯಕ್, ಡಾ.ರಂಜಿತಾ, ಡಾ.ಹೇಮಾ ಉಪಸ್ಥಿತರಿದ್ದರು.

ಖೋ ಖೋ ವಿಶ್ವಕಪ್ ಪಂದ್ಯಾವಳಿ ವಿಜೇತ ಕುರುಬೂರಿನ ಚೈತ್ರ, ಮಂಡ್ಯದ ಗೌತಮ್‌ಗೆ ಅರ್ಥಪೂರ್ಣ ಅಭಿನಂದನೆ



ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುರುಬೂರಿನ ಬಿ.ಚೈತ್ರ ಹಾಗೂ ಮಂಡ್ಯದ ಎಂ.ಕೆ.ಗೌತಮ್ ಅವರನ್ನು ಅಭಿನಂದಿಸಲಾಯಿತು. ಹಿರಿಯ ಖೋ ಖೋ ಆಟಗಾರ್ತಿ ಶೋಭಾ ನಾರಾಯಣ್, ಡಾ.ಸಿ.ಕೃಷ್ಣ, ಕುರುಬೂರು ಶಾಂತಕುಮಾರ್, ಡಾ.ಉಷಾ ಹೆಗ್ಗಡೆ, ಮಡ್ಡಿಕೆರೆ ಗೋಪಾಲ್, ಡಾ.ಹೆಳವರಹುಂಡಿ ಸಿದ್ದಪ್ಪ, ಎಂ.ಚಂದ್ರಶೇಖರ್ ಇತರರಿದ್ದಾರೆ.

ಹಾರ ತುರಾಯಿ ಬಿಟ್ಟು ನಗದು ಕಾಣಿಕೆ ನೀಡಿ ಸನ್ಮಾನ

ಮೈಸೂರು, ಫೆ.7(ಜಿಎ)-ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿ, ವಿಶ್ವಕಪ್ ಗೆಲ್ಲಲು ಪ್ರಮುಖ ಪಾತ್ರ ವಹಿಸಿದ್ದ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಕುರುಬೂರು ಗ್ರಾಮದ ಬಿ.ಚೈತ್ರ ಹಾಗೂ ಮಂಡ್ಯದ ಎಂ.ಕೆ.ಗೌತಮ್ ಅವರನ್ನು ಮೈಸೂರಲ್ಲಿ ಅರ್ಥಪೂರ್ಣವಾಗಿ ಅಭಿನಂದಿಸಲಾಯಿತು.

ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕುರುಬೂರಿನ ಬಿ.ಚೈತ್ರ ಹಾಗೂ ಮಂಡ್ಯದ ಎಂ.ಕೆ.ಗೌತಮ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಯಾರು ಹಾರ, ತುರಾಯಿ ಮತ್ತು ಕಾಣಿಕೆ ನೀಡದೆ ಕ್ರೀಡೆಗೆ ಅನುಕೂಲವಾಗುವಂತೆ ನಗದು ಕಾಣಿಕೆ ನೀಡುವಂತೆ ಕೋರಲಾಗಿತ್ತು. ಅದರಂತೆ ವಿವಿಧ ಕ್ರೀಡಾ ಅಸೋಸಿಯೇಷನ್, ಸಂಘ-ಸಂಸ್ಥೆ, ಕ್ರೀಡಾಭಿಮಾನಿಗಳು ನಗದು ನೀಡುವ ಮೂಲಕ ಅಭಿನಂದಿಸಿದರು.

ಈ ವೇಳೆ ಹಿರಿಯ ಖೋ ಖೋ ಆಟಗಾರ್ತಿ, ಅರ್ಜುನ ಕ್ರೀಡಾ ಪ್ರಶಸ್ತಿ ಪುರಸ್ಕೃತರಾದ ಶೋಭಾ ನಾರಾಯಣ್ ಮಾತನಾಡಿ, ಕೇಂದ್ರ ಸರ್ಕಾರ ಖೋ ಖೋ ಆಟವನ್ನು ಗುರುತಿಸಿ ಪ್ರೋತ್ಸಾಹಿಸುವುದರೊಂದಿಗೆ ಆಟಗಾರರಿಗೆ ಅರ್ಜುನ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಅದೇ ಮಾದರಿಯಲ್ಲಿ ರಾಜ್ಯ ಸರ್ಕಾರವು ಕೂಡ ಖೋ ಖೋ ಆಟವನ್ನು ಬೆಂಬಲಿಸಿ ಪ್ರೋತ್ಸಾಹಿಸಬೇಕು. ರಾಜ್ಯ ಸರ್ಕಾರ ಖೋ ಖೋ ಆಟವನ್ನು ಅಂತಾರಾಷ್ಟ್ರೀಯ ಕ್ರೀಡೆ ಎಂದು ಪರಿಗಣಿಸಿ ಖೋ ಖೋ ಆಟಗಾರರಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕು ಎಂದರು.

ರಾಜ್ಯ ಸರ್ಕಾರ ಈ ಇಬ್ಬರು ಕ್ರೀಡಾಪಟುಗಳಿಗೆ ನೀಡಿರುವ ನಗದು ಬಹುಮಾನದ ಬಗ್ಗೆ ಈಗಾಗಲೇ ಸಾಕಷ್ಟು ಹೋರಾಟಗಳು ನಡೆಯುತ್ತಿದೆ. ಅವರೊಟ್ಟಿಗೆ ನಾವು ಇದ್ದೇವೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಈ ಸಂಬಂಧ ಭೇಟಿ ಮಾಡುತ್ತೇವೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ.ಕೃಷ್ಣ ಮಾತನಾಡಿ, ಖೋ ಖೋ ಮಹಾರಾಷ್ಟ್ರದಲ್ಲಿ ಹುಟ್ಟಿಕೊಂಡಿರುವ ಪ್ರಸಿದ್ಧ ಕೀಡೆಯಾಗಿದೆ. ಖೋ ಖೋ ದೇಸಿ ಕ್ರೀಡೆಯೂ ಆಗಿದ್ದು, ಮಹಾಭಾರತದ ಕಾಲದಿಂದಲೂ ಈ ಕ್ರೀಡೆ ಇತ್ತು ಎಂಬುದಕ್ಕೆ ಕುರುಹುಗಳು ಸಿಕ್ಕಿವೆ. ಸಾಕಷ್ಟು ವರ್ಷಗಳಿಂದ ಈ ಆಟವನ್ನು ಉಳಿಸಿಕೊಂಡು ಬರಲಾಗಿದೆ. ಈ ಕ್ರೀಡೆಗೆ ಸರ್ದಾರ್ ವಲ್ಲಬಾಯಿ ಪಟೇಲ್, ಗೋಖಲೆ ಸೇರಿದಂತೆ ಸಾಕಷ್ಟು ಮಹನೀಯರು ಹಿಂದಿನಿಂದಲೂ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ಎಂದು ತಿಳಿಸಿದರು.

ಖೋ ಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ಚೈತ್ರ ಹಾಗೂ ಗೌತಮ್ ಅವರು ಭಾಗವಹಿಸಿ ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಚೈತ್ರ ಅವರ ಗುರು ಮಂಜುನಾಥ್ ಅವರು ಮೂಲತಃ ದೈಹಿಕ ಶಿಕ್ಷಕರಲ್ಲ ಹಾಗೂ ಕ್ರೀಡಾಪಟುವೂ ಅಲ್ಲ. ಅವರು ಗಣಿತದ ಶಿಕ್ಷಕರು. ಮಂಜುನಾಥ್ ಅವರು ದೈಹಿಕ ಶಿಕ್ಷಕರಿಗೆ ಮಾದರಿಯಾಗಿದ್ದಾರೆ. ಒಬ್ಬ ಶಿಕ್ಷಕ ಸಮಾಜವನ್ನು ಹೇಗೆ ಪರಿವರ್ತಿಸಬಹುದು ಎಂಬುದಕ್ಕೆ ಮಂಜುನಾಥ್ ಸಾಕ್ಷಿಯಾಗಿದ್ದಾರೆ ಎಂದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕುರುಬೂರು ಗ್ರಾಮದಲ್ಲಿ ಸುಮಾರು 80ಕ್ಕೂ ಹೆಚ್ಚು ಮಕ್ಕಳು ಖೋ ಖೋ ಕ್ರೀಡೆಯನ್ನು ಅಭ್ಯಾಸ ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್‌ನಲ್ಲೇ ತಲೀನರಾಗುತ್ತಿದ್ದಾರೆ. ಆದರೆ ಕುರುಬೂರಿನಲ್ಲಿ ಖೋ ಖೋ ಕ್ರೀಡೆಯನ್ನು ಅಭ್ಯಾಸ ಮಾಡುವ ಮೂಲಕ ಮೊಬೈಲ್‌ನಿಂದ ಅಂತರ ಕಾಯ್ದುಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಭಿನಂದನೆ ಸ್ವೀಕರಿಸಿದ ಖೋ ಖೋ ಕ್ರೀಡಾಪಟುಗಳಾದ ಬಿ.ಚೈತ್ರಾ ಹಾಗೂ ಎಂ.ಕೆ.ಗೌತಮ್ ತಮ್ಮ ಗೆಲುವಿಗೆ ಶ್ರಮಿಸಿದ ಪ್ರತಿಯೊಬ್ಬರಿಗೂ ಕೃತಜ್ಞತಾ ಪೂರ್ವಕವಾಗಿ ಧನ್ಯವಾದ ತಿಳಿಸಿದರು.

ಈ ವೇಳೆ ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಇಬ್ಬರಿಗೂ ಕನ್ನಡ ಅಂಕಿಯುಳ್ಳ ಗಡಿಯಾರ ನೀಡಿ ಅಭಿನಂದಿಸಿದ್ದು, ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಮೌಂಟ್ ಎವರೆಸ್ಟ್ ಶಿಖರ ಏರಿದ ಕರ್ನಾಟಕದ ಮಹಿಳೆ ಡಾ.ಉಷಾ ಹೆಗ್ಗಡೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಚಿನ್ನದ ಪದಕ ಪಡೆದ ಸಮೀಕ್ಷಾಳಿಗೆ ಅಭಿನಂದನೆ



ನೇಪಾಳದಲ್ಲಿ ನಡೆದ ಅಂತರರಾಷ್ಟ್ರೀಯ ಯೂತ್ ಸ್ಪೋರ್ಟ್ಸ್ ಚಾಂಪಿಯನ್‌ನಲ್ಲಿ ಚಿನ್ನದ ಪದಕ ಪಡೆದ ಸಮೀಕ್ಷಾಳನ್ನು ಸವಿತಾ ಸವಿತಾ ಸಮಾಜದ ಮುಖಂಡರು ಅಭಿನಂದಿಸಿದರು.

ಮೈಸೂರು, ಫೆ.7(ಬಿಎಲ್‌ಯು)- ಮೈಸೂರಿನ ಕೇಂದ್ರಿಯ ವಿದ್ಯಾಲಯದಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಂ.ಸಮೀಕ್ಷಾ ನೇಪಾಳದಲ್ಲಿ ನಡೆದ ಅಂತರಾಷ್ಟ್ರೀಯ ಯೂತ್ ಸ್ಪೋರ್ಟ್ಸ್ ಚಾಂಪಿಯನ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾಳೆ. ಈಕೆ ಸವಿತಾ ಸಮಾಜದ ಪ್ರೀತಿ ಮತ್ತು ಮಧುಚಂದ್ರ ದಂಪತಿ ಪುತ್ರಿ. ಮೈಸೂರಿನ ಜಿಲ್ಲಾ ಸವಿತಾ ಸಮಾಜದವರು ಪ್ರಶಸ್ತಿ ಪುರಸ್ಕೃತೆ ಸಮೀಕ್ಷಾಳನ್ನು ಗೌರವಿಸಿದರು. ಈ ವೇಳೆ ಸಮಾಜದ ಎನ್.ಆರ್.ನಾಗೇಶ್, ನರಸೀಪುರದ ನಾಗೇಂದ್ರ, ಬನ್ನೂರಿನ ಮುರುಳೀಧರ, ಕೆ.ಆರ್.ನಗರದ ಭಾಸ್ಕರ್, ರಾಜೇಶ್, ಮಂಜು, ನಾರಾಯಣ, ನಟರಾಜ್, ರಾಮು, ರಾಜುರೆಡ್ಡಿ, ಸೂರಿ, ಕಿಶೋರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಜೊತೆಗೆ ತರಬೇತಿದಾರ ಮಾಸ್ಟರ್ ಡಿವಿಎಸ್ ಪ್ರತಾಪ್ ಬಾಬು ಹಾಜರಿದ್ದರು.

ಹೇಮಾವತಿ ನದಿ ದಂಡೆಯಲ್ಲಿ ವೈಭವದ ಬ್ರಹ್ಮ ರಥೋತ್ಸವ

ಶ್ರೀ ಕಲ್ಯಾಣ ವೆಂಕಟರಮಣಸ್ವಾಮಿಯ ದರ್ಶನ ಪಡೆದ ಸಾವಿರಾರು ಭಕ್ತರು



ಕೆ.ಆರ್.ಪೇಟೆ ತಾಲೂಕಿನ ಸುಪ್ರಸಿದ್ಧ ಹೇಮಗಿರಿಯ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯವರ ಬ್ರಹ್ಮರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ, ಫೆ.7– ಪವಿತ್ರ ಹೇಮಾವತಿ ನದಿ ದಂಡೆಯಲ್ಲಿರುವ ತಾಲೂಕಿನ ಸುಪ್ರಸಿದ್ಧ ಹೇಮಗಿರಿಯ ಶ್ರೀ ಕಲ್ಯಾಣ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವವು ರಥ ಸಪ್ತಮಿಯ ಪವಿತ್ರ ದಿನದಂದು ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಶಾಸಕ ಹೆಚ್.ಟಿ ಮಂಜು ಮತ್ತು ತಹಸೀಲ್ದಾರ್ ಡಾ.ಎಸ್.ಯು.ಅಶೋಕ್ ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಶಾಸಕ ಹೆಚ್.ಟಿ. ಮಂಜು ಜಾತ್ರೆ, ರಥೋತ್ಸವಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಹಬ್ಬದ ಸಂಭ್ರಮದಲ್ಲಿ ಎಲ್ಲರೂ ಒಂದಾಗಿ ಭಾಗವಹಿಸುವುದರಿಂದ ಸ್ನೇಹ ಸಹಬಾಳ್ವೆಯು ಹೆಚ್ಚಾಗುವ ಮೂಲಕ ನೆಮ್ಮದಿಯ ಜೀವನಕ್ಕೆ ನಾಂದಿಯಾಗಲಿದೆ. ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದರೆ ಹಬ್ಬ ಹರಿದಿನ, ಜಾತ್ರೆ ಉತ್ಸವಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ನಮ್ಮ ತಾಲೂಕಿನ ಹೇಮಗಿರಿ ಶ್ರೀ ಕ್ಷೇತ್ರದಲ್ಲಿ ನಡೆಯುವ ಭಾರಿ ದನಗಳ ಜಾತ್ರೆಯು ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರುವಾಸಿಯಾದ ಜಾತ್ರೆಯಾಗಿದೆ. ಕರ್ನಾಟಕ, ಕೇರಳ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಿಂದ ರಾಸುಗಳು ಬರುತ್ತವೆ. ಆದರೆ ಈ ಭಾರಿ ಜಾನುವಾರುಗಳಿಗೆ ಗಂಟು ರೋಗ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಸುಗಳನ್ನು ಜಾತ್ರೆಗೆ ಕರೆತರಬಾರದು ಎಂದು ಜಿಲ್ಲಾಡಳಿತ ನಿರ್ಬಂಧ ಹೇರಿತ್ತು. ಆದರೆ ರೈತರು ಜಿಲ್ಲಾಡಳಿತಕ್ಕೆ ಸೆಡ್ಡು ಹೊಡೆದು ತಮ್ಮ ಸಾಂಪ್ರದಾಯಿಕ ರಾಸುಗಳ ಜಾತ್ರೆಗೆ ಹೋಗುತ್ತೇವೆ ಎಂದು ಜಾತ್ರೆಗೆ ತಮ್ಮ ಜಾನುವಾರುಗಳನ್ನು ತಂದು ಕಟ್ಟುವ ಮೂಲಕ ಜಾತ್ರೆಯನ್ನು ಯಶಸ್ವಿಗೊಳಿಸಿದ್ದಾರೆ ಎಂದು ಅವರು ಹೇಳಿದರು.

ಹೇಮಗಿರಿ ಬೆಟ್ಟದ ಮೇಲೆ ನೆಲೆಸಿರುವ ಶ್ರೀ ರಂಗನಾಥಸ್ವಾಮಿಯ ದರ್ಶನ ಪಡೆದ ಭಕ್ತರು ಧನ್ಯರಾದರು. ಈ ಬಾರಿ ರಾಸುಗಳ ಜಾತ್ರೆಗೆ ತಾಲೂಕು ಆಡಳಿತ ಸೂಕ್ತ ಮೂಲ ಸೌಕರ್ಯಗಳನ್ನು ಮಾಡಿತ್ತು. ರೈತರು ಸಾವಿರಾರು ಸಂಖ್ಯೆಯಲ್ಲಿ ತಮ್ಮ ರಾಸುಗಳನ್ನು ಕರೆತಂದು ಸಾಂಪ್ರದಾಯಿಕ ದನಗಳ ಜಾತ್ರೆಯ ಹಿರಿಮೆಯನ್ನು ಹೆಚ್ಚಿಸಿದರು.

ಜಾತ್ರಾ ಮಹೋತ್ಸವಕ್ಕೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವೃತ್ತ ನಿರೀಕ್ಷಕ ಆನಂದೇಗೌಡ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಶುಲ್ಕ ವಿನಾಯಿತಿ ರದ್ದು, ಎಪಿಎಂಸಿ ಸದೃಢಕ್ಕೆ ಕ್ರಮ

ಸಚಿವ ಶಿವಾನಂದ ಪಾಟೀಲ ಭರವಸೆ



ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಶಿವಾನಂದ ಪಾಟೀಲ ಮಾತನಾಡಿದರು.

ಮಂಡ್ಯ, ಫೆ.7– ಆಹಾರ ಸಂಸ್ಕರಣಾ ಘಟಕಗಳು ಸೇರಿದಂತೆ ಹಲವು ಉದ್ದಿಮೆಗಳಿಗೆ ನೀಡಿರುವ ಮಾರುಕಟ್ಟೆ ಶುಲ್ಕ ವಿನಾಯಿತಿಯ ಅವಧಿ ಮುಗಿದಿದ್ದರೆ ಮತ್ತೆ ವಿಸ್ತರಣೆ ಮಾಡುವುದು ಬೇಡ ಎಂದು ನಿರ್ದೇಶನ ನೀಡಿರುವ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಎಪಿಎಂಸಿಗಳನ್ನು ಸದೃಢಗೊಳಿಸಲು ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜಿಲ್ಲೆಯ ಎಲ್ಲಾ ಎಪಿಎಂಸಿಗಳ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಎಪಿಎಂಸಿಗಳನ್ನು ಸದೃಢಗೊಳಿಸಲು ಕಠಿಣ ಕ್ರಮ ಅನಿವಾರ್ಯ. ಮಾರುಕಟ್ಟೆ ಶುಲ್ಕ ವಿನಾಯಿತಿಯನ್ನು ಯಾವ ಯಾವ ಸ್ವರೂಪದ ವಿಮೆಗಳಿಗೆ ನೀಡಲಾಗಿದೆ. ಇದರಿಂದ ಎಪಿಎಂಸಿಗೆ ವಾರ್ಷಿಕ ಎಷ್ಟು ನಷ್ಟ ಉಂಟಾಗುತ್ತಿದೆ ಎಂಬ ಬಗ್ಗೆ ಸಮೀಕ್ಷೆ ಮಾಡಿ ವರದಿ ಸಿದ್ದಪಡಿಸಿ ಎಂದು ಸೂಚಿಸಿದರು.

ಕೈಗಾರಿಕಾ ನೀತಿ ರೂಪಿಸುವ ವೇಳೆ ಆಹಾರ ಸಂಸ್ಕರಣಾ ಘಟಕಗಳು ರೈತರಿಂದ ನೇರವಾಗಿ ಕೃಷಿ ಉತ್ಪನ್ನ ಖರೀದಿಗೆ ಅನುಮತಿ ನೀಡಿರಬಹುದು. ಇದರಿಂದ ಅವರಿಗೆ ಎಪಿಎಂಸಿ ಶುಲ್ಕದಲ್ಲಿ ವಿನಾಯಿತಿ ಸಿಗಲಿದೆ. ಆದರೆ ಈ ವಿನಾಯಿತಿ ಅವಧಿ ಮುಗಿದ ನಂತರ ಮತ್ತೆ ವಿಸ್ತರಣೆ ಮಾಡಬಾರದು. ಜಿಲ್ಲೆಯ ಒಂದು ಆಹಾರ ಸಂಸ್ಕರಣಾ ಘಟಕ್ಕೆ ನೀಡಿರುವ ವಿನಾಯಿತಿಯಿಂದ ಜಿಲ್ಲೆಯ ಎಪಿಎಂಸಿಗೆ ವಾರ್ಷಿಕ 21 ಲಕ್ಷ ರೂ. ಆದಾಯ ತಪ್ಪಿದರೆ ಇಡೀ ರಾಜ್ಯದ ಎಲ್ಲ ಎಪಿಎಂಸಿಗಳಿಗೆ ಈ ರೀತಿ ಎಷ್ಟು ಆದಾಯ ಕೈ ತಪ್ಪಬಹುದು ಎಂಬ ಅಂದಾಜು ಮಾಡಿ ಎಂದು ಸಚಿವರು ಹೇಳಿದರು.

ಆಹಾರ ಸಂಸ್ಕರಣಾ ಘಟಕಗಳಿಗೆ ನಿಗದಿತ ಪ್ರಮಾಣಕ್ಕೆ ಮಾತ್ರ ಮಾರುಕಟ್ಟೆ ಶುಲ್ಕ ವಿನಾಯಿತಿ ನೀಡಲಾಗಿರುತ್ತದೆ. ಸರ್ಕಾರ ನೀಡಿರುವ ಈ ಸೌಲಭ್ಯ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಗಳಿವೆ. ಆದ್ದರಿಂದ ಈ ಘಟಕಗಳು ಬಳಕೆ ಮಾಡುವ ವಿದ್ಯುತ್ ಪ್ರಮಾಣ ಮತ್ತು ಜಿಎಸ್‌ಟಿ ಪಾವತಿಯ ದಾಖಲೆಗಳನ್ನು ಪರಿಶೀಲನೆ ಮಾಡಬೇಕು. ದುರ್ಬಳಕೆಯಾಗಿದ್ದರೆ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಬಹುತೇಕ ಎಪಿಎಂಸಿಗಳಲ್ಲಿ ಗೋದಾಮುಗಳು ಖಾಲಿ ಇದ್ದರೂ ಅವುಗಳನ್ನು ಬಾಡಿಗೆ ಕೊಡಲು ನಿರ್ಲಕ್ಷ್ಯ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಕೆಲವು ಕಡೆ ಬಾಡಿಗೆ ಕೊಟ್ಟಿದ್ದರೂ, ಈ ಮೊತ್ತ ಗೋದಾಮುಗಳ ಸುಣ್ಣ–ಬಣ್ಣಕ್ಕೂ ಆಗುತ್ತಿಲ್ಲ. ಕಾರ್ಯದರ್ಶಿಗಳು ಇದನ್ನು ಆದ್ಯತೆ ಮೇಲೆ ಪರಿಗಣಿಸಿ ಖಾಲಿ ಇರುವ ಗೋದಾಮುಗಳನ್ನು ಬಾಡಿಗೆ ಕೊಡಲು ಕ್ರಮ ಕೈಗೊಳ್ಳಬೇಕು. ದುಸ್ಥಿತಿಯಲ್ಲಿರುವ ಗೋದಾಮುಗಳನ್ನು ನೆಲಸಮ ಮಾಡಿ ಈ ನಿವೇಶನವನ್ನು ಯಾವ ರೀತಿ ಬಳಕೆ ಮಾಡಿಕೊಳ್ಳಬಹುದು ಎಂಬ ಬಗ್ಗೆ ಯೋಜನೆ ರೂಪಿಸಿ ಎಂದು ಸಲಹೆ ಮಾಡಿದರು.


ರಾಗಿ ಖರೀದಿ ಏಜನ್ಸಿ ಎಪಿಎಂಸಿ ಅಲ್ಲದಿರಬಹುದು. ಆದರೆ ನೀವೂ ಸಹ ಖರೀದಿ ಪ್ರಕ್ರಿಯೆಯಲ್ಲಿ ಭಾಗಿಯಾಗಿರುತ್ತೀರಿ, ಆದ್ದರಿಂದ ಕಳಪೆ ಗುಣಮಟ್ಟದ ರಾಗಿಯನ್ನು ಯಾವುದೇ ಕಾರಣಕ್ಕೂ ಖರೀದಿ ಮಾಡಬೇಡಿ. ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲನೆ ಮಾಡಿ ಎಂದು ಹೇಳಿದರು.

ಶಾಸಕ ರವಿಕುಮಾರ್, ಕೃಷಿ ಮಾರುಕಟ್ಟೆ ಇಲಾಖೆ ನಿರ್ದೇಶಕ ಶಿವಾನಂದ ಕಾಪಸೆ, ಹೆಚ್ಚುವರಿ ನಿರ್ದೇಶಕ (ಆಡಳಿತ) ನಜೀಬುಲ್ಲಾಖಾನ್, ಜಿಲ್ಲೆಯ ಎಲ್ಲ ಎಪಿಎಂಸಿಗಳ ಕಾರ್ಯದರ್ಶಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮದ್ದೂರು ಕಾರ್ಯದರ್ಶಿಗೆ ಮೆಚ್ಚುಗೆ

ಮದ್ದೂರು ಎಪಿಎಂಸಿ ಕಾರ್ಯದರ್ಶಿ ಲತಾ ಅವರ ವರದಿ ಮತ್ತು ಮಾಹಿತಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು, ಇದೇ ರೀತಿ ವರದಿ ಸಿದ್ದಪಡಿಸುವುದು ಸೂಕ್ತ ಎಂದು ಹೇಳಿದರು. ನಿಗದಿತ ನಮೂನೆಯಲ್ಲಿ ವರದಿ ಸಿದ್ದಪಡಿಸಿದರೆ ಅನುಕೂಲ. ಮಾಹಿತಿಯಲ್ಲಿ ಶೇಕಡಾವಾರು ಇರಲಿ ಎಂದು ಹೇಳಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಕಾರು ಬೆಂಕಿಗಾಹುತಿ



ಮದ್ದೂರು, ಫೆ.7– ಪಟ್ಟಣದ ಬೆಂಗಳೂರು–ಮೈಸೂರು ವ್ಯಾಪ್ತಿಯ ಎಕ್ಸ್‌ಪ್ರೆಸ್ ವೇಯಲ್ಲಿ ಕಾರಿನಲ್ಲಿ (ಡಿಸೇಲ್ ಕಾರು) ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿಗೆ ಆಹುತಿಯಾಗಿದ್ದು, ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ. ಮೈಸೂರು ಮೂಲದ ಸೆಸ್ಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮನೋಹರ್ ಅವರಿಗೆ ಸೇರಿದ್ದಕಾರಾಗಿದ್ದು, ಕಾರ್ಯನಿಮಿತ್ತ ಶುಕ್ರವಾರ ಮೈಸೂರಿನಿಂದ ಬೆಂಗಳೂರಿಗೆ ಕಾರಿನಲ್ಲಿ ಹೋಗುವ ಸಂದರ್ಭದಲ್ಲಿ ಮಾರ್ಗಮಧ್ಯೆ ಪಟ್ಟಣದ ಮದ್ದೂರಮ್ಮ ದೇಗುಲದ ಸಮೀಪದ ಎಕ್ಸ್‌ಪ್ರೆಸ್ ವೇನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಕಾರಿನಲ್ಲಿದ್ದ ಮನೋಹರ್ ಮತ್ತು ಕುಟುಂಬದ ಕೆಲ ಸದಸ್ಯರು ಕಾರಿನಿಂದ ಕೆಳಗೆ ಇಳಿದು ಬಂದಿದ್ದಾರೆ. ನಂತರ, ಕಾರು ಎಕ್ಸ್‌ಪ್ರೆಸ್ ವೇನಲ್ಲಿ ಧಗಧಗ ಎಂದು ಹತ್ತಿಕೊಂಡು ಉರಿಯುತ್ತಿರುವುದನ್ನು ಕಂಡ ಇತರೆ ವಾಹನ ಸವಾರರು ಆತಂಕಗೊಂಡು ಅಗ್ನಿ ಶಾಮಕದಳದವರಿಗೆ ತಿಳಿಸಿದ್ದಾರೆ. ತಕ್ಷಣಕ್ಕೆ ಸ್ಥಳಕ್ಕೆ ಆಗಮಿಸಿದ ಅಗ್ನಿ ಶಾಮಕದ ದಳ ಸಿಬ್ಬಂದಿ ಬೆಂಕಿ ನಂದಿಸಿದರೂ ಕೂಡ ಬಹುತೇಕ ಕಾರು ಸುಟ್ಟು ಕರಕಲಾಗಿದೆ. ಪಟ್ಟಣದ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ದೇವಾಲಯ, ಜಾತ್ರೆ– ರಥೋತ್ಸವ ಸಂಸ್ಕೃತಿ–ಪರಂಪರೆಯ ಪ್ರತೀಕ

ಬೋಳಮಾರನಹಳ್ಳಿಯಲ್ಲಿ ಶ್ರೀ ಲಕ್ಷ್ಮೀದೇವಮ್ಮನವರ ದೇವಾಲಯ ಉದ್ಘಾಟನೆ



ಸಮಾರಂಭದಲ್ಲಿ ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಕೆ.ಆರ್.ಪೇಟೆ, ಫೆ.7– ದೇವಾಲಯಗಳು, ಜಾತ್ರೆ–ರಥೋತ್ಸವಗಳು ನಮ್ಮ ಸಂಸ್ಕೃತಿ–ಪರಂಪರೆಯ ಪ್ರತೀಕವಾಗಿವೆ. ಹಾಗಾಗಿ ದೇವಾಲಯಗಳನ್ನು ಜೀರ್ಣೋದ್ದಾರ ಮಾಡಿ ಉಳಿಸುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಕರ್ನಾಟಕ ಪ್ರದೇಶ ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಬೋಳಮಾರನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಲಕ್ಷ್ಮೀ ದೇಮ್ಮನವರ ದೇವಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೋಳಮಾರನಹಳ್ಳಿ ಗ್ರಾಮದ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿದೆ. ಗ್ರಾಮದಲ್ಲಿರುವ ಎಲ್ಲಾ ದೇವಾಲಯಗಳನ್ನು ದಾನಿಗಳ ನೆರವಿನಿಂದ ಜೀರ್ಣೋದ್ದಾರ ಮಾಡಿರುವುದು ಶ್ಲಾಘನೀಯ. ಶ್ರೀ ಲಕ್ಷೀದೇವಮ್ಮನವರ ದೇವಾಲಯ ನಿರ್ಮಾಣ ಕಾರ್ಯಕ್ಕೆ ಹಾಗೂ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ವಿಧಾನಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರು ಸುಮಾರು 50ಲಕ್ಷ ರೂಪಾಯಿ ಅನುದಾನ ನೀಡಿರುವುದು ಬೋಳಮಾರನಹಳ್ಳಿ ಗ್ರಾಮದ ಮೇಲೆ ನಮ್ಮ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದವರು ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದರು.

ನಮ್ಮ ಪೂರ್ವಿಕರು ಬಿಟ್ಟು ಹೋಗಿರುವ ದೇವಾಲಯಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಪ್ರತಿಯೊಬ್ಬರ ಮೇಲಿದೆ ಎಂಬ ಮನೋಭಾವನೆಯಲ್ಲಿ ಒಗ್ಗಟ್ಟಿನಿಂದ ಶ್ರದ್ಧಾ ಭಕ್ತಿಯಿಂದ ಗ್ರಾಮದಲ್ಲಿ ಶ್ರೀ ಲಕ್ಷ್ಮೀ ದೇಮ್ಮನವರ ದೇವಾಲಯವನ್ನು ನಿರ್ಮಾಣದ ಮೂಲಕ ನಮ್ಮ ಸನಾತನ ಪರಂಪರೆ ಉಳಿವಿಗೆ ಶ್ರಮಿಸಿರುವುದು ನಿಜಕ್ಕೂ ಶ್ಲಾಘನೀಯ ಎಂದು ಅವರು ತಿಳಿಸಿದರು.

ಇದರಿಂದ ಹಿರಿಯರಿಗೆ ಗೌರವಿಸುವಂತಾಗುವುದಲ್ಲದೇ ಮುಂದಿನ ಪೀಳಿಗೆಗಾಗಿ ಕೊಡುಗೆ ನೀಡಿದಂತಾಗುತ್ತದೆ ಎಂದ ಅವರು, ನಮ್ಮಲ್ಲಿ ಎಷ್ಟೆ ಕಷ್ಟ ಕಾರ್ಪಣ್ಯಗಳಿದ್ದರೂ ದೇವಾಲಯಗಳಿಗೆ ಒಮ್ಮೆ ಭೇಟಿ ಕೊಟ್ಟರೆ ಆ ದೇವಾಲಯಗಳು ಬದುಕಿಗೆ ಹೊಸ ಸಂದೇಶಗಳನ್ನು ನೀಡುತ್ತವೆ. ಯಾವುದೇ ಒಬ್ಬ ವ್ಯಕ್ತಿ ದೇವಾಲಯಗಳಿಗೆ ತೆರಳಿದರೆ ಆ ವ್ಯಕ್ತಿಯಲ್ಲಿ ಒಳ್ಳೆಯ ಸದ್ಭಾವನೆಗಳು ಮೂಡುತ್ತವೆ. ಇದು ಮಾತ್ರವಲ್ಲ, ಅವರಲ್ಲಿ ಸಂಸ್ಕಾರ ಸಹ ಮೂಡುತ್ತದೆ ಎಂದರು.

ಶಾಸಕ ಹೆಚ್.ಟಿ.ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಸುಬ್ರಹ್ಮಣ್ಯ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಕಿರಣ್, ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಬೋಳಮಾರನಹಳ್ಳಿ ಮಂಜುನಾಥ್, ಉದಯಶಂಕರ್, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕೃಷ್ಣೇಗೌಡ, ಹೋಬಳಿ ಜೆಡಿಎಸ್ ಅಧ್ಯಕ್ಷ ಕಾಯಿ ಮಂಜೇಗೌಡ, ಬೋರ್‌ವೆಲ್ ಮಹೇಶ್, ಪಿಎಸಿಎಸ್ ನಿರ್ದೇಶಕ ಶೇಖರ್, ಮುಖಂಡರಾದ ಬಿ.ಎಸ್.ಮಂಜುನಾಥ್, ಚಿಕ್ಕಲಿಂಗೇಗೌಡ, ಕಿರಣ್, ಗುರುಲಿಂಗೇಗೌಡ, ಬಿ.ಎಸ್. ಪುಟ್ಟೇಗೌಡ, ಚಂದ್ರಶೇಖರ್, ಶಂಕರಲಿಂಗೇಗೌಡ, ಪದ್ಮನಾಭೇಗೌಡ, ಅಣ್ಣಾಸ್ವಾಮಿ, ಬಿ.ಎನ್. ಬಸವೇಗೌಡ, ಕಾಯಿ ರಾಮಣ್ಣ, ಸ.ಮಂಜಣ್ಣ, ಮ.ರಾಮಕೃಷ್ಣಣ್ಣ, ಗುರುಲಿಂಗಣ್ಣ, ಬಿ.ಕೆ.ಶ್ರೀನಿವಾಸ್, ಶಿಕ್ಷಕ ಹರೀಶ್, ಪತ್ರಿಕಾ ಪ್ರತಿನಿಧಿ ನಿಂಗೇಗೌಡ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಒಂದನೇ ಪುಟದಿಂದ

ಐತಿಹಾಸಿಕ 'ಕೊಡವಾಮೆ ಬಾಳೋ' ಮಹಾಪಾದಯಾತ್ರೆ ಯಶಸ್ವಿ



'ಕೊಡವಾಮೆ ಬಾಳೋ' ಪಾದಯಾತ್ರೆ ಮಡಿಕೇರಿಯ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಸಮಾವೇಶಗೊಂಡು, ಮಹನೀಯರಿಗೆ ಗೌರವ ಸಮರ್ಪಿಸಿತು.

ತಾಳತ್ತಮನೆ ವಿಭಾಗಗಳಿಂದ ಆಗಮಿಸಿದ ಒಂದು ತಂಡ ಜನರಲ್ ತಿಮ್ಮಯ್ಯ ವೃತ್ತಕ್ಕೆ ಆಗಮಿಸಿ ಪಾದಯಾತ್ರೆಯಲ್ಲಿ ಸೇರ್ಪಡೆಗೊಂಡಿತು. ಮತ್ತೊಂದು ತಂಡ ಕುಶಾಲನಗರ, ಸಿದ್ದಾಪುರ ಭಾಗದಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಸಮಾವೇಶಗೊಂಡು ಬಳಿಕ ಜನರಲ್ ತಿಮ್ಮಯ್ಯ ವೃತ್ತಕ್ಕೆ ಆಗಮಿಸಿ ಸೇರ್ಪಡೆ ಗೊಂಡಿತು. ಆ ಮೂಲಕ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಕೊಡವ, ಕೊಡವ ಭಾಷಿಕ ಸಮುದಾಯ ನೆರೆದಿತ್ತು. ಕಿಕ್ಕಿರಿದು ಸೇರಿದ್ದ ಹಿಂದೆಂದೂ ಕಾಣದ ಜನಸ್ತೋಮದ ದೃಶ್ಯ ಕಣ್ಣಾಯಿಸಿದೆಲ್ಲೆಡೆ ಕಂಡುಬರುತ್ತಿತ್ತು. ಗಾಳಿಬೀಡು ಭಾಗದಿಂದ ಆಗಮಿಸಿದ ಒಂದು ತಂಡ ಹಳೇ ಖಾಸಗಿ ಬಸ್ ನಿಲ್ದಾಣ ಬಳಿ 'ಕೊಡವಾಮೆ ಬಾಳೋ' ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿತು.

ವೀರ ಸೇನಾನಿಗಳಿಗೆ ಗೌರವಾರ್ಪಣೆ: ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತದಲ್ಲಿ ವೀರ ಸೇನಾನಿಗೆ ಗೌರವಾರ್ಪಣೆ ಮಾಡಲಾಯಿತು. ಇದೇ ಸಂದರ್ಭ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ವೃತ್ತದಲ್ಲೂ ವೀರ ಸೇನಾನಿಗೆ ಪುಷ್ಪಾರ್ಚನೆ ಮೂಲಕ ಗೌರವ ನಮನ ಸಲ್ಲಿಸಲಾಯಿತು. ಸಾಗರದೋಪಾದಿಯಲ್ಲಿ ಕೊಡವ ಸಮುದಾಯದವರು ನಗರದ ಮುಖ್ಯ ಬೀದಿಗಳಲ್ಲಿ ಸಾಗಿ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಮಾಗಮವಾಗುವ ಮುನ್ನ ಮೇಜರ್ ಮಂಗೇರಿರ ಮುತ್ತಣ್ಣ, ನಗರಸಭೆ ಕಚೇರಿ ಮುಂಭಾಗದ ಕಾವೇರಿ ಪ್ರತಿಮೆ, ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ಅವರ ಪ್ರತಿಮೆಗೂ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿತು.

'ಕೊಡವಾಮೆ ಬಾಳೋ' ಉದ್ಘೋಷ

ಮಡಿಕೇರಿ ಜನರಲ್ ತಿಮ್ಮಯ್ಯ ಕ್ರೀಡಾಂಗಣ ಬಳಿಯ ಕೊಡವ ಮಂದ್, ಮೈದಾನದಲ್ಲಿ ನೆರೆದಿದ್ದ ಸಹಸ್ರಾರು ಕೊಡವರು, ಕೊಡವ ಭಾಷಿಕರ 'ಕೊಡವಾಮೆ ಬಾಳೋ' ಉದ್ಘೋಷ ದಶ ದಿಕ್ಕುಗಳಿಗೆ ಪಸರಿಸಿತು. ಆ ಮೂಲಕ ಕೊಡಗಿನ ಕೊಡವರ ವಿಶೇಷ ಸಂಸ್ಕೃತಿ, ಪರಂಪರೆಗಳು ಅವಿನಾಶಿ, ಅದನ್ನು ಎಂದೂ ಯಾರೂ ಅಳಿಸಲು ಸಾಧ್ಯವಿಲ್ಲ ಎನ್ನುವ ಸಂದೇಶ ಸಾರಲಾಯಿತು.

ಮನವಿ ಸಲ್ಲಿಕೆ: ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಅವರು ಕೊಡಗಿನ ಕೊಡವರ ಪ್ರಮುಖ ಹಕ್ಕೊತ್ತಾಯಗಳನ್ನು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರಿಗೆ ಸಲ್ಲಿಸಿದರು. ಈ ಸಂದರ್ಭ ವೇದಿಕೆಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ, ಅಖಿಲ ಅಮ್ಮ ಕೊಡವ ಸಮಾಜದ ಅಧ್ಯಕ್ಷ ಬಾನಂಡ ಪ್ರತ್ಯು, ಕೊಡವ ಭಾಷಿಕರ ಒಕ್ಕೂಟದ ಅಧ್ಯಕ್ಷ ಪಡಿಞರಂಡ ಪ್ರಭು ಕುಮಾರ್ ಉಪಸ್ಥಿತರಿದ್ದರು. ಮಾದೇಟಿರ ಬೆಳ್ಯಪ್ಪ, ಮುಲ್ಲೇಂಗಡ ಮಧೋಷ್ ಪೂವಯ್ಯ ಕಾರ್ಯಕ್ರಮ ನಿರೂಪಿಸಿದರೆ, ಗಾಯಕ ಉಳುವಂಗಡ ಲೋಹಿತ್ ಭೀಮಯ್ಯ, 'ಜಬ್ಬೂಮಿ ಬಾಳೋ' ಹಾಡಿನ ಮೂಲಕ ಪಾದಯಾತ್ರೆಯಲ್ಲಿ ಆಗಮಿಸಿದವರ ಉತ್ಸಾಹ ಹೆಚ್ಚಿಸಿದರು. ವೇದಿಕೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪ್ರೊಬೆಷನರಿ ಎಸ್‌ಪಿ ಬೆನಕ ಪ್ರಸಾದ್, ಎಎಸ್‌ಪಿ ಸುಂದರ್ ರಾಜು ಹಾಜರಿದ್ದರು.

ಬಿಎಸ್‌ವೈಗೆ ನಿರೀಕ್ಷಣಾ ಜಾಮೀನು

4.7.2024 ರಂದು ಸಂಜ್ಞೇ ಪರಿಗಣಿಸಿರುವ ಆದೇಶ ಪ್ರಶ್ನಿಸಿದ್ದ ಬಿಎಸ್‌ವೈ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ. ವಿಚಾರಣಾ ನ್ಯಾಯಾಲಯವು ಸಂಜ್ಞೇ ಪರಿಗಣಿಸಿರುವ ಆದೇಶವನ್ನು ಯಡಿಯೂರಪ್ಪ ಅವರಿಗೆ ಸೀಮಿತವಾಗಿ ವಜಾ ಮಾಡಲಾಗಿದೆ. ಅಪರಾಧ, ತನಿಖೆ, ಅಂತಿಮ ವರದಿ ಎಲ್ಲವೂ ಹಾಗೆ ಉಳಿಯಲಿದೆ. ಈ ಆದೇಶದ ಸಮಯದಲ್ಲಿ ಮಾಡಿದ ಅವಲೋಕನಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮ ವರದಿಗೆ ಸಂಬಂಧಿಸಿದಂತೆ ಆದೇಶ ಮಾಡಲು ಪ್ರಕರಣವನ್ನು ಮತ್ತೆ ವಿಚಾರಣಾ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆ. ಇದರಿಂದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆಯಾದರೂ ಈ ಪ್ರಕರಣದಿಂದ ಎದುರಾಗಿರುವ ಸಂಕಷ್ಟ ಇನ್ನೂ ತಪ್ಪಿಲ್ಲ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮೇಲೆ ಕಳೆದ 2024 ಮಾರ್ಚ್ 14ರ ರಾತ್ರಿ ಬೆಂಗಳೂರಿನ ಸದಾಶಿವ ನಗರ ಠಾಣೆಗೆ ಆಗಮಿಸಿದ್ದ ಮಹಿಳೆಯೊಬ್ಬರು ದೂರು ನೀಡಿದ್ದರು. ಈ ಹಿಂದೆ, ತಮ್ಮ 17 ವರ್ಷದ ಮಗಳ ಮೇಲೆ ಲೈಂಗಿಕ ಕಿರುಕುಳ ನಡೆದಿತ್ತು ಎನ್ನುವ ಆರೋಪ ಮಾಡಿ ಮಹಿಳೆ ದೂರು ನೀಡಲಾಗಿತ್ತು. ಆದರೆ, ಯಾವುದೇ ಕ್ರಮ ಜರುಗಿರಲಿಲ್ಲ.

ಫೆಬ್ರವರಿ 2ರಂದು ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಯಡಿಯೂರಪ್ಪ ಮನೆಗೆ ತನ್ನ ಮಗಳ ಜತೆ ತೆರಳಿದ್ದ ಸಂದರ್ಭದಲ್ಲಿ ಬಾಲಕಿ ಜತೆ ಯಡಿಯೂರಪ್ಪ ಅನುಚಿತವಾಗಿ ವರ್ತಿಸಿದ್ದಾರೆ ಎಂದು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ, ಯಡಿಯೂರಪ್ಪನವರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ರಾಜ್ಯ ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು.

ಅರ್ಜಿ ವಜಾಗೊಳಿಸಿದ ಹೈಕೋರ್ಟ್; ಸಿದ್ದರಾಮಯ್ಯ ಸದ್ಯ ನಿರಾಳ

ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಲಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಮುಡಾ ಹಗರಣದಲ್ಲಿ 3 ಲಕ್ಷ 26 ಸಾವಿರ ಮೊತ್ತದ ಜಮೀನು ಸ್ವಾಧೀನಕ್ಕೆ ಬದಲಿಗೆ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ 14 ದುಬಾರಿ ಬೆಲೆಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, ಅಸ್ತಿತ್ವದಲ್ಲೇ ಇಲ್ಲದ ಜಮೀನಿನ ಭೂಪರಿವರ್ತನೆ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ಸಚಿವ ಸಂಪುಟ ಟಿಪ್ಪಣಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿಯೂ ಸಿದ್ದರಾಮಯ್ಯ ಅವರ ಪತ್ನಿಗೆ ಅನುಕೂಲವಾಗುವಂತೆ ಇದೆ. ಅಲ್ಲದೆ, ನಿಯಮಗಳನ್ನು ಗಾಳಿಗೆ ತೂರಿ ತಮಗಿಷ್ಟ ಬಂದಂತೆ ತಿರುಚಲಾಗಿದೆ ಎಂದು ಆರೋಪಿಸಲಾಗಿತ್ತು.

ಸರ್ಕಾರದ ಅಧೀನದಲ್ಲಿರುವ ಅಧಿಕಾರಿಗಳಿಂದ ತನಿಖೆ: ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿರುವ ಈ ಮೊಕದ್ದಮೆಯಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ಲೋಕಾಯುಕ್ತ ಪೊಲೀಸರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ, ಆರೋಪಿ ಮುಖ್ಯಮಂತ್ರಿ ಎಂಬ ಒಂದೇ ಕಾರಣಕ್ಕೆ ಸಿಬಿಐ ಅಥವಾ ಸ್ವತಂತ್ರ ತನಿಖೆಗೆ ಸುಪ್ರೀಂಕೋರ್ಟ್ ಆದೇಶಿಸಿರುವ ಉದಾಹರಣೆಗಳಿವೆ ಎಂಬ ವಾದ ಮಂಡಿಸಿದ್ದರು.

ಮುಖ್ಯಮಂತ್ರಿಗಳ ರಕ್ಷಣೆಗೆ ಇಡೀ ಸಚಿವ ಸಂಪುಟವೇ ಒಂದಾಗಿರುವಾಗ ಸ್ಥಳೀಯ ಲೋಕಾಯುಕ್ತ ಪೊಲೀಸ ರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲದ ಕಾರಣ ನ್ಯಾಯ ಎತ್ತಿಹಿಡಿಯಲು ಸ್ವತಂತ್ರ ಹಾಗೂ ನ್ಯಾಯಸಮ್ಮತ ಸಂಸ್ಥೆಯಿಂದ ತನಿಖೆ ಅನಿವಾರ್ಯ ಎಂಬುದಾಗಿ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದ್ದರು.

ವರದಿಯೇ ಬಾರದೆ ಆಕ್ಷೇಪ ಸರಿಯೇ: ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಪರ ವಕೀಲರು ತಮ್ಮ ವಾದದಲ್ಲಿ, ಲೋಕಾಯುಕ್ತ ಪೊಲೀಸರು ರಾಜ್ಯ ಸರ್ಕಾರದ ಹಿಡಿತದಲ್ಲಿದ್ದಾರೆ. ಎನ್ನುವುದಾದರೆ, ಸಿಬಿಐ ಸಹ ಕೇಂದ್ರ ಸರ್ಕಾರದ ಅಧೀನದಲ್ಲಿದೆ, ಆದ್ದರಿಂದ ಸ್ವತಂತ್ರ ತನಿಖಾ ಸಂಸ್ಥೆ ಎನ್ನಲಾಗುವುದಿಲ್ಲ.

ಲೋಕಾಯುಕ್ತ ಕಳಂಕಿತ ಎಂಬುದಾಗಿ ಹೇಳಲಾಗದು, ಲೋಕಾಯುಕ್ತ ಪೊಲೀಸರ ಮೇಲೆ ಲೋಕಾಯುಕ್ತ ಸಂಸ್ಥೆ ನಿಗಾ ಇರುತ್ತದೆ. ಆದ್ದರಿಂದ ಲೋಕಾಯುಕ್ತ ತನಿಖೆ ಸ್ವತಂತ್ರವಾಗಿರಲಿದೆ. ಸಿಬಿಐ ಸ್ವತಂತ್ರ ಸಂಸ್ಥೆ ಎನ್ನುವುದಾದರೆ ಲೋಕಾಯುಕ್ತ ಸಹ ಸ್ವತಂತ್ರ ಸಂಸ್ಥೆಯಾಗಿದೆ, ಪ್ರಸ್ತುತ ನಡೆಸುತ್ತಿರುವ ತನಿಖೆಯೂ ಸೂಕ್ತವಾಗೇ ಇದೆ, ತನಿಖೆ ತಾರತಮ್ಯವಾಗಿದ್ದಾಗ ಮಾತ್ರ ಬೇರೆ ಸಂಸ್ಥೆಯಿಂದ ತನಿಖೆಗೆ ಮನವಿ ಮಾಡಬಹುದು.

ಲೋಕಾಯುಕ್ತ ಪೊಲೀಸರ ಅಂತಿಮ ವರದಿ ನಂತರ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾಗಿದೆ. ಇದಕ್ಕೂ ಮುನ್ನವೇ ತೀರ್ಮಾನಿಸಲು ಅವಕಾಶವಿಲ್ಲ. ಅಂತಿಮ ವರದಿಯಲ್ಲಿ ಲೋಪವಿದ್ದರೆ ಮರು ತನಿಖೆ ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದಾಗಿದ್ದು ವರದಿಯಲ್ಲಿ ಏನಿದೆಯೆಂದು ತಿಳಿಯದೇ, ವಾದ ಆಲಿಸದೇ ತೀರ್ಮಾನಿಸಬಾರದು.

ಸಿಬಿಐ ತನಿಖೆಗೆ ಅರ್ಹವೆನ್ನಲು ಇದು ಅಪರೂಪ ಪ್ರಕರಣವಲ್ಲ. ಲೋಕಾಯುಕ್ತ ತನಿಖೆಯಲ್ಲಿ ಮಧ್ಯಪ್ರವೇಶಿಸುವುದು ಸರಿಯಲ್ಲ. ದೂರುದಾರರಿಗೆ ರಾಜ್ಯಪಾಲರ ಅನುಮತಿ ಬೇಕಿತ್ತು, ಪಡೆದುಕೊಂಡರು.

ಅರ್ಜಿದಾರರು ಮೊದಲು ಲೋಕಾಯುಕ್ತ ಪೊಲೀಸರ ತನಿಖೆ ಕೋರಿ, ತನಿಖೆಗೆ ಮೊದಲೇ ಸಿಬಿಐಗೆ ನೀಡುವಂತೆ ಕೇಳುತ್ತಿದ್ದಾರೆ. ಆದರೆ, ಲೋಕಾಯುಕ್ತ ಪೊಲೀಸ್ ತನಿಖೆಯಲ್ಲಿನ ಲೋಪ ಏನೆಂದು ತಿಳಿಸಿಲ್ಲ. ಆರೋಪಿ ಸ್ಥಾನದಲ್ಲಿ ಮುಖ್ಯಮಂತ್ರಿ ಇದ್ದಾರೆ ಎಂಬ ಮಾತ್ರಕ್ಕೆ ಸಿಬಿಐ ತನಿಖೆ ಕೇಳುತ್ತಿದ್ದಾರೆ. ಇದು ತಪ್ಪು ಮೇಲ್ಪಂಕ್ತಿಗೆ ನಾಂದಿಯಾಗುತ್ತದೆ ಎಂದು ಸಿದ್ದರಾಮಯ್ಯ ಪರ ವಕೀಲ ವಾದ ಮಂಡಿಸಿದ್ದರು.

ಸುಪ್ರೀಂಕೋರ್ಟ್: ತೀರ್ಪು ಕುರಿತು ಪ್ರತಿಕ್ರಿಯಿಸಿದ ದೂರುದಾರ ಸ್ನೇಹಮಯಿ ಕೃಷ್ಣ, ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಮೂಲಕ ಕಾನೂನು ಹೋರಾಟ ಮುಂದುವರಿಸುತ್ತೇವೆ. ಹೈಕೋರ್ಟ್ ತೀರ್ಪಿನ ಪ್ರತಿ ದೊರೆತ ನಂತರ ಮೇಲ್ಮನವಿ ಸಲ್ಲಿಸಲಾಗುವುದು, ಲೋಕಾಯುಕ್ತ ತನಿಖೆ ಬಗ್ಗೆ ನಂಬಿಕೆ ಇಲ್ಲ ಎಂದರು.

ಲೋಕಾಯುಕ್ತ ಪೋಲಿಸರಿಂದ ಮುಡಾ ಹಗರಣದ ಸಮರ್ಪಕ ತನಿಖೆ ಸಾಧ್ಯವಿಲ್ಲ, ನ್ಯಾಯ ಸಿಗುವುದಿಲ್ಲ ಎಂದಿದ್ದ ಸ್ನೇಹಮಯಿ ಕೃಷ್ಣ, ಸಿಬಿಐ ತನಿಖೆ ಆದೇಶ ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ನಾವು ಸುಪ್ರೀಂಕೋರ್ಟ್‌ಗೆ ಹೋಗ್ತೇವೆ: ಈ ಮಧ್ಯೆ ಹೈಕೋರ್ಟ್ ಏಕಸದಸ್ಯ ಪೀಠದ ಆದೇಶವನ್ನು ಸ್ವಾಗತಿಸಿರುವ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ಶಾಸಕ ಪೊನ್ನಣ್ಣ, ಕೋರ್ಟ್ ತೀರ್ಪು ವಿರುದ್ಧ ಅರ್ಜಿದಾರರು ಸುಪ್ರೀಂಕೋರ್ಟ್‌ಗೆ ಹೋದರೆ ನಾವೂ ಹೋಗ್ತೇವೆ. ಕಾನೂನು ಹೋರಾಟ ನಡೆಸುತ್ತೇವೆ ಎಂದು ಪ್ರತಿಕ್ರಿಯಿಸಿದ್ದಾರೆ.

ಕೋವಿಡ್ ಲಸಿಕೆ ಅಡ್ಡ ಪರಿಣಾಮದಿಂದ ಆಕಸ್ಮಿಕ ಸಾವು ಸಂಬಂಧ ಸಂಶೋಧನೆ

ಸಿಎಂ ಸಿದ್ದರಾಮಯ್ಯ ಮುಖ್ಯ ಕಾರ್ಯದರ್ಶಿಗೆ ಆದೇಶ

ಬೆಂಗಳೂರು, ಫೆ7(ಕೆಎಂಶಿ)– ಕೋವಿಡ್ ಅಥವಾ ಕೋವಿಡ್ ಲಸಿಕೆಯ ಅಡ್ಡ ಪರಿಣಾಮದಿಂದ ಹೃದಯಾಘಾತ, ಹೃದಯಸ್ತಂಭನ, ನರ ಸಂಬಂಧಿ ಭಾಧೆ ಮತ್ತಿತರ ಕಾರಣಗಳಿಂದಾಗಿ ಯುವ ಜನರ ಸಾವು ಕುರಿತು ಸಂಶೋಧನೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆದೇಶ ಮಾಡಿದ್ದಾರೆ.

ಸಾವುಗಳು ಸಂಭವಿಸದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಮರ್ಪಕ ಸಂಶೋಧನೆ ನಡೆಸಲು ತಜ್ಞರ ಹಾಗೂ ವಿಜ್ಞಾನಿಗಳ ಸಮಿತಿ ರಚಿಸಿ ವರದಿ ಪಡೆದುಕೊಳ್ಳುವಂತೆ ಮುಖ್ಯಕಾರ್ಯದರ್ಶಿ ಅವರಿಗೆ ಆದೇಶ ಮಾಡಿದ್ದಾರೆ. ವರದಿ ಪಡೆದ ನಂತರ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಕೋವಿಡ್ ನಂತರ ಯುವಜನರು ಹೃದಯ ಸಂಬಂಧಿ ಹಾಗೂ ನರ ರೋಗ ಖಾಯಿಲೆಗಳಿಂದ ಸಾವಿಗೀಡಾಗುತ್ತಿರುವ ಬಗ್ಗೆ ಅನೇಕ ವರದಿಗಳು ಪ್ರಕಟಗೊಂಡಿವೆ. ಕೆಲವು ಚಿಂತಕರು ಮುಖ್ಯಮಂತ್ರಿ ಅವರಿಗೆ ನೇರವಾಗಿ ಪತ್ರ ಬರೆದು ಈ ಸಂಬಂಧ ತಜ್ಞರ ಸಮಿತಿ ರಚಿಸಿ ಪರಿಹಾರ ಕಂಡುಹಿಡಿಯುವಂತೆ ಮನವಿ ಮಾಡಿದ್ದಾರೆ.

ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ತಿರಸ್ಕರಿಸಿದ ರಾಜ್ಯಪಾಲರು

ಸಾಲ ಪಡೆದವರಿಗೆ ರಕ್ಷಣೆ ಇರುವಂತೆ ಸಾಲ ಕೊಟ್ಟವರಿಗೂ ರಕ್ಷಣೆ ಬೇಕಲ್ಲವೇ...!?

ಬೆಂಗಳೂರು, ಫೆ.7– ಮೈಕ್ರೋ ಫೈನಾನ್ಸ್ ಕಿರುಕುಳ ತಡೆ ಮಸೂದೆ ಕುರಿತಾದ ರಾಜ್ಯ ಸರ್ಕಾರದ ಸುಗ್ರೀವಾಜ್ಞೆಯನ್ನು ರಾಜ್ಯಪಾಲರು ತಿರಸ್ಕರಿಸಿದ್ದಾರೆ. ಈ ಬಗ್ಗೆ ಸಿಎಂ ಕಚೇರಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಬಹುದೊಡ್ಡ ಹಿನ್ನಡೆಯಾಗಿದೆ.



ಹಲವು ಲೋಪದೋಷಗಳನ್ನು ಗುರುತಿಸಿ ಸುಗ್ರೀವಾಜ್ಞೆಗೆ ಅಂಕಿತ ಹಾಕದೇ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಾಪಸ್ ಕಳುಹಿಸಿದ್ದಾರೆ. ವಿಧಾನಮಂಡಲ ಅಧಿವೇಶನದಲ್ಲೇ ಮಸೂದೆ ಮಂಡಿಸಿ ಚರ್ಚೆ ಮಾಡಿ ಕಳುಹಿಸಿ ಎಂದು ಸುಗ್ರೀವಾಜ್ಞೆ ತಿರಸ್ಕರಿಸಿದ್ದಾರೆ. ಸುಗ್ರೀವಾಜ್ಞೆ ಮೂಲಕ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಬ್ರೇಕ್ ಹಾಕಲು ಮುಂದಾಗಿದ್ದ ಸರ್ಕಾರ ಈಗ ಸುಗ್ರೀವಾಜ್ಞೆ ಕರಡು ಬಿಲ್ ಪರಿಷ್ಕರಣೆ ಮಾಡಿ ಮಸೂದೆ ತರಬೇಕಿದೆ.

ಈ ಮೊದಲು ಕೆಲ ದೋಷಗಳನ್ನು ಸರಿಪಡಿಸುವಂತೆ ರಾಜ್ಯಪಾಲರು ಸರ್ಕಾರಕ್ಕೆ ಕಳುಹಿಸಿದ್ದರು. ಅದಾದ ಬಳಿಕ ಮತ್ತೆ ಸರ್ಕಾರ ಸುಗ್ರೀವಾಜ್ಞೆ ಕಳುಹಿಸಿತ್ತು. ಅಲ್ಲದೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಿಎಂ ಸಿಎಸ್, ರಾಜ್ಯಪಾಲರನ್ನು ಭೇಟಿ ಮಾಡಿ ವಿವರಣೆ ನೀಡಿದ್ದರು. ಆದರೆ ಆರ್‌ಬಿಐ ನಿಯಮಾವಳಿಗಳಿಗೆ ಅಡ್ಡಿ, ಸಾಲ ಕೊಟ್ಟವರ ರಕ್ಷಣೆ ಬಗ್ಗೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದು, ಸುಗ್ರೀವಾಜ್ಞೆ ವಾಪಸ್ ಕಳುಹಿಸಿದ್ದಾರೆ.

ಸುಗ್ರೀವಾಜ್ಞೆ ವಾಪಸ್ ಕಳುಹಿಸಿದ್ದೇಕೆ: ಮಸೂದೆಯಲ್ಲಿ ಸಾಲ ಪಡೆದವರಿಗೆ ರಕ್ಷಣೆ ಇದೆ. ಆದರೆ ಸಹಜ ನ್ಯಾಯದ ಅಡಿಯಲ್ಲಿ ಸಾಲ ಕೊಟ್ಟವರಿಗೆ ರಕ್ಷಣೆ ಇಲ್ಲ. ಅಲ್ಲದೇ ಆರ್‌ಬಿಐ ನಿಯಮಗಳು, ಪೊಲೀಸ್ ನಿಯಮಗಳಲ್ಲಿ ವ್ಯತಿರಿಕ್ತ ಪರಿಣಾಮಗಳಿವೆ. ಸಾಲ ಪಡೆದವರಿಗೆ ರಕ್ಷಣೆ ಇರುವಂತೆ, ಸಾಲ ಕೊಡುವವರಿಗೂ ರಕ್ಷಣೆ ಇರಬೇಕು. ವಿಧಾನ ಮಂಡಲ ಅಧಿವೇಶನ ಹತ್ತಿರದಲ್ಲೇ ಇದೆ. ಅಲ್ಲೇ ಮಸೂದೆ ಮಂಡನೆ ಮಾಡಿ, ಚರ್ಚೆ ಬಳಿಕ ಅಂಗೀಕಾರ ಮಾಡಬಹುದು ಎಂದು ರಾಜ್ಯಪಾಲರು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಸುದೀರ್ಘ ಅವಧಿಯಲ್ಲಿ ಇದು ಮಾರಕವಾಗಲಿದೆ. ಮೈಕ್ರೋ ಫೈನಾನ್ಸ್ 3 ಲಕ್ಷಕ್ಕಿಂತ ಜಾಸ್ತಿ ಸಾಲ ಕೊಡುವುದಿಲ್ಲ. ನೀವು 5 ಲಕ್ಷ ದಂಡ ಹೇಗೆ ಹಾಕುತ್ತೀರಾ ಸಾಲ ಪಡೆಯುವವನ ಬಳಿ ಏನೂ ದಾಖಲೆ ತೆಗೆದುಕೊಳ್ಳಬಾರದು ಎಂದು ಹೇಳಿದ್ದೀರಿ. ಆದರೆ ಇದು ಸರ್ಕಾರಿ ಸಂಸ್ಥೆಗಳ ಸಾಲದ ವೇಳೆ ಅನುಸರಿಸ ಬೇಕಾದ ಪರಿಸ್ಥಿತಿ ಎದುರಾಗಬಹುದು. ಶಿಕ್ಷೆ ಪ್ರಮಾಣ 10 ವರ್ಷ ವಿಧಿಸಲಾಗಿದೆ, ಶಿಕ್ಷೆ ಪ್ರಮಾಣದಲ್ಲಿ ಯಾವುದೇ ಲಾಜಿಕ್ ಇಲ್ಲ. ಪ್ರಾಮಾಣಿಕವಾಗಿ ಸಾಲ ಕೊಟ್ಟವರಿಗೂ, ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುವವರಿಗೂ ಸಮಸ್ಯೆ ಆಗಲಿದೆ. ಈಗ ಇರುವ ಕಾನೂನುಗಳಲ್ಲೇ ಪೊಲೀಸರು ಸರಿಯಾದ ಕ್ರಮಕೈಗೊಳ್ಳುತ್ತಿಲ್ಲ ಪೊಲೀಸರು ಸರಿಯಾದ ಕ್ರಮಕೈಗೊಳ್ಳದೇ ಇರುವುದಕ್ಕೆ ಮತ್ತೊಂದು ಕಾನೂನಿನ ಅಗತ್ಯತೆ ಕಾಣುತ್ತಿಲ್ಲ. ಆದ್ದರಿಂದ ಬಜೆಟ್ ಅಧಿವೇಶನದ ಹತ್ತಿರವಾಗಿರುವಾಗ ಸದನದಲ್ಲಿ ಮಸೂದೆ ಮಂಡನೆ ಮಾಡಿ ಸಾಧಕ–ಬಾಧಕ ಚರ್ಚಿಸಿ ಎಂದು ತಿಳಿಸಿ ನೀಡಿದ್ದಾರೆ.

ವಿಜಯಪುರ, ಫೆ.7– ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ ಹೊರಡಿಸಿರುವ ಸರ್ಕಾರದ ಉದ್ದೇಶವನ್ನು ರಾಜ್ಯಪಾಲರು ಸಂಪೂರ್ಣವಾಗಿ ಅರ್ಥೈಸಿಕೊಂಡಿಲ್ಲ, ತಪ್ಪು ಗ್ರಹಿಕೆ, ಮಾಹಿತಿ ಕೊರತೆಯಿಂದ ತಿರಸ್ಕರಿಸಿದ್ದಾರೆ. ಸುಗ್ರೀವಾಜ್ಞೆಯನ್ನು ತಿರಸ್ಕರಿಸಲು ರಾಜ್ಯಪಾಲರು ನೀಡಿರುವ ಕಾರಣಗಳ ಬಗ್ಗೆ ಸೂಕ್ತ ವಿವರವನ್ನು ನೀಡುವ ಮೂಲಕ ಅನುಮೋದಿಸುವಂತೆ ಮರು ಮನವಿ ಮಾಡಲಾಗುವುದು.



- **ಹೆಚ್.ಕೆ.ಪಾಟೀಲ್,** ಕಾನೂನು ಸಂಸದೀಯ ವ್ಯವಹಾರಗಳ ಸಚಿವ

ಇಂದು ದೆಹಲಿ ವಿಧಾನಸಭೆ ಚುನಾವಣಾ ಫಲಿತಾಂಶ

ನವದೆಹಲಿ, ಫೆ.7– ಇದೇ ಫೆ.5ರಂದು ದೆಹಲಿ ವಿಧಾನಸಭಾ ಚುನಾವಣೆಯ ಮತದಾನ ನಡೆದಿತ್ತು. ನಾಳೆ (ಫೆ.8) ಚುನಾವಣೆಯ ಅಧಿಕೃತ ಫಲಿತಾಂಶ ಹೊರಬೀಳಲಿದೆ.

ಈಗಾಗಲೇ ಚುನಾವಣಾ ಆಯೋಗವು ಮತ ಎಣಿಕೆಗೆ ವ್ಯವಸ್ಥೆ ಮಾಡಿಕೊಂಡಿದೆ. ದೆಹಲಿಯಲ್ಲಿ ಒಟ್ಟು 70 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ಪ್ರಕ್ರಿಯೆ ನಡೆದಿದೆ. ಎಣಿಕೆ ಪ್ರಕ್ರಿಯೆ ಪ್ರಾರಂಭಗೊಂಡ ಅರ್ಧ ಗಂಟೆಯ ನಂತರ ಯಾರಿಗೆ ಮುನ್ನಡೆ ಯಾರಿಗೆ ಹಿನ್ನಡೆ ಎಂಬುದರ ಮಾಹಿತಿ ಪ್ರಕಟವಾಗಲಿದೆ.

ಫೆಬ್ರವರಿ 5ರಂದು ಒಂದೇ ಹಂತದಲ್ಲಿ ದೆಹಲಿ ವಿಧಾನಸಭಾ ಚುನಾವಣೆ ನಡೆದಿದ್ದು, 70 ವಿಧಾನಸಭಾ ಸ್ಥಾನಗಳಿಗೆ 699 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಆಡಳಿತಾರೂಢ ಆಮ್ ಆದ್ಮಿ ಪಕ್ಷ ಒಂದೆಡೆಯಾದರೆ, ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಚುನಾವಣಾ ಪ್ರಚಾರವನ್ನು ಬಿರುಸಿನಿಂದ ನಡೆಸಿ, ಅಖಾಡದಲ್ಲಿ ಭಾರೀ ಸದ್ದು ಮಾಡಿವೆ. ಫಲಿತಾಂಶಗಳ ಬಗ್ಗೆ ಮೂರು ಪಕ್ಷಗಳಲ್ಲಿ ವಿಶ್ವಾಸ ಮೂಡಿದ್ದು, ಗೆಲುವು ತಮ್ಮದೇ ಎಂದು ಹೇಳಿಕೊಂಡಿವೆ. ಈ ಮಧ್ಯೆ, ಮೂರನೇ ಬಾರಿಗೆ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ಸರ್ಕಾರ ರಚಿಸುವ ವಿಶ್ವಾಸದಲ್ಲಿ ಎಎಪಿ ಇದ್ದರೆ, ಈ ಬಾರಿ ನಮ್ಮದೇ ಅಧಿಕಾರಕ್ಕೆ ಬರಲಿದೆ ಎಂಬ ಬಲವಾದ ನಂಬಿಕೆಯಲ್ಲಿ ಬಿಜೆಪಿ ಇದೆ.

ವಿಧಾನಸಭಾ ಚುನಾವಣಾ ಫಲಿತಾಂಶಕ್ಕಾಗಿ ಚುನಾವಣಾ ಆಯೋಗವು 19 ಎಣಿಕೆ ಕೇಂದ್ರಗಳನ್ನು ಸ್ಥಾಪಿಸಿದೆ. ಮತಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ಆರಂಭಗೊಳ್ಳಲಿದೆ. ಮೊದಲು ಅಂಚೆ ಮತಗಳ ಎಣಿಕೆ ನಡೆಯಲಿದ್ದು, ನಂತರ 8.30ಕ್ಕೆ ಇವಿಎಂ ಮತಗಳ ಎಣಿಕೆ ಶುರುವಾಗಲಿದೆ. 5,000 ಉದ್ಯೋಗಿಗಳು ಎಣಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ. ಎಣಿಕೆಗಾಗಿ ಚುನಾವಣಾ ಆಯೋಗವು ಭಾರೀ ಭದ್ರತಾ ವ್ಯವಸ್ಥೆಗಳನ್ನು ಮಾಡಿಕೊಂಡಿದೆ

ಟೋಲ್ ತಪ್ಪಿಸುತ್ತಿದ್ದ ವಾಹನ ಸವಾರರಿಗೆ ಶಾಕ್; ಬಿಡದಿ ಬಳಿಯ ಎಕ್ಸಿಟ್ ರೋಡ್ ಬಂದ್

ರಾಮನಗರ, ಫೆ.7– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಟೋಲ್ ತಪ್ಪಿಸುತ್ತಿದ್ದ ವಾಹನ ಸವಾರರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಶಾಕ್ ಕೊಟ್ಟಿದೆ. ಟೋಲ್‌ನಿಂದ ಎಸ್ಕೇಪ್ ಆಗುವುದನ್ನು ತಪ್ಪಿಸಲು ಬಿಡದಿ ಬಳಿಯ ನಿರ್ಗಮನ ರಸ್ತೆ ಬಂದ್ ಮಾಡಿದೆ. ಈ ಮೂಲಕ ಹೆದ್ದಾರಿಯಿಂದ ಸರ್ವೀಸ್ ರಸ್ತೆಗೆ ಇದ್ದ ಸಂಪರ್ಕವನ್ನು ಕಡಿತಗೊಳಿಸಿದೆ.

ಮೈಸೂರಿನಿಂದ ಬರುತ್ತಿದ್ದ ವಾಹನ ಸವಾರರು ಬಿಡದಿಯಿಂದ ಮುಂದೆ ಸರ್ವೀಸ್ ರಸ್ತೆಗೆ ಇಳಿದು ಟೋಲ್ ತಪ್ಪಿಸಿಕೊಳ್ಳುತ್ತಿದ್ದರು. ಎಕ್ಸ್‌ಪ್ರೆಸ್‌ವೇನಲ್ಲಿ ಸಂಚರಿಸಿ ಶೇಷಗಿರಿಹಳ್ಳಿ ಬಳಿ ಟೋಲ್ ಕಟ್ಟದೇ ಸರ್ವೀಸ್ ರಸ್ತೆ ಮೂಲಕ ಬೆಂಗಳೂರು ತಲುಪುತ್ತಿದ್ದರು. ಹೀಗಾಗಿ ಟೋಲ್ ತಪ್ಪಿಸುವ ವಾಹನಗಳಿಗೆ ಕಡಿವಾಣ ಹಾಕಲು ಹೆದ್ದಾರಿ ಪ್ರಾಧಿಕಾರ ಎಂಟ್ರಿಗೆ ಅವಕಾಶ ಕೊಟ್ಟು, ಎಕ್ಸಿಟ್ ರಸ್ತೆಯನ್ನು ಬಂದ್ ಮಾಡಿದೆ.

ಹೆದ್ದಾರಿ ಪ್ರಾಧಿಕಾರದ ನಡೆಗೆ ವಾಹನ ಸವಾರರು ಆಕ್ರೋಶ ಹೊರಹಾಕಿದ್ದಾರೆ. ಸೂಚನಾ ಫಲಕವನ್ನೂ ಅಳವಡಿಸದೇ ಏಕಾಏಕಿ ಎಕ್ಸಿಟ್ ರಸ್ತೆಯನ್ನು ಬಂದ್ ಮಾಡಿರುವುದು ಸರಿಯಲ್ಲ. ರಾಮನಗರದಿಂದ ಬೆಂಗಳೂರಿಗೆ ಹೋಗೋದಕ್ಕೂ ದುಬಾರಿ ಟೋಲ್ ಕಟ್ಟಬೇಕಾ ಎಂದು ಪ್ರಶ್ನೆ ಮಾಡಿದ್ದಾರೆ.

ಹೈಕೋರ್ಟ್‌ನಲ್ಲಿ ಸಿದ್ದರಾಮಯ್ಯ ಪರ ತೀರ್ಪು

ಸೈಡ್ ಆಕ್ಟರ್ ಸ್ನೇಹಮಯಿ ಕೃಷ್ಣನ ಷಡ್ಯಂತ್ರ ವಿಫಲ

● ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಲೇವಡಿ ● ಬಿಜೆಪಿ, ಜೆಡಿಎಸ್‌ಗೆ ಮುಖಭಂಗ ● ಸುಪ್ರೀಂನಲ್ಲಿ ಮೇಲ್ಮನವಿ ಸಲ್ಲಿಸಿದ್ರೂ ಭಯವಿಲ್ಲ

ಮೈಸೂರು, ಫೆ.7(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಹೈಕೋರ್ಟ್ ನ್ಯಾಯಯುತ ತೀರ್ಪು ನೀಡಿರುವುದರಿಂದ ಬಿಜೆಪಿ ಮತ್ತು ಜೆಡಿಎಸ್‌ನವರು ಸೈಡ್ ಆಕ್ಟರ್ ಸ್ನೇಹಮಯಿ ಕೃಷ್ಣ ಮುಂದಿಟ್ಟು ನಡೆಸಿದ ಪಿತೂರಿ ವಿಫಲವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿರುಗೇಟು ನೀಡಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನಾಲ್ಕೈದು ತಿಂಗಳಿಂದ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದ್ದಾರೆ. ಆದರೆ ಪ್ರತಿ ಹಂತದಲ್ಲೂ ಬಿಜೆಪಿ ಮತ್ತು ಜೆಡಿಎಸ್‌ಗೆ ಮುಖಭಂಗವಾಗಿದೆ ಎಂದು ಗೇಲಿ ಮಾಡಿದರು.

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರ ಕೆಸರೆ ಭೂಮಿ ವಶಪಡಿಸಿಕೊಂಡ ಹಿನ್ನೆಲೆಯಲ್ಲಿ ಮುಡಾದಿಂದ ನಿವೇಶನ ಪಡೆಯಲಾಗಿತ್ತು. ಆದರೆ ಇದೇ ಘೋರ ಅನ್ಯಾಯ ಎಂದು ಬಿಂಬಿಸಿ ಸ್ನೇಹಮಯಿ ಕೃಷ್ಣ ಎಂಬ ಜೋಕರ್ ಮುಂದಿಟ್ಟು ಎರಡು ಪಕ್ಷಗಳು ಕುತಂತ್ರ ರೂಪಿಸಿದ್ದರು. ಆದರೆ ವಿರೋಧ ಪಕ್ಷದ ಎಲ್ಲಾ ಪ್ರಯತ್ನ ಹಳ್ಳ ಹಿಡಿದಿದೆ ಎಂದು ಲಕ್ಷ್ಮಣ್ ಹೇಳಿದರು.

ಸಿದ್ದರಾಮಯ್ಯ ವಿರುದ್ಧದ ಪ್ರಕರಣವನ್ನು ಲೋಕಾಯುಕ್ತರಿಗೆ ನೀಡಿ ಎಂದು ಇದೇ ಸ್ನೇಹಮಯಿ ಕೃಷ್ಣ ಆಗ್ರಹಿಸಿದ್ದರು. ಮುಖ್ಯಮಂತ್ರಿಗಳ ಹಿಡಿತದಿಂದ ಮುಕ್ತವಾದ ಸ್ವಾಯತ್ತ ಸಂಸ್ಥೆ ಲೋಕಾಯುಕ್ತದಲ್ಲಿ ತನಿಖೆ ಪ್ರಗತಿಯಲ್ಲಿತ್ತು. ಈ ಸಮಯದಲ್ಲಿ ಸಿಬಿಐ ತನಿಖೆ ನಡೆಸಬೇಕು ಎಂದು ಮತ್ತೊಂದು ರೀತಿಯ ಕಾನೂನು ಸಮರ ಆರಂಭಿಸಿದರು. ಕೂಲಿಗಾಗಿ ಕೆಲಸ ಮಾಡುವ ಸ್ನೇಹಮಯಿ ಕೃಷ್ಣನನ್ನು ಮುಂದೆ ಬಿಟ್ಟು ನಮ್ಮ ವಿರುದ್ಧ ಜೆಡಿಎಸ್–ಬಿಜೆಪಿ ನಾಯಕರು ಹೋರಾಟ ಮಾಡಿಸಿದರು ಎಂದರು.



ಹೈಕೋರ್ಟ್‌ನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ನ್ಯಾಯಯುತ ತೀರ್ಪು ಬಂದಿದೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನಲ್ಲಿ ಶುಕ್ರವಾರ 'ಸತ್ಯಮೇವ ಜಯತೇ' ಘೋಷಣಾ ಫಲಕ ಹಿಡಿದು ಸಾಂಕೇತಿಕವಾಗಿ ಮೆರವಣಿಗೆಯಲ್ಲಿ ಸಾಗಿದರು.

ಈ ಪ್ರಕರಣದಲ್ಲಿ ಹಣದ ವಹಿವಾಟು ನಡೆಯದಿದ್ದರೂ ಇಡಿ ಅಧಿಕಾರಿಗಳು ಸ್ವಯಂ ಪ್ರೇರಣೆಯ ಅರ್ಜಿ ದಾಖಲಿಸಿದ್ದರು. ಅಲ್ಲದೆ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ಇಡಿಯವರು ಲೋಕಾಯುಕ್ತ ಎಡಿಜಿಪಿಗೆ 104 ಪುಟಗಳ ವರದಿ ಸಲ್ಲಿಸಿದರು. ಈ ಮೂಲಕ ಲೋಕಾಯುಕ್ತ ತನಿಖೆ ಹಾದಿ ತಪ್ಪಿಸಲು ಹಲವು ರೀತಿಯ ಪ್ರಯತ್ನ ಮಾಡಿದರು. ಈ ಸಮಯದಲ್ಲಿ ಸ್ನೇಹಮಯಿ ಕೃಷ್ಣ ಇಡಿ ಮತ್ತು ಕೇಂದ್ರ ಸರ್ಕಾರದ ಮುಖ್ಯಸ್ಥನಂತೆ ವರ್ತಿಸಿದರು ಎಂದು ಲಕ್ಷ್ಮಣ್ ಟೀಕಿಸಿದರು.

ಈಗ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದ್ದಾರೆ. ಇದರಿಂದ ನಮಗೇನು ಭಯವಿಲ್ಲ. ಸಿದ್ದರಾಮಯ್ಯ ಯಾವುದೇ ತಪ್ಪು ಮಾಡದ ಹಿನ್ನೆಲೆಯಲ್ಲಿ ಅವರಿಗೆ ಅಂಜಿಕೆ ಏಕೆ ಎಂದು ಪ್ರಶ್ನಿಸಿದ ಲಕ್ಷ್ಮಣ್, ಹೈಕೋರ್ಟ್ ನೀಡಿರುವ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಧ್ಯಮ ವಕ್ತಾರ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ ಲಕ್ಷ್ಮಣ್, ರಾಜೀವ್ ಸೇರಿದಂತೆ ಇತರರು ಕಾಂಗ್ರೆಸ್ ಭವನದಿಂದ ದಾಸಪ್ಪ ವೃತ್ತದ ತನಕ 'ಸತ್ಯಮೇವ ಜಯತೆ' ಘೋಷಣಾ ಫಲಕ ಹಿಡಿದು ಸಾಂಕೇತಿಕವಾಗಿ ನಡಿಗೆಯಲ್ಲಿ ಸಾಗಿದರು.

ಪಶ್ಚಾತಾಪಕ್ಕಾಗಿ ಮೈಸೂರಿನಿಂದ ತಿರುಪತಿವರೆಗೆ ಪಾದಯಾತ್ರೆ ಮಾಡಲಿ

ಹೈಕೋರ್ಟ್‌ನಲ್ಲಿ ಸಿದ್ದರಾಮಯ್ಯ ಪರ ನ್ಯಾಯಯುತ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ಪಶ್ಚಾತಾಪಕ್ಕಾಗಿ ಬಿಜೆಪಿ ಮತ್ತು ಜೆಡಿಎಸ್‌ನವರು ಮೈಸೂರಿನಿಂದ ತಿರುಪತಿ ತನಕ ಪಾದಯಾತ್ರೆ ಮಾಡಲಿ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಆಗ್ರಹಿಸಿದರು.

ಮುಡಾ ಪ್ರಕರಣ ಸಂಬಂಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಬೆಂಗಳೂರಿನಿಂದ ಮೈಸೂರು ತನಕ ಪಾದಯಾತ್ರೆ ನಡೆಸಿದರು. ಆದರೆ ಈಗ ಅವರಿಗೆ ವ್ಯತಿರಿಕ್ತ ತೀರ್ಪು ಬಂದಿರುವ ಹಿನ್ನೆಲೆಯಲ್ಲಿ ಪಶ್ಚಾತಾಪಕ್ಕಾಗಿ ಮೈಸೂರಿನಿಂದ ತಿರುಪತಿ ತನಕ ಪಾದಯಾತ್ರೆ ಮಾಡಲಿ ಎಂದು ಸಲಹೆ ನೀಡಿದರು.

ಬಿಜೆಪಿ ಮತ್ತು ಜೆಡಿಎಸ್‌ನವರು ಇಂತಹ ಯಾವುದೇ ಕುತಂತ್ರ ರೂಪಿಸಿದರೂ ಸಿದ್ದರಾಮಯ್ಯ ಅವರನ್ನು ಅಲುಗಾಡಿಸಲು ಸಾಧ್ಯವಿಲ್ಲ. ಬಿಳಿ ಹಾಳೆಯಂತಿರುವ ಅವರ ವ್ಯಕ್ತಿತ್ವಕ್ಕೆ ಚ್ಯುತಿ ತರಲು ಯಾರಿಂದಲೂ ಸಾಧ್ಯವಿಲ್ಲ ಎಂದು ರಾಜೀವ್ ಹೇಳಿದರು.

ಉಡುಗೊರೆ ಆಸೆಗೆ 15.34 ಲಕ್ಷ ಕಳೆದುಕೊಂಡ ಮಹಿಳಾ ಉದ್ಯೋಗಿ

ಮೈಸೂರು, ಫೆ7(ಎಸ್‌ಬಿಡಿ)– ಫೇಸ್‌ಬುಕ್ ಮೂಲಕ ಪರಿಚಯ ಮಾಡಿಕೊಂಡು ಉಡುಗೊರೆ ನೀಡುವ ನೆಪದಲ್ಲಿ ಲಕ್ಷಾಂತರ ರೂ. ಲಪಟಾಯಿಸುವ ಸೈಬರ್ ವಂಚಕರ ಜಾಲ ವ್ಯಾಪಕವಾಗಿದ್ದು, ಇಂತಹ ಮತ್ತೊಂದು ಪ್ರಕರಣ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ಫೇಸ್‌ಬುಕ್ ಸ್ನೇಹಿತನೊಬ್ಬ ಯುಕೆಯಲ್ಲಿ ವೈದ್ಯನಾಗಿರುವುದಾಗಿ ನಗರದ ಗೋಕುಲಂ ಮಹಿಳೆಯೊಬ್ಬರನ್ನು ನಂಬಿಸಿ, ಅವರಿಗೆ ಉಡುಗೊರೆ ಕಳುಹಿಸುವ ನೆಪದಲ್ಲಿ ಐದೂವರೆ ಲಕ್ಷ ರೂ. ವಂಚಿಸಿದ ಪ್ರಕರಣದ ಬೆನ್ನಲ್ಲೆ ವಿದ್ಯಾರಣ್ಯಪುರಂನಲ್ಲಿ ನೆಲೆಸಿರುವ ಸರ್ಕಾರಿ ಮಹಿಳಾ ಉದ್ಯೋಗಿಯೊಬ್ಬರು ಇದೇ ರೀತಿಯ ವಂಚನೆ ಬಲೆಗೆ ಸಿಲುಕಿ ಬರೋಬ್ಬರಿ 15.34 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಏನಿದು ಪ್ರಕರಣ?: ಈ ಸರ್ಕಾರಿ ಮಹಿಳಾ ಉದ್ಯೋಗಿಗೆ ಡಾ.ಕೃಷ್ಣ ಮೋಹನ್ ಹೆಸರಿನ ಫೇಸ್‌ಬುಕ್ ಐಡಿಯಿಂದ ಫ್ರೆಂಡ್ ರಿಕ್ವೆಸ್ಟ್ ಬಂದಿದೆ. ಇವರು ಸಹಜವಾಗಿ ರಿಕ್ವೆಸ್ಟ್ ಅಕ್ಸೆಪ್ಟ್ ಮಾಡಿದ್ದಾರೆ. ಬಳಿಕ ಆ ವ್ಯಕ್ತಿ ಮಹಿಳಾ ಉದ್ಯೋಗಿಯ ಫೇಸ್‌ಬುಕ್ ಸ್ನೇಹಿತರ ಹೆಸರನ್ನು ಹೇಳಿ, ತಾನೂ ಅವರಿಗೆಲ್ಲಾ ಪರಿಚಯ ಎನ್ನುವಂತೆ ನಂಬಿಸಿದ್ದಾನೆ. ಹೀಗೆ ಪರಿಚಯವಾದ ಬಳಿಕ ಮಹಿಳಾ ಉದ್ಯೋಗಿಯ ವಾಟ್ಸಾಪ್ ನಂಬರ್ ಪಡೆದು ಚಾಟ್ ಮಾಡಲಾರಂಭಿಸಿದ್ದಾನೆ. ಆ ವೇಳೆ ತಾನು ಫ್ಲೋರಿಡಾದಲ್ಲಿ ನೆಲೆಸಿರುವುದಾಗಿ ತಿಳಿಸಿದ್ದಾನೆ.

ಆ ವ್ಯಕ್ತಿ ಫೆ.1ರಂದು ಮೆಸೇಜ್ ಮಾಡಿ, ನಿಮಗೆ ಬೆಲೆಬಾಳುವ ಉಡುಗೊರೆ ಹಾಗೂ 2 ಕೋಟಿ ಹಣ ಕಳುಹಿಸುತ್ತಿರುವುದಾಗಿ ಹೇಳಿದ್ದಾನೆ. ಆ ಸಂದೇಶವನ್ನು ಮಹಿಳಾ ಉದ್ಯೋಗಿ ಗಂಭೀರವಾಗಿ ಪರಿಗಣಿಸದಿದ್ದರೂ ಸರಿ ಎಂದು ಸುಮ್ಮನಾಗಿದ್ದಾರೆ. ಫೆ.3ರಂದು ಕರೆ ಮಾಡಿದ ಬೇರೊಬ್ಬ ವ್ಯಕ್ತಿ, ತಾನು ದೆಹಲಿ ವಿಮಾನ ನಿಲ್ದಾಣದಿಂದ ಕರೆ ಮಾಡುತ್ತಿದ್ದೇನೆ, ನಿಮ್ಮ ಹೆಸರಿನಲ್ಲಿ ಪಾರ್ಸೆಲ್ ಬಂದಿದೆ, ಅದರಲ್ಲಿ ಬೆಲೆ ಬಾಳುವ ವಸ್ತುಗಳಿವೆ ಎಂದು ತಿಳಿಸಿದ್ದಾನೆ.

ಅಲ್ಲದೆ ಏರ್‌ಪೋರ್ಟ್ ಎಕ್ಸ್‌ಚೇಂಜ್ ಪ್ರಕ್ರಿಯೆ ನೆಪದಲ್ಲಿ ಪಾನ್‌ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಹಾಗೂ ಇನ್ನಿತರೆ ದಾಖಲಾತಿಗಳನ್ನು ವಾಟ್ಸಾಪ್‌ನಲ್ಲಿ ಪಡೆದಿದ್ದಾನೆ. ನಂತರ ನಿಮಗೆ ವಿದೇಶದಿಂದ ಬಂದಿರುವ ದುಬಾರಿ ಪಾರ್ಸೆಲ್ ಪಡೆಯಲು ತೆರಿಗೆ ಪಾವತಿಸಬೇಕೆಂದು ಹೇಳಿದ್ದಾನೆ. ಇದನ್ನು ನಂಬಿದ ಮಹಿಳಾ ಉದ್ಯೋಗಿ ಆನ್‌ಲೈನ್ ಮೂಲಕ ವಿವಿಧ ಹಂತಗಳಲ್ಲಿ 15.34 ಲಕ್ಷ ರೂ. ವರ್ಗಾವಣೆ ಮಾಡಿದ್ದಾರೆ. ವಿಮಾನ ನಿಲ್ದಾಣದ ಅಧಿಕಾರಿಯೆಂದು ಮಾತನಾಡಿದ ವಂಚಕ ಅಷ್ಟಕ್ಕೆ ಬಿಡದೆ ಮತ್ತಷ್ಟು ಹಣ ಕಳುಹಿಸಲು ತಿಳಿಸಿದ್ದಾನೆ. ಇದರಿಂದ ಅನುಮಾನಗೊಂಡ ಮಹಿಳಾ ಉದ್ಯೋಗಿ ಉಡುಗೊರೆ ಕಳುಹಿಸುವುದಾಗಿ ಹೇಳಿದ್ದ ಡಾ.ಕೃಷ್ಣ ಮೋಹನ್ ಹೆಸರಿನ ವ್ಯಕ್ತಿಗೆ ಕರೆ ಮಾಡಿ, ವಿಷಯ ತಿಳಿಸಿದ್ದಾರೆ. ಆತನೂ ಕೂಡ ಹಣ ಪಾವತಿಸಬೇಕೆಂದು ಹೇಳಿದ್ದಾನೆ. ಆಗ ಮಹಿಳಾ ಉದ್ಯೋಗಿಗೆ ತಾವು ಮೋಸ ಹೋಗಿರುವುದು ಅರಿವಾಗಿದೆ.

ಬಸ್ ಹತ್ತುವಾಗ ಮಹಿಳೆಯ ಮಾಂಗಲ್ಯ ಸರ ಕಳವು

ಮೈಸೂರು, ಫೆ.7(ಎಸ್‌ಬಿಡಿ)– ಬಸ್ ಹತ್ತುವಾಗ ಮಹಿಳೆಯ ಮಾಂಗಲ್ಯ ಸರ ಎಗರಿಸಿರುವ ಘಟನೆ ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ನಡೆದಿದೆ.

ಹೂಟಗಳ್ಳಿ ನಿವಾಸಿ ನೇತ್ರಾವತಿ(38) ಅವರ ಸುಮಾರು ಒಂದೂವರೆ ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಖದೀಮರು ಕಳ್ಳತನ ಮಾಡಿದ್ದಾರೆ.

ನೇತ್ರಾವತಿ ಅವರು ಪತಿ ಮಹದೇವ ಅವರೊಂದಿಗೆ ಫೆ.4ರಂದು ಹೂಟಗಳ್ಳಿಯಿಂದ ಸಿಟಿ ಬಸ್‌ನಲ್ಲಿ ಮೈಸೂರಿಗೆ ಬಂದು, ನೆಹರು ಸರ್ಕಲ್‌ನಲ್ಲಿ ಇಳಿದಿದ್ದಾರೆ. ಅಲ್ಲಿಂದ ಸಬರ್ಬನ್ ಬಸ್ ನಿಲ್ದಾಣಕ್ಕೆ ನಡೆದು ಹೋಗಿ, ಮಂಡ್ಯದ ಗೌಡಗೆರೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ತೆರಳುವ ಬಸ್ ಹತ್ತಿದ್ದಾರೆ. ತುಂಬಾ ರಶ್ ಇದ್ದ ಕಾರಣ ಮಹದೇವ ಅವರು ಮುಂದೆ ಹೋಗಿ ಸೀಟ್ ಹಿಡಿದುಕೊಂಡಿದ್ದಾರೆ. ಹಿಂದಿನಿಂದ ಬಸ್ ಹತ್ತಿದ್ದ ನೇತ್ರಾವತಿ ಅವರು ಸೀಟ್‌ನಲ್ಲಿ ಕೂರುವಷ್ಟರಲ್ಲಿ ಅವರ ಮಾಂಗಲ್ಯ ಸರ ಕಳ್ಳತನವಾಗಿದೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್ ಹತ್ತುವಾಗ ಜೋಪಾನ: ಸಬರ್ಬನ್ ಬಸ್ ನಿಲ್ದಾಣದಲ್ಲಿ ಸರ ಕಳ್ಳತನ ಪ್ರಕರಣ ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಇದೀಗ ಚಿನ್ನದ ದರ ದಿನೇ ದಿನೆ ಏರುತ್ತಿರುವುದರಿಂದ ಖದೀಮರು ಹೊಂಚು ಹಾಕಿ ಕೈಚಳಕ ತೋರುತ್ತಿದ್ದಾರೆ. ಯಾವ ಮಾರ್ಗದ ಬಸ್ ರಶ್ ಆಗುತ್ತದೋ ಅಲ್ಲೇ ನಿಂತು ಪ್ರಯಾಣಿಕರ ಸೋಗಿನಲ್ಲಿ ದುಷ್ಕೃತ್ಯವೆಸಗುತ್ತಿದ್ದಾರೆ. ಗುರಿಯಾಗಿಸಿಕೊಂಡ ಮಹಿಳೆಯನ್ನು ಸುತ್ತುವರೆದು ಕ್ಷಣಾರ್ಧದಲ್ಲೇ ಸರ ಎಗರಿಸುತ್ತಾರೆ. ರಶ್ ಇರುವ ಬಸ್ ಹತ್ತುವಾಗ ಚಿನ್ನಾಭರಣ ಹಾಗೂ ಬೆಲೆ ಬಾಳುವ ವಸ್ತುಗಳ ಮೇಲೆ ಗಮನವಿಡುವುದು ಅವಶ್ಯವಾಗಿದೆ.



ಇಂದು, ನಾಳೆ ಮೈಸೂರಲ್ಲಿ ಗೆಡ್ಡೆ–ಗೆಣಸು ಮೇಳ

ಮೈಸೂರು, ಫೆ. 7– ಗೆಡ್ಡೆ–ಗೆಣಸು ಭೂತಾಯಿ ಮಡಿಲಿನ ಅದ್ಭುತ ಸೃಷ್ಟಿ. ಋಷಿ ಮುನಿಗಳು ಮತ್ತು ಆದಿವಾಸಿಗಳು ಗೆಡ್ಡೆ ಗೆಣಸು ತಿಂದೇ ರೋಗವಿಲ್ಲದೆ ಆರೋಗ್ಯವಂತರಾಗಿ ಜೀವಿಸುತ್ತಿದ್ದರು ಎಂಬುದನ್ನು ಕೇಳಿದ್ದೇವೆ. ರಾಮಾಯಣ, ಮಹಾಭಾರತ ಮತ್ತು ವೇದಕಾಲೀನ ಕೃತಿಗಳಲ್ಲಿ ಗೆಡ್ಡೆ–ಗೆಣಸುಗಳ ಉಲ್ಲೇಖವಿದೆ. ಆಯುರ್ವೇದ ಮತ್ತು ಜನಪದ ವೈದ್ಯದಲ್ಲಿ ಗೆಡ್ಡೆ ಗೆಣಸನ್ನು ಔಷಧಿಯಾಗಿ ಬಳಸಲಾಗುತ್ತದೆ.

ಗೆಡ್ಡೆ ಗೆಣಸುಗಳು ಬರಗಾಲವನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಹೊಂದಿವೆ. ಅಲ್ಲದೆ ಸುಲಭವಾಗಿ ಹೊಲದ ಅಂಚಿನಲ್ಲಿ ಇಲ್ಲವೇ ಬೆಳೆಯ ಸಾಲಿನ ನಡುವೆ ಬೆಳೆದುಕೊಳ್ಳಬಹುದು. ಮನೆ ಹಿತ್ತಲು ಮತ್ತು ತಾರಸಿ ತೋಟದಲ್ಲೂ ಇವನ್ನು ಬೆಳೆಸಬಹುದು. ಹತ್ತಾರು ವರ್ಷ ನೆಲದಲ್ಲೇ ಬಿಟ್ಟರೂ ಕೆಡದೆ, ಕೊಳೆಯದೆ ಇವು ಉಳಿಯುತ್ತವೆ.


ಬಳ್ಳಿ ಆಲೂಗೆಡ್ಡೆ, ಹುತ್ತರಿ ಗೆಣಸು, ಪರ್ಪಲ್ ಯಾಮ್ ಬಳ್ಳಿಯಾಗಿ ಹಬ್ಬಿ ಬೆಳೆದರೆ, ಕೆಸು ಅಗಲವಾದ ಆಕರ್ಷಕ ಎಲೆಗಳನ್ನು ಹೊತ್ತು ನಿಲ್ಲುತ್ತದೆ. ಶುಂಠಿ, ಹರಿಷಿಣ, ಆರಾರೂಟ್ ಬೇರಿನ ರೂಪದಲ್ಲಿರುತ್ತವೆ. ಮಾಕಳಿ ಬೇರು ಮೂಲಿಕೆಯೂ ಹೌದು, ಬಾಯಿ ಚಪ್ಪರಿಸುವ ಉಪ್ಪಿನಕಾಯಿಯೂ ಹೌದು. ಕ್ಯಾರೆಟ್, ಬಿಟ್‌ರೂಟ್ , ಸಿಹಿ ಗೆಣಸು, ಮರ ಗೆಣಸು ನೆಲದೊಡಲ ಸೋಜಿಗ.

ಪೋಷಕ ನಾರು ಹಾಗೂ ಶರ್ಕರ ಪಿಷ್ಟದಿಂದ ಹೇರಳವಾಗಿರುವ ಗೆಡ್ಡೆ–ಗೆಣಸುಗಳು, ಶರೀರಕ್ಕೆ ಬೇಕಾದ ಚೈತನ್ಯವನ್ನು ಒದಗಿಸುತ್ತವೆ. ಇವುಗಳ ನಿರಂತರ ಬಳಕೆಯಿಂದ ಬೊಜ್ಜು, ಮಧುಮೇಹ, ಕ್ಯಾನ್ಸರ್, ಮತ್ತು ಹೃದಯ ಸಂಬಂಧಿ ಕಾಯಿಲೆಗಳನ್ನು ದೂರವಿಡಬಹುದು. ಚರ್ಮದ ಮೈಕಾಂತಿ ವೃದ್ಧಿಸಲು ಮತ್ತು ವಯಸ್ಸನ್ನು ನಿಧಾನಿಸಲು ಗೆಡ್ಡೆ ಗೆಣಸು ಸಹಕಾರಿ. ಇವುಗಳು ಕಾರ್ಬೋಹೈಡ್ರೇಟ್ ಸಾಕಷ್ಟು ಪ್ರಮಾಣದಲ್ಲಿ ಒಳಗೊಂಡಿರುತ್ತವೆ. ರಕ್ತದಲ್ಲಿ ಸಕ್ಕರೆ ಅಂಶ ಒಮ್ಮೆಲೇ ಹೆಚ್ಚುವುದಿಲ್ಲ. ಮಧುಮೇಹ ರೋಗಿಗಳು ಯಾವುದೇ ಆತಂಕವಿಲ್ಲದೆ ಗೆಡ್ಡೆ ಗೆಣಸು ಸವಿಯಬಹುದು.

ಮೈಸೂರು ಜಿಲ್ಲೆಯ ನಾಗರಹೊಳೆ ಕಾಡು ಪ್ರದೇಶ ಗೆಡ್ಡೆ–ಗೆಣಸು ವೈವಿಧ್ಯಕ್ಕೆ ಹೆಸರುವಾಸಿ. ಜೇನು ಕುರುಬ, ಬೆಟ್ಟ ಕುರುಬ, ಸೋಲಿಗ ಮತ್ತು ಇರುಳಿಗ ಸಮುದಾಯಗಳು ಗೆಡ್ಡೆ–ಗೆಣಸನ್ನು ಇವತ್ತಿಗೂ ಆಹಾರವಾಗಿ ಬಳಸುತ್ತಿದ್ದಾರೆ. ಜಿಲ್ಲೆಯ ರೈತರು ಮರ ಗೆಣಸು, ಕೆಸು, ಸುವರ್ಣ ಗೆಡ್ಡೆ ಶುಂಠಿ, ಹರಿಷಿಣ ಮತ್ತು ಸಿಹಿ ಗೆಣಸು ಉತ್ಪಾದನೆಯಲ್ಲಿ ಮಂಚೂಣಿಯಲ್ಲಿದ್ದಾರೆ.

ನೈಸರ್ಗಿಕ ವಿಕೋಪ ಮತ್ತು ಬರಗಾಲದಲ್ಲಿ ಗೆಡ್ಡೆ ಗೆಣಸು ಜೀವ ಉಳಿಸುವ ಸಂಜೀವಿನಿಯಂತೆ ಕೆಲಸ ಮಾಡುತ್ತವೆ. ವಾತಾವರಣದ ವೈಪರೀತ್ಯವಿದ್ದಾಗ ಎಲ್ಲ ಬೆಳೆಗಳು ವಿಫಲವಾದರೂ ಗೆಡ್ಡೆ–ಗೆಣಸುಗಳು ರೈತರ ಕೈಹಿಡಿಯುತ್ತವೆ; ಸಾಕಷ್ಟು ಆದಾಯ ತರುತ್ತವೆ. ನೈಸರ್ಗಿಕವಾಗಿ ಬೆಳೆಯುವ ಇಂತಹ ಗೆಡ್ಡೆ–ಗೆಣಸುಗಳ ಬಳಕೆ ಹೆಚ್ಚಾಗಬೇಕು.

ಬೇಕಾದ ಗೆಡ್ಡೆ ಗೆಣಸು ಖರೀದಿಸುವ ಸದವಕಾಶ: ನಿಸರ್ಗದ ಕೊಡುಗೆಯಾದ ಗೆಡ್ಡೆ–ಗೆಣಸುಗಳ ಅದ್ಭುತ ಲೋಕವನ್ನು ಮೈಸೂರಿನ ಗ್ರಾಹಕರಿಗೆ ಪರಿಚಯಿಸಲು ಸಹಜ ಸಮೃದ್ಧ ಮತ್ತು ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಜೊತೆಗೂಡಿ 'ಗೆಡ್ಡೆ–ಗೆಣಸು ಮೇಳ'ವನ್ನು ಫೆಬ್ರವರಿ 8 ಮತ್ತು 9 ರಂದು ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಏರ್ಪಡಿಸಲಾಗಿದೆ.





ಎರಡು ದಿನಗಳ ಮೇಳದಲ್ಲಿ ವಿವಿಧ ಬಗೆಯ ಕಾಡು ಮತ್ತು ನಾಡಿನ ಗೆಡ್ಡೆ ಗೆಣಸುಗಳು, ಮೌಲ್ಯ ವರ್ಧಿತ ಪದಾರ್ಥಗಳು, ಗೆಣಸಿನ ಅಡುಗೆಗಳು ಪ್ರದರ್ಶನ ಮತ್ತು ಮಾರಾಟಕ್ಕೆ ಬರಲಿವೆ. ಮಾವಿನ ಶುಂಠಿ, ಕೂವೆ ಗೆಡ್ಡೆ, ಉತ್ತರಿ ಗೆಡ್ಡೆ, ಪರ್ಪಲ್ ಯಾಮ್, ಬಿಳಿ ಸಿಹಿ ಗೆಣಸು, ಬಳ್ಳಿ ಬಟಾಟೆ, ಕಪ್ಪು ಹರಿಷಿಣ, ಕಪ್ಪು ಶುಂಟಿ, ಕಾಡು ಗೆಣಸು, ಮುಳ್ಳು ಗೆಣಸು, ಸುವರ್ಣ ಗೆಡ್ಡೆ, ಕೆಸು, ಹಳದಿ ಮತ್ತು ಕೆಂಪು ಸಿಹಿ ಗೆಣಸು ಮಾರಾಟಕ್ಕೆ ಸಿಗಲಿವೆ.

ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಅಶೋಕ್ ದಳವಾಯಿ ಗೆಡ್ಡೆ–ಗೆಣಸಿನ ಮೇಳವನ್ನು ಉದ್ಘಾಟಿಸಲಿದ್ದಾರೆ. ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಅಧ್ಯಕ್ಷ ನಾಗೇಶ್ ಎಂ.ಎಲ್ ಅಧ್ಯಕ್ಷತೆ ವಹಿಸಲಿದ್ದಾರೆ. 300ಕ್ಕೂ ಹೆಚ್ಚಿನ ಗೆಡ್ಡೆ ಗೆಣಸು ತಳಿಗಳ ಸಂರಕ್ಷಿಸಿರುವ ಕೇರಳದ ಎನ್.ಎಮ್. ಶಾಜಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 'ಸೊಪ್ಪಿನ ಕ್ಯಾಲೆಂಡರ್' ಬಿಡುಗಡೆಯಾಗಲಿದೆ.

ಫೆ. 9 ಬೆಳಿಗ್ಗೆ 11 ಘಂಟೆಗೆ ರೈತರಿಗಾಗಿ 'ಗೆಡ್ಡೆ–ಗೆಣಸು ಕೃಷಿ ತರಬೇತಿ' ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ತರಬೇತಿ ಕಾರ್ಯಕ್ರಮದಲ್ಲಿ ಗೆಡ್ಡೆ–ಗೆಣಸಿನ ವೈವಿಧ್ಯ , ಸಾಗುವಳಿ ವಿಧಾನಗಳು, ಮೌಲ್ಯವರ್ಧನೆಯ ಅವಕಾಶಗಳು ಮತ್ತು ಮಾರುಕಟ್ಟೆಯ ಸಾಧ್ಯತೆಗಳ ಬಗ್ಗೆ ತಿಳಿಸಿಕೊಡಲಾಗುವುದು.

ನಗರವಾಸಿಗಳಿಗೆ ಗೆಡ್ಡೆ ಗೆಣಸಿನ ಅಡುಗೆ ಪದ್ಧತಿಗಳನ್ನು ಪರಿಚಯಿಸಲು 'ಗೆಡ್ಡೆ–ಗೆಣಸು ಅಡಿಗೆ ಮನೆ' ತೆರೆಯಲಿದ್ದು, ಅದರಲ್ಲಿ ವಿವಿಧ ಗೆಡ್ಡೆಗಳಿಂದ ಆಹಾರ ತಯಾರಿಸುವ ಪ್ರಾತ್ಯಕ್ಷತೆಯನ್ನು ಏರ್ಪಡಿಸಲಾಗುತ್ತಿದೆ.

ಸಿರಿಧಾನ್ಯ, ಬೇಳೆ ಕಾಳು, ಸಾವಯವ ಉತ್ಪನ್ನಗಳು, ಮೌಲ್ಯವರ್ಧಿತ ಉತ್ಪನ್ನಗಳು, ದೇಸಿ ಬೀಜಗಳು ಮತ್ತು ಹಣ್ಣಿನ ಗಿಡಗಳ ಮಾರಾಟವೂ ಮೇಳದಲ್ಲಿರಲಿದೆ. ಅಲ್ಲದೆ ಗೆಡ್ಡೆ–ಗೆಣಸು ಖಾದ್ಯ ಸವಿಯುವ ಅವಕಾಶವೂ ಇದೆ ಈ ಸಂಬಂಧ ಹೆಚ್ಚಿನ ಮಾಹಿತಿಗೆ ಮೊ. 9880908608 ಅಥವಾ ಮಧು – 6362180741 ಸಂಪರ್ಕಿಸಬಹುದು.

ದೇಶ - ವಿದೇಶ

ಸಲಿಂಗಿ ಸದಸ್ಯರನ್ನು ನೇಣಿಗೇರಿಸಿದ ಹಮಾಸ್!

ವಾಷಿಂಗ್ಟನ್, ಫೆ.7– ಪ್ಯಾಲೆಸ್ಟೈನ್ ಉಗ್ರ ಸಂಘಟನೆ ಹಮಾಸ್, ಇಸ್ರೇಲಿ ಪುರುಷ ಒತ್ತೆಯಾಳುಗಳ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ತನ್ನ ಸಂಘಟನೆಯಲ್ಲಿದ್ದ ಸಲಿಂಗಿ ಸದಸ್ಯರನ್ನು ನೇಣಿಗೇರಿಸಿದೆ ಎಂದು ವರದಿಯಾಗಿದೆ. ಗಲ್ಲು ಶಿಕ್ಷೆಗೂ ಮೊದಲು ಈ ಸಲಿಂಗಿ ಸದಸ್ಯರಿಗೆ ಹಮಾಸ್ ಚಿತ್ರಹಿಂಸೆ ನೀಡಿದೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.



ಸಲಿಂಗ ಸಂಬಂಧಗಳಿಗೆ ಮಾನ್ಯತೆ ನೀಡುವುದಿಲ್ಲ ಎಂದು ಖಚಿತಪಡಿಸಿರುವ ಹಮಾಸ್, ಇಂತಹ ಅನೈಸರ್ಗಿಕ ಸಂಬಂಧ ಹೊಂದಿರುವ ಸಂಘಟನೆಯ ಸದಸ್ಯರ ಶೋಧದಲ್ಲಿ ನಿರತವಾಗಿದೆ ಎಂದು 'ನ್ಯೂಯಾರ್ಕ್ ಪೋಸ್ಟ್' ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಳೆದ ಅಕ್ಟೋಬರ್ 7, 2023ರಂದು ಹಮಾಸ್ ನಡೆಸಿದ್ದ ದಾಳಿಯಲ್ಲಿ ಕನಿಷ್ಠ 1,200 ಇಸ್ರೇಲಿ ನಾಗರಿಕರು ಸಾವನ್ನಪ್ಪಿದ್ದರು. ಈ ಸಂದರ್ಭದಲ್ಲಿ ನೂರಾರು ಇಸ್ರೇಲಿ ನಾಗರಿಕರನ್ನು ಹಮಾಸ್ ಒತ್ತೆಯಾಳುಗಳನ್ನಾಗಿರಿಸಿಕೊಂಡಿತ್ತು. ಈ ಪೈಕಿ ಪುರುಷ ಒತ್ತೆಯಾಳುಗಳ ಮೇಲೆ ಹಮಾಸ್‌ನ ಸಲಿಂಗಿ ಸದಸ್ಯರು ಅತ್ಯಾಚಾರ ನಡೆಸಿದ್ದು ಎಂದು ಖುದ್ದು ಪ್ಯಾಲೆಸ್ಟೀನಿಯನ್ ಉಗ್ರ ಸಂಘಟನೆಯ ರಹಸ್ಯ ದಾಖಲೆಗಳಿಂದ ಬಹಿರಂಗವಾಗಿದೆ ಎಂದು ವರದಿ ಸ್ಪಷ್ಟಪಡಿಸಿದೆ.

ವಂಚನೆ ಪ್ರಕರಣ; ನಟ ಸೋನು ಸೂದ್ ವಿರುದ್ಧ ವಾರಂಟ್

ಲೂಧಿಯಾನ, ಫೆ.7– ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಿವುಡ್ ನಟ ಸೋನು ಸೂದ್ ವಿರುದ್ಧ ಲೂಧಿಯಾನ ನ್ಯಾಯಾಲಯದ ಮ್ಯಾಜಿಸ್ಟ್ರೇಟ್ ರಮಣ ಪ್ರೀತ್ ಕೌರ್ ಅವರು ಬಂಧನದ ವಾರಂಟ್ ಹೊರಡಿಸಿದ್ದಾರೆ.



ಮೋಹಿತ್ ಶುಕ್ಲಾ ಎಂಬಾತನ ವಿರುದ್ಧ ಲೂಧಿಯಾನ ಮೂಲದ ವಕೀಲ ರಾಜೇಶ್ ಖನ್ನಾ ಎಂಬುವವರು 10 ಲಕ್ಷ ರೂ.ಗಳ ವಂಚನೆ ಆರೋಪದ ಮೇಲೆ ಪ್ರಕರಣ ದಾಖಲಿಸಿದ್ದಾರೆ. ನಕಲಿ ರಿಜಿಕಾ ನಾಣ್ಯದಲ್ಲಿ ಹೂಡಿಕೆ ಮಾಡುವಂತೆ ತನಗೆ ಆಮಿಷ ಒಡ್ಡಿದ್ದಾರೆ ಎಂದು ದೂರಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿ ಹೇಳಲು ಸೋನು ಸೂದ್ ಅವರು ನ್ಯಾಯಾಲಯಕ್ಕೆ ಹಾಜರಾಗಬೇಕಿತ್ತು. ಆದರೆ, ಅವರು ಗೈರಾದ ಹಿನ್ನೆಲೆಯಲ್ಲಿ ಬಂಧನ ವಾರಂಟ್ ಹೊರಡಿಸಲಾಗಿದೆ. ಲೂಧಿಯಾನ ನ್ಯಾಯಾಲಯವು ಸೋನು ಸೂದ್ ಅವರನ್ನು ಬಂಧಿಸುವಂತೆ ಮುಂಬೈನ ಅಂಧೇರಿ ಪಶ್ಚಿಮದ ಓಶಿವಾರಾ ಪೊಲೀಸ್ ಠಾಣೆಯ ಪ್ರಭಾರ ಅಧಿಕಾರಿಗೆ ಸೂಚಿಸಿದೆ.

ಮಹಿಳಾ ಕ್ರೀಡೆಯಲ್ಲಿ ಟ್ರಾನ್ಸ್‌ಜೆಂಡರ್‌ಗಳಿಗೆ ನಿಷೇಧ ಹೇರಿದ ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್, ಫೆ.7– ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೆ ಮರಳಿದ ಕೂಡಲೇ ಟ್ರಾನ್ಸ್‌ಜೆಂಡರ್ ಕ್ರೀಡಾಪಟುಗಳ ಬಗ್ಗೆ ಕಠಿಣ ನಿಲುವು ತೆಗೆದುಕೊಳ್ಳುವುದಾಗಿ ಸ್ಪಷ್ಟಪಡಿಸಿದ್ದರು. ತಮ್ಮ ಭರವಸೆಯನ್ನು ಈಡೇರಿಸಿದ ಅವರು, ಮಹಿಳಾ ಕ್ರೀಡೆಗಳಲ್ಲಿ ಟ್ರಾನ್ಸ್‌ಜೆಂಡರ್ ಕ್ರೀಡಾಪಟುಗಳ ಭಾಗವಹಿಸುವಿಕೆಯನ್ನು ನಿಷೇಧಿಸುವ ಮಹತ್ವದ ಕಾರ್ಯಕಾರಿ ಆದೇಶವನ್ನು ಹೊರಡಿಸಿದ್ದಾರೆ. ಈಗ ಮಹಿಳಾ ಕ್ರೀಡೆಗಳಲ್ಲಿ ಯಾವುದೇ ಟ್ರಾನ್ಸ್‌ಜೆಂಡರ್ ಕ್ರೀಡಾಪಟುಗಳಿಗೆ ಅವಕಾಶ ನೀಡಲಾಗುವುದಿಲ್ಲ. ಈ ವಿಷಯದ ಬಗ್ಗೆ ನಡೆಯುತ್ತಿದ್ದ ಚರ್ಚೆ ಈಗ ಸಂಪೂರ್ಣವಾಗಿ ಅಂತ್ಯಗೊಂಡಿದೆ. ನಾವು ಮಹಿಳಾ ಕ್ರೀಡಾಪಟುಗಳ ವೈಭವದ ಪರಂಪರೆಯನ್ನು ರಕ್ಷಿಸುತ್ತೇವೆ ಎಂದು ಟ್ರಂಪ್ ಸ್ಪಷ್ಟವಾಗಿ ಹೇಳಿದರು.

ಟ್ರಾನ್ಸ್‌ಜೆಂಡರ್ ಕ್ರೀಡಾಪಟುಗಳು ವರ್ಷಗಳಿಂದ ಅಮೆರಿಕದ ಕ್ರೀಡಾ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. ಲಿಯಾ ಥಾಮಸ್, ನಿಕ್ಕಿ ಹಿಲ್ಟ್ಜ್ ಮತ್ತು ಕ್ಯಾಟ್ಲಿನ್ ಜೆನ್ನರ್‌ರಂತಹ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಅಮೆರಿಕಕ್ಕೆ ಪದಕಗಳನ್ನು ಗೆದ್ದಿದ್ದಾರೆ. ಆದರೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೊಸ ನಿರ್ಧಾರದ ನಂತರ ಟ್ರಾನ್ಸ್‌ಜೆಂಡರ್ ಕ್ರೀಡಾಪಟುಗಳು ಮಹಿಳಾ ಕ್ರೀಡೆಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ.

ಗಾಳಿಪಟ ದಾರ ಘಟಕದಲ್ಲಿ ಸ್ಫೋಟ; ಮಾಲೀಕ ಸೇರಿ ಮೂವರು ಸಾವು

ಬರೇಲಿ, ಫೆ.7– ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ಕ್ವಿಲಾ ಪ್ರದೇಶದಲ್ಲಿ ಗಾಳಿಪಟದ ದಾರ ತಯಾರಿಕಾ ಘಟಕದಲ್ಲಿ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ಮೂವರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಇಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಸಂಭವಿಸಿದ ಈ ಸ್ಫೋಟದಲ್ಲಿ ಕಾರ್ಖಾನೆ ಮಾಲೀಕರು ಸಹ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದ್ದಾರೆ. ಗಾಳಿಪಟದ ದಾರಗಳಿಗೆ ಲೇಪಿಸಲು ಸಲ್ಫರ್, ಪೊಟ್ಯಾಶ್ ಮತ್ತು ಗಾಜು ಮಿಶ್ರಣ ಮಾಡುವಾಗ ಸ್ಫೋಟ ಸಂಭವಿಸಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ(ಸಂಚಾರ) ತಿಳಿಸಿದ್ದಾರೆ.



ಘಟನೆಯಲ್ಲಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದರೆ, ಮೂರನೇ ವ್ಯಕ್ತಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಮೃತರನ್ನು ಕಾರ್ಖಾನೆ ಮಾಲೀಕ ಅತಿಕ್ ರಜಾ ಖಾನ್(45) ಮತ್ತು ಅವರ ಕೆಲಸಗಾರರಾದ ಫೈಜಾನ್(25) ಮತ್ತು ಸರ್ತಾಜ್(20) ಎಂದು ಗುರುತಿಸಲಾಗಿದೆ. ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ ಎಂದು ವೃತ್ತ ಅಧಿಕಾರಿ ಸಂದೀಪ್ ಕುಮಾರ್ ತಿಳಿಸಿದ್ದಾರೆ.

ರಜೆ ಕೊಡಲಿಲ್ಲವೆಂದು ನಾಲ್ವರು ಸಹೋದ್ಯೋಗಿಗೆ ಇರಿದ ಸರ್ಕಾರಿ ನೌಕರ!

ಕೋಲ್ಕೋತ್ತಾ, ಫೆ.7– ರಜೆ ಕೊಡಲಿಲ್ಲವೆಂದು ಸರ್ಕಾರಿ ನೌಕರನೊಬ್ಬ ತನ್ನ ನಾಲ್ವರು ಸಹೋದ್ಯೋಗಿಗೆ ಚಾಕುವಿನಿಂದ ಇರಿದಿರುವ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. ಬಿಧಾನ್ ನಗರ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ದಾಳಿಯಲ್ಲಿ ಗಾಯಗೊಂಡವರನ್ನು ಜಯದೇವ್ ಚಕ್ರವರ್ತಿ, ಸಂತನು ಸಹಾ, ಸಾರ್ಥ ಲೇಟ್ ಮತ್ತು ಶೇಖ್ ಸತ್ತುಲ್ ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಘಟನೆಯಲ್ಲಿ ಗಾಯಗೊಂಡ ಇಬ್ಬರ ಸ್ಥಿತಿ ಗಂಭೀರವಾಗಿದೆ ಆರೋಪಿ ಅಮಿತ್ ಸರ್ಕಾರ್ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಸಂಚಾರ ಪೊಲೀಸರು ಚಾಕುವನ್ನು ಕೆಳಗೆ ಇಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿ ಬಳಿಕ ಬಂಧಿಸಿದ್ದಾರೆ. ಅಮಿತ್ ರಜೆ ಕೇಳಿದ್ದರು, ಆದರೆ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಈ ಸಂಬಂಧ ಗುರುವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಕೋಲ್ಕತ್ತಾದ ನ್ಯೂಟೌನ್ ಪ್ರದೇಶದ ಕರಿಗರಿ ಭವನದಲ್ಲಿರುವ ತಮ್ಮ ಕಚೇರಿಯೊಳಗೆ ತಮ್ಮ ಸಹೋದ್ಯೋಗಿಗಳೊಂದಿಗೆ ವಾಗ್ವಾದ ನಡೆಸಿದ್ದು, ಬಳಿಕ ಚಾಕುವಿನಿಂದ ಇರಿದಿದ್ದಾರೆ. ಅಮಿತ್ ಸರ್ಕಾರ್ ಅವರ ಚಾಕು ದಾಳಿಯ ಸಮಯದಲ್ಲಿ ಅವರ ಕಚೇರಿಯ ಭದ್ರತಾ ಸಿಬ್ಬಂದಿಯೊಬ್ಬರಿಗೂ ಗಾಯವಾಗಿದೆ.

ಪೊಲೀಸ್ ವಿಚಾರಣೆಯ ಸಮಯದಲ್ಲಿ, ಆರೋಪಿಯು ತನ್ನ ಸಹೋದ್ಯೋಗಿಗಳು ತನ್ನ ತಂದೆಯ ಬಗ್ಗೆ ಅಸಭ್ಯವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದ್ದಾನೆ.

ಪೂರ್ಣಗೊಳ್ಳದ ಅಯ್ಯಂಗೇರಿ ಶಾಲೆ ಮೈದಾನ ಕಾಮಗಾರಿ

ತಕ್ಷಣ ಪೂರ್ಣಗೊಳಿಸದಿದ್ದಲ್ಲಿ ಎಸ್‌ಡಿಪಿಐ ಪ್ರತಿಭಟನೆ ಎಚ್ಚರಿಕೆ

ಮಡಿಕೇರಿ, ಫೆ.7–ಅಯ್ಯಂಗೇರಿ ಗ್ರಾಮದ ಸರ್ಕಾರಿ ಶಾಲೆ ಮೈದಾನ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸದಿದ್ದಲ್ಲಿ ಭಾಗಮಂಡಲ–ಅಯ್ಯಂಗೇರಿ ರಸ್ತೆ ತಡೆದು ಪ್ರತಿಭಟನೆ ನಡೆಸುವುದಾಗಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ಅಯ್ಯಂಗೇರಿ ಶಾಖೆ ಅಧ್ಯಕ್ಷ ಉಸ್ಮಾನ್ ಎಚ್ಚರಿಸಿದ್ದಾರೆ.

ಶಾಲಾ ಮೈದಾನ ಕಾಮಗಾರಿ ಸ್ಥಗಿತಗೊಂಡು ಎರಡು ತಿಂಗಳು ಕಳೆದಿದೆ. ಇದರಿಂದ ಮಸೀದಿಗೆ ತೆರಳುವ ಮಾರ್ಗವೂ ಇಲ್ಲೇ ಇದ್ದು, ಪಾದಚಾರಿಗಳ ಸಂಚಾರಕ್ಕೆ ಅಡಚಣೆಯಾಗಿದೆ. ಕಾಮಗಾರಿ ಪೂರ್ಣಗೊಳ್ಳದೆ ಇರುವುದರಿಂದ ಈ ಪ್ರದೇಶ



ಪೂರ್ಣಗೊಳ್ಳದ ಅಯ್ಯಂಗೇರಿ ಗ್ರಾಮದ ಸರ್ಕಾರಿ ಶಾಲಾ ಮೈದಾನದ ಕಾಮಗಾರಿ.

ಸಂಪೂರ್ಣವಾಗಿ ಧೂಳುಮಯವಾಗಿದೆ. ಶಾಲಾ ವಿದ್ಯಾರ್ಥಿಗಳು ಧೂಳಿನ ವಾತಾವರಣ ಮತ್ತು ಮಣ್ಣಿನಿಂದಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಂದಿನ ಏಳು ದಿನಗಳ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಗ್ರಾಮಸ್ಥರೊಂದಿಗೆ ರಸ್ತೆ ತಡೆದು ಪ್ರತಿಭಟನೆ ನಡೆಸುವುದಾಗಿ ಉಸ್ಮಾನ್ ಎಚ್ಚರಿಸಿದ್ದಾರೆ.

ಪುನರುತ್ಥಾನಗೊಂಡ ಕಾಂಡಂಡ ಐನ್ ಮನೆ ಉದ್ಘಾಟನೆ

ನಾಪೋಕ್ಲು, ಫೆ.7(ದುಗ್ಗಳ)– ಸಮೀಪದ ಕೊಳಕೇರಿ ಗ್ರಾಮದ ಕಾಂಡಂಡ ಕುಟುಂಬಸ್ಥರ ಪುನರುತ್ಥಾನಗೊಂಡ ಐನ್ ಮನೆ ಉದ್ಘಾಟನೆ ವಿಜೃಂಭಣೆಯಿಂದ ನಡೆಯಿತು.

ನೂರಾರು ವರ್ಷಗಳ ಹಳೆಯ ಐನ್ ಮನೆಯನ್ನು, ದಾನಿಗಳ ನೆರವಿನಿಂದ ಸುಮಾರು ಒಂದು ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗಿದ್ದು, ಕಂಗೊಳಿಸುತ್ತಿದೆ. ಪಟ್ಟೇದಾರ ಕಾಂಡಂಡ ಎ.ಸುಬ್ಬಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ಇದೇ ವೇಳೆ ಅತಿಥಿಗಳು, ನಶಿಸುತ್ತಿರುವ ಆಚಾರ–ವಿಚಾರ, ಸಂಸ್ಕೃತಿ, ಸಂಪ್ರದಾಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಶುಭ ಹಾರೈಸಿದರು.



ಕೊಳಕೇರಿ ಗ್ರಾಮದ ಕಾಂಡಂಡ ಕುಟುಂಬಸ್ಥರ ಪುನರುತ್ಥಾನಗೊಂಡ ಐನ್ ಮನೆ ಕಾರ್ಯಕ್ರಮವನ್ನು ಪಟ್ಟೇದಾರ ಕಾಂಡಂಡ ಎ.ಸುಬ್ಬಯ್ಯ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಕುಟುಂಬದ ಕಾರ್ಯದರ್ಶಿ ಜಯ ಕರುಂಬಯ್ಯ, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಪೊನ್ನಣ್ಣ, ದಾಮೋದರ ಆಚಾರ್ ಅವರನ್ನು ಸನ್ಮಾನಿಸಲಾಯಿತು.

ಕುಂಡ್ಯೋಳಂಡ ಎ.ಸುಬ್ಬಯ್ಯ, ಬೊಳಿಯಾಡಿರ ರಾಜ ಸೋಮಯ್ಯ, ಪುಚ್ಚಿಮಂಡ ಸಾಬು ಕುಟ್ಟಪ್ಪ, ಮಡೆಪಂಡ ಸುಂದರಿ ಕುಟ್ಟಪ್ಪ, ಬಿದ್ದಾಟಂಡ ಡಿಕ್ಕಿ ಸೋಮಯ್ಯ, ಬೊಲಿ ಯಾಡಿರ ಬೊಳ್ಳವ್ವ, ಕನ್ನಂಬಿರ ಚಂಗಪ್ಪ, ಬೊಟ್ಟೋಳಂಡ ಅಪ್ಪಣ್ಣ, ಕೇಟೋಳಿರ ಕುಟ್ಟಪ್ಪ, ಕಲಿಯಂಡ ಮಾದಪ್ಪ, ಅಪ್ಪಚ್ಚಿರ ಬೆಳ್ಯಪ್ಪ, ಕೊಂಬಾರನ ಚೋಮುಣಿ, ಕಾಂಡಂಡ ಜೋಯಪ್ಪ, ಕಾಂಡಂಡ ಚರ್ಮಣ, ಕಾಂಡಂಡ ಎಂ.ಬೋಪಣ್ಣ, ಕಾಂಡಂಡ ಪರಿಧಿ ಪೂವವ್ವ, ರೇಖಾ ಪೊನ್ನಣ್ಣ ಪಾಲ್ಗೊಂಡಿದ್ದರು.

ಹೆಣ್ಣು ಮಕ್ಕಳ ಹಕ್ಕು ಕುರಿತು ಸಂವಹನ



ಸೋಮವಾರಪೇಟೆಯಲ್ಲಿ ನಡೆದ ಸಂವಹನ ಕಾರ್ಯಾಗಾರದಲ್ಲಿ ಸಬ್ ಇನ್ಸ್‌ಪೆಕ್ಟರ್ ಮುದ್ದು ಮಾದೇವ ಮಾತನಾಡಿದರು.

ಮಡಿಕೇರಿ, ಫೆ.7–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಜಿಲ್ಲಾ ಮಹಿಳಾ ಸಹಾಯವಾಣಿ ಸಹಯೋಗದಲ್ಲಿ ಮಿಷನ್ ಶಕ್ತಿ ಯೋಜನೆಯಡಿ ಸೋಮವಾರಪೇಟೆಯಲ್ಲಿ ಶಾಲಾ–ಕಾಲೇಜುಗಳಲ್ಲಿ ಹೆಣ್ಣು ಮಕ್ಕಳ ಹಕ್ಕುಗಳ ಕುರಿತು ಸಂವಹನ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಸೋಮವಾರಪೇಟೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀದೇವಿ ಮುಧೋಳ್, ಮಕ್ಕಳು ಓದಿನೊಂದಿಗೆ ಕ್ರೀಯಾಶೀಲಾತ್ಮಕ ಮನೋಭಾವನೆ ಬೆಳೆಸಿಕೊಳ್ಳಬೇಕು ಹಾಗೂ ಸದಾ ಚಟುವಟಿಕೆಯಿಂದ ಕೂಡಿರಬೇಕು. ಜೊತೆಗೆ ಓದಿಗೆ ಮಹತ್ವ ನೀಡಬೇಕು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಹಿಳಾ ಸಬಲೀಕರಣ ಘಟಕದ ಜೆಂಡರ್ ಸ್ಪೆಷಲಿಸ್ಟ್ ಎಸ್.ಆರ್.ಕೇಶಿನಿ ಮಾತನಾಡಿ, ಹೆಣ್ಣುಭ್ರೂಣ ಹತ್ಯೆ, ಮಗುವಿನ ಸಾಮಾಜಿಕ ಧೋರಣೆ, ಮಕ್ಕಳ ರಕ್ಷಣೆ, ಬಾಲ್ಯವಿವಾಹ, 18 ವರ್ಷ ತುಂಬುವವರೆಗೂ ಮಕ್ಕಳಿಗೆ ಬದುಕುವ ಹಕ್ಕಿದೆ. ಮಕ್ಕಳಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡುವುದು ಅಪರಾಧ. ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸಲಹೆ ನೀಡಿದರು.

ಸೋಮವಾರಪೇಟೆ ಪೊಲೀಸ್ ಠಾಣೆ ನಿರೀಕ್ಷಕ ಮುದ್ದು ಮಾದೇವ, ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಹದಿಹರೆಯ ವಯಸ್ಸಿನಲ್ಲಿ ಹೆಣ್ಣು ಮಕ್ಕಳು ಏಕಾಗ್ರತೆಯನ್ನು ಬೆಳಸಿಕೊಳ್ಳುವುದು ಅವಶ್ಯವಾಗಿದ್ದು, ಬೇರೆಡೆಗೆ ಆಕರ್ಷಿತರಾಗದೆ ಓದಿನಲ್ಲಿ ಆಸಕ್ತಿ ಬೆಳಸಿಕೊಳ್ಳಬೇಕು. ಇತ್ತೀಚಿಗೆ ಪೋಕ್ಸೋ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅವುಗಳಿಂದ ಮಕ್ಕಳ ಮೇಲೆ ಪರಿಣಾಮಗಳಾಗುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಹಿಳಾ ಸಬಲೀಕರಣ ಘಟಕದ ಜಿಲ್ಲಾ ಮಿಷನ್ ಸಂಯೋಜಕಿ ಬಿ.ಎಸ್.ಮಮತಾ, ಸೋಮವಾರಪೇಟೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಬೆಳ್ಳಿಯಪ್ಪ, ಪೊಲೀಸ್ ಲೋಕೇಶ್, ದೈಹಿಕ ಶಿಕ್ಷಣ ಶಿಕ್ಷಕ ಬಸವರಾಜು, ಮಹಿಳಾ ಸಾಂತ್ವನ ಸಿಬ್ಬಂದಿಯಾದ ಶ್ವೇತಾ, ಮನ್ವಿತಾ, ಪೋಷಣಾ ಅಭಿಯಾನದ ತಾಲೂಕು ಸಂಯೋಜಕಿ ರಂಜಿತಾ ಹಾಜರಿದ್ದರು.

ಇದೇ ವೇಳೆ ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕಾಂಗ್ರೆಸ್ ದೂರಿಗೆ ಬಿಜೆಪಿ ಖಂಡನೆ

ಮಡಿಕೇರಿ, ಫೆ.7–ನಾಪೋಕ್ಲು ಗ್ರಾಮ ಪಂಚಾಯಿತಿ ಕಟ್ಟಡದ ಶೌಚಾಲಯದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವಂತೆ 'ಕೊಡಗಿನ ಸಮಸ್ಯೆಗಳು ಮತ್ತು ಸಲಹೆ ಸೂಚನೆಗಳು' ಎಂಬ ವಾಟ್ಸ್‌ಪ್ ಗ್ರೂಪ್‌ನಲ್ಲಿ ನಡೆದ ಚರ್ಚೆಗೆ ಸಂಬಂಧಿಸಿದಂತೆ ಗ್ರೂಪ್ ಅಡ್ಮಿನ್‌ಗಳ ವಿರುದ್ಧ ಕಾಂಗ್ರೆಸ್ ದೂರು ನೀಡಿರುವುದು ಖಂಡನೀಯ ಎಂದು ಕೊಡಗು ಜಿಲ್ಲಾ ಬಿಜೆಪಿ ಅಸಮಾಧಾನ ವ್ಯಕ್ತಪಡಿಸಿದೆ.



ನಾಪಂಡ ರವಿ ಕಾಳಪ್ಪ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ದೇಶದಲ್ಲಿ ಸ್ವಚ್ಛ ಭಾರತ್ ಅಭಿಯಾನ ಹೆಚ್ಚು ಪರಿಣಾಮಕಾರಿಯಾಗಿದೆ. ಆದರೆ, ಕೊಡಗು ಜಿಲ್ಲೆಯ ನಾಪೋಕ್ಲು ಗ್ರಾಪಂನ ಶೌಚಾಲಯ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದೆ. ಇದನ್ನು ಮನಗಂಡು 'ಕೊಡಗಿನ ಸಮಸ್ಯೆಗಳು ಮತ್ತು ಸಲಹೆ ಸೂಚನೆಗಳು' ಎಂಬ ವಾಟ್ಸ್‌ಪ್ ಗ್ರೂಪ್‌ನಲ್ಲಿ ಚರ್ಚೆ ನಡೆದಿದೆ. ಶೌಚಾಲಯದ ಫೋಟೋಗೆ ಸ್ಥಳೀಯ ಶಾಸಕರ ಫೋಟೋವನ್ನು ಎಡಿಟ್ ಮಾಡಿ ಹಾಕಿದರು ಎಂಬ ಕಾರಣಕ್ಕೆ ವಾಟ್ಸ್‌ಪ್ ಗ್ರೂಪ್‌ನ ಅಡ್ಮಿನ್‌ಗಳ ವಿರುದ್ಧ ಕಾಂಗ್ರೆಸ್ ಪ್ರಕರಣ ದಾಖಲಿಸಿರುವುದು ಖಂಡನೀಯ ಎಂದು ತಿಳಿಸಿದ್ದಾರೆ.

ಗ್ರಾಪಂ ಮಟ್ಟದಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡದೆ ಇದ್ದಾಗ ಆ ಕ್ಷೇತ್ರದ ಶಾಸಕರ ಗಮನಕ್ಕೆ ತರುವ ಪ್ರಯತ್ನ ಮಾಡಲಾಗಿದೆ. ಶಾಸಕರು ಸಮಸ್ಯೆ ಬಗ್ಗೆ ಗಮನ ಹರಿಸಿ ಶೌಚಾಲಯ ಶುಚಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕಾಗಿತ್ತು. ಶಾಸಕರ ಫೋಟೋ ಹಾಕಿದ್ದರಿಂದ ತೇಜೋವಧೆ ಆಗಿದ್ದರೆ ಪ್ರಕರಣ ದಾಖಲಿಸಲಿ. ಅದನ್ನು ಬಿಟ್ಟು ಚರ್ಚೆ ಮಾಡಿದ ಗ್ರೂಪ್ ಅಡ್ಮಿನ್‌ಗಳ ವಿರುದ್ಧವೇ ರಾಜಕೀಯ ದುರುದ್ದೇಶದಿಂದ ಪ್ರಕರಣ ದಾಖಲಿಸಿರುವುದು ಸರಿಯಲ್ಲ ಎಂದು ಹೇಳಿದ್ದಾರೆ.

ಆಡಳಿತ ಪಕ್ಷ ಪೊಲೀಸ್ ಇಲಾಖೆಯನ್ನು ತಮ್ಮ ಪರ ಕೆಲಸ ಮಾಡುವಂತೆ ಒತ್ತಾಯಿಸಿ ಈ ರೀತಿ ಪ್ರಕರಣ ದಾಖಲು ಮಾಡುವುದನ್ನು ತಕ್ಷಣ ನಿಲ್ಲಿಸಬೇಕು. ಪೊಲೀಸರು ಕೂಡ ಆಡಳಿತ ಪಕ್ಷದ ಕೈಗೊಂಬೆಯಂತೆ ವರ್ತಿಸದೆ ಕಾನೂನಿಗೆ ಗೌರವ ನೀಡಿ ಕರ್ತವ್ಯ ನಿರ್ವಹಿಸಬೇಕೆಂದು ನಾಪಂಡ ರವಿ ಕಾಳಪ್ಪ ಒತ್ತಾಯಿಸಿದ್ದಾರೆ.

ಫೆ.10, ಶರಣರ ಜಯಂತಿ

ಮಡಿಕೇರಿ, ಫೆ.7–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಕಾಯಕ ಶರಣರ ಜಯಂತಿ ಕಾರ್ಯಕ್ರಮ ಫೆ.10ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ನಿವೃತ್ತ ಮುಖ್ಯ ಶಿಕ್ಷಕಿ ಜಲಜಾ ಶೇಖರ್ ಇತರರು ಪಾಲ್ಗೊಳ್ಳಲಿದ್ದಾರೆ.

ಕಾಮಗಾರಿ ಹೆಸರಲ್ಲಿ ಸರ್ಕಾರದ ಹಣ ವ್ಯರ್ಥ: ನಾಗರಿಕ ಸಮಿತಿ ಆರೋಪ

ವಿರಾಜಪೇಟೆ: ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಛತ್ರಕೆರೆ ಮತ್ತು ಗೌರಿಕೆರೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಕೆರೆಗಳನ್ನು ಸುಂದರಗೊಳಿಸುವ ಹೆಸರಿನಲ್ಲಿ ಸರ್ಕಾರದ ಅನುದಾನ ವ್ಯರ್ಥವಾಗುತ್ತಿದೆ ಎಂದು ನಾಗರಿಕ ಸಮಿತಿ ಮುಖಂಡ ಡಾ.ಇ.ರಾ.ದುರ್ಗಪ್ರಸಾದ್ ದೂರಿದರು.

ಪಟ್ಟಣದ ನಾಗರಿಕ ಸಮಿತಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರಾಜಪೇಟೆ ಕ್ಷೇತ್ರದ ಶಾಸಕರು ಸರ್ಕಾರದ ಅನುದಾನವನ್ನು ಕಾಮಗಾರಿಗಳಿಗೆ ಸರಿಯಾಗಿ ಬಳಸಬೇಕು. ಛತ್ರಕೆರೆ ಅಭಿವೃದ್ಧಿಗೆ 1.30 ಕೋಟಿ ರೂ. ಹಾಗೂ ಗೌರಿಕೆರೆ ಅಭಿವೃದ್ಧಿಗೆ 1.32 ಕೋಟಿ ರೂ. ಬಳಸಲಾಗುತ್ತಿದೆ ಎಂದು ಹೇಳಲಾಗಿದೆ. ಜೈನರ ಮುಖ್ಯ ರಸ್ತೆಬದಿ ಉದ್ಯಾನ ನಿರ್ಮಿಸಲು 3.16 ಕೋಟಿ ರೂ.



ಸುದ್ದಿಗೋಷ್ಠಿಯಲ್ಲಿ ನಾಗರಿಕ ಸಮಿತಿ ಮುಖಂಡ ಡಾ.ಇ.ರಾ.ದುರ್ಗಪ್ರಸಾದ್ ಮಾತನಾಡಿದರು.

ಅನುದಾನ ನೀಡಲಾಗಿದೆ ಹೇಳಲಾಗಿದೆ. ಆದರೆ, ಪಟ್ಟಣದ ನಿವಾಸಿಗಳಿಗೆ ಮೂಲ ಸೌಲಭ್ಯಗಳೇ ಇಲ್ಲದಿರುವಾಗ ಉದ್ಯಾನದ ಅವಶ್ಯವಿದೆಯೇ? ಎಂದು ಪ್ರಶ್ನಿಸಿದರು.

ಕೆರೆಗಳು ಒತ್ತುವರಿಯಾಗಿದ್ದು, ಛತ್ರಕೆರೆ ನಾಲ್ಕು ಬದಿಯ ರಸ್ತೆಗಳನ್ನು ಸಾರ್ವಜನಿಕರು ಬಳಸುತ್ತಿದ್ದಾರೆ. ಆದರೆ, 1.31 ಕೋಟಿ ರೂ. ವೆಚ್ಚದ ಕಾಮಗಾರಿ ನಡೆಸಲು ಅವಕಾಶ ಎಲ್ಲಿದೆ? ಗೌರಿಕೆರೆ ಇಕ್ಕಟ್ಟಿನ ಜಾಗದಲ್ಲಿ 1.32 ಕೋಟಿ ರೂ. ಅನುದಾನದ ಕಾಮಗಾರಿ ನಡೆಸಲು ಹೇಗೆ ಸಾಧ್ಯ? ಈ ಕಾಮಗಾರಿಗಳಿಗೆ ಇಷ್ಟೊಂದು ಮೊತ್ತ ಅಗತ್ಯವೇಕೆ? ಸರ್ಕಾರದಿಂದ ದೊಡ್ಡ ಮೊತ್ತದ ಅನುದಾನ ಪಡೆದು ಸ್ವಲ್ಪ ಹಣ ಖರ್ಚು ಮಾಡುವ ಯೋಜನೆಯೇ ಎಂದು ತಿಳಿಸಿದರು.

ಪುರಸಭೆ ವ್ಯಾಪ್ತಿಯ ಜನಸಾಮಾನ್ಯರಿಗೆ ಮೂಲಸೌಕರ್ಯವನ್ನು ಸಮರ್ಪಕವಾಗಿ ಒದಗಿಸಲು ಸಾಧ್ಯವಾಗದೇ, ಈಗ ಉದ್ಯಾನಗಳ ಹೆಸರಿನಲ್ಲಿ ಇಷ್ಟೊಂದು ಮೊತ್ತವನ್ನು ಪೋಲು ಮಾಡುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಳೆಟೀರ ಎಸ್.ಕಾಳಯ್ಯ ಮಾತನಾಡಿ, ಕೆರೆಗಳ ಅಭಿವೃದ್ಧಿಗೆ ಹಸಿರು ರಾಷ್ಟ್ರೀಯ ನ್ಯಾಯಮಂಡಳಿ ಆದೇಶ ಆಗಬೇಕು. ಇಲ್ಲದಿದ್ದರೆ ಕರ್ನಾಟಕ ಕೆರೆ ಸಂರಕ್ಷಣೆ, ಸರ್ಕಾರದ ಸುತ್ತೋಲೆ ಮತ್ತು ಅಧಿನಿಯಮ ಭೂ ಕಬಳಿಕೆ ನಿಷೇಧ ಕಾಯ್ದೆ ಉಲ್ಲಂಘನೆಯಾಗುತ್ತದೆ. ಇದು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಜವಾಬ್ದಾರಿಯಾಗಿದೆ. ಕಾನೂನು ಬಾಹಿರವಾಗಿ ಕೆರೆಗಳ ಕಾಮಗಾರಿ ನಡೆಸಿ, ಹಣ ಪೋಲು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಪಿ.ಕೆ.ಅಬ್ದುಲ್ ರೆಹಮನ್, ಎನ್.ಕೆ.ಶರೀಫ್ ಉಪಸ್ಥಿತರಿದ್ದರು.

ಮಹದೇಶ್ವರ ಬೆಟ್ಟದಲ್ಲಿ ಫೆ.25ರಿಂದ ಶಿವರಾತ್ರಿ ಜಾತ್ರೆ

ಚಾಮರಾಜನಗರ, ಫೆ.7–ಪ್ರಸಿದ್ಧ ಮಲೆಮಹದೇಶ್ವರಬೆಟ್ಟದಲ್ಲಿ ಫೆ.25 ರಿಂದ ಮಹಾಶಿವರಾತ್ರಿ ಹಾಗೂ ಮಾ.27 ರಿಂದ ಯುಗಾದಿ ಜಾತ್ರಾ ಮಹೋತ್ಸವ ಆರಂಭವಾಗಲಿದ್ದು, ವಿವಿಧ ಪೂಜಾ ಕೈಂಕರ್ಯ ನಡೆಯಲಿವೆ.

ಫೆ.25ರಂದು ಶಿವರಾತ್ರಿ ಜಾತ್ರೆ ಪ್ರಾರಂಭವಾಗಲಿದ್ದು, 26ರಂದು ಎಣ್ಣೆಮಜ್ಜನ, ಜಾಗರಣೆ ಉತ್ಸವ, 27ರಂದು ವಿಶೇಷ ಸೇವೆ ಉತ್ಸವಾದಿಗಳು, 28ರಂದು ಅಮಾವಾಸ್ಯೆ ಪೂಜೆ ನಡೆಯಲಿದೆ. ಮಾ.1ರಂದು ಬೆಳಗ್ಗೆ 8.10 ರಿಂದ 8.45ರವರೆಗೆ ರಥೋತ್ಸವ ನಡೆಯಲಿದೆ. ರಾತ್ರಿ ಅಭಿಷೇಕ, ಪೂಜೆ ನಂತರ ಕೊಂಡೋತ್ಸವ ಜರುಗಲಿದೆ.

ಮಾ.27ರಂದು ಯುಗಾದಿ ಜಾತ್ರೆ ಪ್ರಾರಂಭವಾಗಲಿದ್ದು, 28ರಂದು ಎಣ್ಣೆಮಜ್ಜನ, ವಿಶೇಷ ಸೇವೆ ಉತ್ಸವ, 29ರಂದು ಅಮಾವಾಸ್ಯೆ ಪೂಜೆ ಹಾಗೂ 30ರಂದು ಬೆಳಗ್ಗೆ 8 ರಿಂದ 9 ಗಂಟೆವರೆಗೆ ಚಾಂದ್ರಮಾನ ಯುಗಾದಿ ರಥೋತ್ಸವ ನಡೆಯಲಿದೆ ಎಂದು ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ.ರಘು ತಿಳಿಸಿದ್ದಾರೆ.



ಮಹದೇಶ್ವರಬೆಟ್ಟ

ಬಿಳಿಗಿರಿರಂಗನಬೆಟ್ಟದ ಹುಂಡಿಯಲ್ಲಿ 16.46 ಲಕ್ಷ ಸಂಗ್ರಹ



ಬಿಳಿಗಿರಿರಂಗನಬೆಟ್ಟದ ದೇಗುಲದಲ್ಲಿ ಹುಂಡಿ ಎಣಿಕೆ ಮಾಡಲಾಯಿತು.

ಯಳಂದೂರು, ಫೆ.7–ತಾಲೂಕಿನ ಪ್ರಸಿದ್ಧ ಪ್ರವಾಸಿತಾಣ ಬಿಳಿಗಿರಿರಂಗನಬೆಟ್ಟದ ಶ್ರೀ ರಂಗನಾಥಸ್ವಾಮಿ ದೇಗುಲದ ಹುಂಡಿಯಲ್ಲಿ 16,46,479 ರೂ. ಸಂಗ್ರಹವಾಗಿದೆ.

ದೇಗುಲದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆದಿದ್ದು, 41 ಅಮೆರಿಕನ್ ಡಾಲರ್ ಹಾಗೂ ಎರಡು ಚಿನ್ನದ ತಾಳಿಬೊಟ್ಟು, ಬೆಳ್ಳಿ ಕಾಲಿನ ಚೈನು ಸಂಗ್ರಹವಾಗಿದೆ ಎಂದು ದೇಗುಲ ಇಓ ಮೋಹನ್ ಕುಮಾರ್ ಮಾಹಿತಿ ನೀಡಿದರು.

ಎಣಿಕೆ ಕಾರ್ಯದಲ್ಲಿ ದೇಗುಲ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಪ್ರಧಾನ ಅರ್ಚಕ ರವಿಕುಮಾರ್, ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ವೀರಭದ್ರಸ್ವಾಮಿ, ಪಾರುಪತ್ತೇದಾರ ರಾಜು, ಸಿಬ್ಬಂದಿ ಹಾಜರಿದ್ದರು.

ಸಂಪುಟ ಸಭೆಗೂ ಮುನ್ನ ರೈತರ ಸಭೆ ನಡೆಸಿ

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜು ಒತ್ತಾಯ

ಚಾಮರಾಜನಗರ, ಫೆ.7–ಮಲೆಮಹದೇಶ್ವರ ಬೆಟ್ಟದಲ್ಲಿ ಫೆ.17ರಂದು ನಡೆಯುವ ರಾಜ್ಯ ಸಚಿವ ಸಂಪುಟ ಸಭೆಗೂ ಮೊದಲು ರೈತರ ಸಭೆಯನ್ನು ಜಿಲ್ಲಾಡಳಿತ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆಸಬೇಕು ಎಂದು ರಾಜ್ಯ ಕಬ್ಬು ಬೆಳೆಗಾರ ಸಂಘದ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜು ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಚಿವ ಸಂಪುಟ ಸಭೆಯಲ್ಲಿ ಮುಖ್ಯವಾಗಿ ರೈತರ ಸಮಸ್ಯೆಗಳ ಕುರಿತು ಚರ್ಚಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯ ರೈತರ ಸಭೆ ನಡೆಸಿ, ಅದನ್ನು ಸಂಪುಟ ಸಭೆ ಮುಂದಿಡಬೇಕು. ಇಲ್ಲದಿದ್ದರೆ ಫೆ.17ರಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ರೈತಪರ ಸಂಘಟನೆಗಳಿಂದ ಟ್ರ್ಯಾಕ್ಟರ್, ಎತ್ತಿನಗಾಡಿ, ಪಾದಯಾತ್ರೆ ಮೂಲಕ ಮಹದೇಶ್ವರಬೆಟ್ಟಕ್ಕೆ ತೆರಳಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರೈತರ ಬೇಡಿಕೆಗಳು: ಪ್ರಸಕ್ತ ಸಾಲಿನ ಕಬ್ಬಿಗೆ 5500 ರೂ. ದರ ನಿಗದಿ ಮಾಡಬೇಕು. ಕಳೆದ ಸಾಲಿನ ಬಾಕಿ 950 ಕೋಟಿ ರೂ. ಅನ್ನು ರೈತರಿಗೆ ತಕ್ಷಣ ನೀಡಬೇಕು. ರಾಜ್ಯದ ರೈತರ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಹಾಲಿನ ಪ್ರೋತ್ಸಾಹಧನ 800



ಚಾಮರಾಜನಗರ ಪ್ರವಾಸಿ ಮಂದಿರದಲ್ಲಿ ನಡೆದ ರೈತ ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜು ಮಾತನಾಡಿದರು.

ಕೋಟಿ ರೂ. ಬರಬೇಕಾಗಿದೆ. ತಕ್ಷಣ ಅದನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು.

ಮೈಕ್ರೋ ಫೈನಾನ್ಸ್ ಹಾವಳಿಯಿಂದ ತತ್ತರಿಸಿರುವ ರೈತರಿಗೆ ರಾಷ್ಟ್ರೀಕೃತ ಹಾಗೂ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಸಿಗುವಂತೆ ಕ್ರಮ ವಹಿಸಬೇಕು. ಗ್ರಾಮೀಣ ಭಾಗದಲ್ಲಿ ಅಕ್ರಮ ಬಡ್ಡಿ ವ್ಯವಹಾರ ನಡೆಸುವವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬಗರ್‌ಹುಕುಂ ಸಾಗುವಳಿದಾರರ ಚೀಟಿಯನ್ನು ತಕ್ಷಣ ನೀಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರ ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕು.


ಕೃಷಿ ವಿದ್ಯುತ್ ಖಾಸಗೀಕರಣ ಮಾಡುವುದನ್ನು ತಕ್ಷಣ ಕೈ ಬಿಟ್ಟು ಅಕ್ರಮ–ಸಕ್ರಮ ಯೋಜನೆ ಮರು ಜಾರಿ ಮಾಡಬೇಕು. ರೈತರ ಕೃಷಿ ಪಂಪ್‌ಸೆಟ್‌ಗಳ ಸಂಪರ್ಕ ಕಡಿತ ಮಾಡುತ್ತಿರುವುದನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ಸಾಲಕ್ಕೆ ಸಿಬಿಲ್ ಸ್ಕೋರ್ ಪರಿಗಣಿಸಬಾರದು. ಆರ್‌ಟಿಸಿಗಳಲ್ಲಿ ವಕ್ಫ್ ಮಂಡಳಿ ಹೆಸರು ಬಂದಿರುವುದನ್ನು ತಿದ್ದುಪಡಿಗೊಳಿಸಲು ಆದೇಶವನ್ನು ಗೆಜೆಟ್ ನೋಟಿಫಿಕೇಶನ್‌ನಲ್ಲಿ ಪ್ರಕಟಿಸಬೇಕು. ಕಾಡುಪ್ರಾಣಿಗಳ ಹಾವಳಿಯಿಂದ ನಷ್ಟ ಹೊಂದಿರುವ ರೈತರಿಗೆ ವೈಜ್ಞಾನಿಕ ಬೆಳೆ ನಷ್ಟ ನೀಡಬೇಕು. ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ನೊಂದಿರುವ ರೈತರಿಗೆ ವೈಜ್ಞಾನಿಕವಾಗಿ ಬೆಳೆ ನಷ್ಟ ನೀಡಲು ಕ್ರಮ ಕೈಗೊಳ್ಳಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಪರಿಹಾರ ನೀಡಬೇಕು ಎಂದರು.

ಸಭೆಯಲ್ಲಿ ಸಂಘಟನೆ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಉಪಾಧ್ಯಕ್ಷ ಪ್ರವೀಣ್, ತಾಲೂಕು ಅಧ್ಯಕ್ಷ ಅರಳಿಕಟ್ಟೆ ಕುಮಾರ್, ಪ್ರಕಾಶ್, ಪ್ರಭುಸ್ವಾಮಿ, ಶ್ರೀಕಂಠ, ನಂದೀಶ್, ರಾಜು, ಬಸವರಾಜು, ರಾಜುಗೌಡ, ವೆಂಕಟರಾಮ್ ಇತರರು ಇದ್ದರು.

ಇಂದು ಜಯಣ್ಣ ಸ್ಮರಣಾಂಜಲಿ ಕಾರ್ಯಕ್ರಮ

ಚಾಮರಾಜನಗರ, ಫೆ.7–ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಫೆ.8ರಂದು ಬೆಳಗ್ಗೆ 11 ಗಂಟೆಗೆ ಮಾಜಿ ಶಾಸಕ ದಿ.ಎಸ್.ಜಯಣ್ಣ ಅವರ ಸ್ಮರಣಾಂಜಲಿ ಕಾರ್ಯಕ್ರಮವನ್ನು ಅವರ ಅಭಿಮಾನಿ ಬಳಗದಿಂದ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಡಾ.ವಿ.ಎನ್.ಮಹದೇವಯ್ಯ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಳತೆಗೆ ಮತ್ತೊಂದು ಹೆಸರೇ ಮಾಜಿ ಶಾಸಕ ಜಯಣ್ಣ. ಅವರನ್ನು ಜನಮಾನಸದಲ್ಲಿ ಹಸಿರಾಗಿರಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಕರ್ನಾಟಕ ಬಿಕ್ಕು ಮಹಾಸಂಘದ ಅಧ್ಯಕ್ಷ ಬಂತೆ ಭೋದಿರತ್ನ, ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಸುನೀಲ್ ಬೋಸ್, ಶಾಸಕರಾದ ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಭಿಮಾನಿಗಳ ಬಳಗದ ಸದಸ್ಯರಾದ ಎಸ್.ಸುಂದರ್ ಕುಮಾರ್, ಹೆಚ್.ಶ್ರೀನಿವಾಸ್, ಮಾಂಬಳ್ಳಿ ಮಹದೇವು, ಎಂ.ರಾಜೇಂದ್ರ, ಮಹೇಶ್ ಹಾಜರಿದ್ದರು.

ಹೆಣ್ಣು ಮಕ್ಕಳ ರಕ್ಷಣೆ ಎಲ್ಲರ ಕರ್ತವ್ಯ: ನ್ಯಾಯಾಧೀಶ ಈಶ್ವರ್

ಚಾಮರಾಜನಗರ, ಫೆ.7–ಹೆಣ್ಣು ಮಕ್ಕಳ ರಕ್ಷಣೆಗೆ ಕಟ್ಟುನಿಟ್ಟಿನ ಕಾನೂನು ಜಾರಿಯಾಗುತ್ತಿದ್ದರೂ ಬಾಲ್ಯವಿವಾಹ ಪ್ರಕರಣಗಳು ಮರುಕಳಿಸುತ್ತಿರುವುದು ವಿಷಾದನೀಯ. ಮಕ್ಕಳ ಬಗ್ಗೆ ಪೋಷಕರು ಸದಾ ಎಚ್ಚರಿಕೆಯಿಂದ ಇದ್ದು, ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಸಲಹೆ ನೀಡಿದರು.

ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಪಂ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ, ಪೊಲೀಸ್ ಇಲಾಖೆ ಸಹಯೋಗದಲ್ಲಿ ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮದಡಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳ ರಕ್ಷಣೆ, ಬಾಲ್ಯವಿವಾಹ ಪದ್ಧತಿ ನಿರ್ಮೂಲನೆಗೆ ಹೊಸ ಕಾನೂನು ಹಾಗೂ ಸುತ್ತೋಲೆಗಳು ಬರುತ್ತಿವೆ. ಆದರೂ ಮಕ್ಕಳ ಹಕ್ಕುಗಳು ಉಲ್ಲಂಘನೆಯಾಗುತ್ತಿದೆ. ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಬಾಲ್ಯವಿವಾಹ ಪ್ರಕರಣಗಳನ್ನು ತಡೆಗಟ್ಟುವ ಹೊಣೆ ಪ್ರತಿಯೊಬ್ಬರ ಮೇಲಿದೆ ಎಂದರು.

ಮಕ್ಕಳ ಭಾಗವಹಿಸುವಿಕೆ, ಮಾತನಾಡುವ, ಶಿಕ್ಷಣ ಇನ್ನು ಮುಂತಾದ ಹಕ್ಕುಗಳ ಬಗ್ಗೆ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡಬೇಕಾಗಿದೆ. ಮಕ್ಕಳನ್ನು ಸಮಾಜದ ಸಭ್ಯ ಪ್ರಜೆಗಳಾಗಿ ರೂಪಿಸಬೇಕಿದೆ. ಬಾಲ್ಯ ವಿವಾಹ ನಿಷೇಧ ಕಾಯ್ದೆ ಪ್ರಕಾರ ಸಣ್ಣ ವಯಸ್ಸಿನ ಮಕ್ಕಳಿಗೆ ಮದುವೆ ಮಾಡುವುದು ಅಪರಾಧ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದರೆ ಜೀವಾವಧಿ ಶಿಕ್ಷೆ ಇದೆ. ಈ ಎಲ್ಲಾ ಕಾನೂನು ಮಾಹಿತಿಯನ್ನು ಪಡೆಯಬೇಕು ಎಂದು ತಿಳಿಸಿದರು.



ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಪಂನಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ನ್ಯಾಯಾಧೀಶ ಈಶ್ವರ್ ಉದ್ಘಾಟಿಸಿದರು.

ಸಬ್‌ಇನ್ಸ್‌ಪೆಕ್ಟರ್ ಜಯರಾಂ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಸಮಾಜದಲ್ಲಿ ಒಳ್ಳೆಯ ಪ್ರಜೆಯಾಗಿ ಮಾಡಬೇಕಾದ ಜವಾಬ್ದಾರಿ ಪೋಷಕರ ಮೇಲಿದೆ. ಮಕ್ಕಳನ್ನು ಬಾಲ ಕಾರ್ಮಿಕ ಪದ್ಧತಿಗೆ ದೂಡಬೇಡಿ. ಇದು ಕಾನೂನು ಪ್ರಕಾರ ಅಪರಾಧ ಎಂದರು.

ಬಾಲನ್ಯಾಯ ಮಂಡಳಿ ಮಾಜಿ ಸದಸ್ಯ ಟಿ.ಜೆ.ಸುರೇಶ್ ಮಾತನಾಡಿ, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಉದ್ದೇಶ ಹೆಣ್ಣು ಶಿಶುಹತ್ಯೆ ತಡೆಯುವುದಾಗಿದೆ. ಪ್ರತಿ ಹೆಣ್ಣು ಮಗುವಿನ ಸುರಕ್ಷತೆ ಮತ್ತು ರಕ್ಷಣೆ ಖಚಿತಪಡಿಸಿಕೊಳ್ಳಲು ಹೊಸ ಯೋಜನೆ ಅಭಿವೃದ್ಧಿಪಡಿಸಿ, ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡುವುದು, ಹೆಣ್ಣು ಮಕ್ಕಳ ಲಿಂಗ ಅನುಪಾತದಲ್ಲಿನ ಕುಸಿತ ತಡೆಯುವುದು ಯೋಜನೆಯ ಮತ್ತೊಂದು ಪ್ರಮುಖ ಗುರಿಯಾಗಿದೆ ಎಂದರು.

ವಕೀಲ ರಾಜೇಶ್ ಮಾತನಾಡಿ, ಎಲ್ಲಾ ಕಾನೂನುಗಳು ಸಂವಿಧಾನ ಅಡಿಯಲ್ಲಿ ಜಾರಿಗೆ ಬರುತ್ತವೆ. ಸಂವಿಧಾನದ ಬಗ್ಗೆ ಹೆಚ್ಚಿನ ಅರಿವು ಹೊಂದಬೇಕು ಎಂದರು.

ಗ್ರಾಪಂ ಉಪಾಧ್ಯಕ್ಷ ನಾಗರಾಜು ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ವೃಷಬೇಂದ್ರ, ಗೌರಮ್ಮ, ಚಿಕ್ಕತಾಯಮ್ಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ರುದ್ರವ್ವ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಾಂತಮಲ್ಲಪ್ಪ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹೆಚ್ಚಿನ ಬೆಲೆಗೆ ಮದ್ಯ ಮಾರಾಟ

ಅಬಕಾರಿ ಅಧಿಕಾರಿಗಳ ಪರಿಶೀಲನೆ

ಯಳಂದೂರು, ಫೆ.7–ಪಟ್ಟಣದ ಶ್ರೀರಂಗ ವೈನ್ಸ್ ಸ್ಟೋರ್‌ನಲ್ಲಿ ಎಂಆರ್‌ಪಿಗಿಂತ ಹೆಚ್ಚಿನ ದರದಲ್ಲಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಕೆಲವರು ಫೆ.4ರಂದು ವೈನ್‌ಶಾಪ್ ಮುಂದೆ ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಅಬಕಾರಿ ನಿರೀಕ್ಷಕ ಮಹದೇವ್ ನೇತೃತ್ವದ ತಂಡ ಭೇಟಿ ನೀಡಿ, ಪರಿಶೀಲಿಸಿತು.

ಈ ಸಂದರ್ಭ ಮದ್ಯದ ಬಾಟಲ್ ಹಾಗೂ ಇದಕ್ಕೆ ಸಂಬಂಧಿಸಿದ ಮಾರಾಟ, ದಾಸ್ತಾನು ಪುಸ್ತಕ ಸೇರಿದಂತೆ ಇತರೆ ಕಡತಗಳನ್ನು ಪರಿಶೀಲಿಸಲಾಯಿತು. ಎಂಆರ್‌ಪಿಗಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟವಾಗಿದೆ ಎಂದು ಪತ್ರಿಕೆಗಳಲ್ಲಿ ಸುದ್ದಿ ಪ್ರಸಾರವಾದ ಹಿನ್ನೆಲೆಯಲ್ಲಿ ಭೇಟಿ ನೀಡಿ, ಪರಿಶೀಲಿಸಲಾಗಿದೆ ಎಂದು ಅಬಕಾರಿ ನಿರೀಕ್ಷಕ ಮಹದೇವ್ ತಿಳಿಸಿದರು.

ಏಕಾಏಕಿ ದರ ಏರಿದ ಹಿನ್ನೆಲೆಯಲ್ಲಿ ಸ್ಟಾಕ್‌ನಲ್ಲಿ ಹಳೇ ಎಂಆರ್‌ಪಿ ದರವಿರುವ ಸರಕನ್ನು ಅಂಗಡಿಯವರು ಖರೀದಿ ಮಾಡಿದ್ದಾರೆ. ಆದರೆ, ಹೊಸ ಬೆಲೆಗೆ ಮಾರಾಟ ಮಾಡಿದ್ದಾರೆ. ಖರೀದಿ ಬಿಲ್, ಸ್ಟಾಕ್‌ಬುಕ್ ಪರಿಶೀಲಿಸಿದಾಗ ಇದು ಸರಿಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ದರ ಮಾಹಿತಿ ನೀಡಬೇಕೆಂದು ಈಗಾಗಲೇ ಅಂಗಡಿಯವರಿಗೆ ಮಾಹಿತಿ ನೀಡಿದ್ದೇನೆ ಎಂದರು.



ಯಳಂದೂರು ಶ್ರೀರಂಗ ವೈನ್ಸ್ ಸ್ಟೋರ್‌ಗೆ ಅಬಕಾರಿ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು Gunman & Security Guard ಬೇಕಾಗಿದ್ದಾರೆ.
Gunman - 30,000/- 26 days
Security Guard 19000/- 26 days
ವಯಸ್ಸು : 19 ರಿಂದ 50
ವಿದ್ಯಾರ್ಹತೆ: SSLC, PUC Any Degree Pass
ESI, PF, Bonus ಸೌಲಭ್ಯವಿದೆ.
9880116412
9741300222

SITE FOR SALE
40X60 North Facing Muda Allotted Site Vijayanagara 4th Stage
Price : 1050 Cr Nego
8197707001

ಶ್ರೀ ಗೌರಿಶಂಕರ ಟ್ರಾವೆಲ್ಸ್
ಮಹಾಕುಂಭ ಯಾತ್ರೆ (5 ದಿನ) ಅಮೃತ ಸ್ನಾನ ಪ್ರಯಾಗ್ ರಾಜ್, ಕಾಶಿ, ಅಯೋಧ್ಯ Date: 24-2-25
(25ನೇ ತಾರೀಖು ಅಮೃತಸ್ನಾನ ಪ್ರಯಾಗ್‌ನಲ್ಲಿ, ಕಾಶಿಯಲ್ಲಿ 26ನೇ ತಾರೀಖು ಶಿವರಾತ್ರಿ ಆಚರಣೆ (ವಿಮಾನ, ಊಟ, ಬಸ್ಸು, ರೂಂ)
9620002114

VILLA PLOTS FOR SALE
30X40 & 30X50
READY FOR CONSTRUCTION
Beside Narayan Guru Nagara, Bogadi-Gaddige Road, Mysore
Site Visit Call Now
MCIL www.mcil.in
88614 40528
97314 00249

House For Sale
20/40 EAST
Ground 2 BHK + 1st floor Room
MUDA with Clear Documents
Own Borewell & Vastu
Police layout 2nd Stage
9380284276



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

SITE FOR SALE
52X60 SW CORNER SITE FOR SALE IN RMS LAYOUT NEAR DR RAJKUMAR ROAD 3BHK APERMENT FOR SALE IN TRENDS APARTMENT BOGADI ROAD
9880344263

ಸೋರಿಯಾಸಿಸ್ ನಿಂದ ಬಳಲುತ್ತಿದ್ದೀರಾ? ವೆರಿಕೋಸ್‌ವೇನ್ಸ್ ತೊಂದರೆಯೇ?
ಯಾವುದೇ ಔಷಧಿ ಸೇವನೆ ಇಲ್ಲದೆ ನುರಿತ ತಜ್ಞರಿಂದ ಸಂಶೋಧಿಸಿದ ಔಷಧಿ/ಮುಲಾಮು/ ತೈಲವನ್ನು ಮೇಲೆ ಮಸಾಜ್ ಮಾಡುವ ಮೂಲಕ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುವುದು
ಡಾ|| ಸಹನಾ.ವಿ
BAMS, PGDA, PGDAC, Mysore
8861137033

ಸೈಟುಗಳು ಮಾರಾಟಕ್ಕೆ
ತಳೂರು ಸರ್ಕಲ್ ಬಳಿ ಡಿ.ಟಿ.ಸಿ.ಪಿ. ಅನುಮೋದಿತ 40x60 ದಕ್ಷಿಣ ದಿಕ್ಕಿನ ನಿವೇಶನಗಳು ಮಾರಾಟಕ್ಕಿವೆ.
ಬೆಲೆ–1200/– ಚ.ಅಡಿ.
8197850616

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮಾರುತಿ ಟ್ಯೂಬ್ ವೆಲ್ಸ್ (ರಿ)
ಕುಡಿಯುವ ಅಂತರ್ಜಲ ಅಭಿವೃದ್ಧಿಯಲ್ಲಿ ನೂರಾರು ಯಶಸ್ವಿ ವರ್ಷಗಳು
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸ್ಕೆಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
8184000444

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಫೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ ಮಧ್ಯವರ್ತಿಗಳ ಅವಶ್ಯಕತೆಯಿಲ್ಲ.
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಪದವೀಧರ ಮಹಿಳೆ ಬೇಕಾಗಿದ್ದಾರೆ
ಗುಂಡ್ಲುಪೇಟೆ ಟೌನ್‌ನಲ್ಲಿ ವಾಸವಿರುವ ಹಿರಿಯ ಮಹಿಳೆಯರಿಗೆ ಸಹಾಯಕಿ ಆಗಿ ಮನೆಯ ಕೆಲಸ ಸಹಾಯ ಮಾಡುತ್ತ ಅವರ ಜೊತೆಯಲ್ಲಿ ವಾಸ ಮಾಡಲು ಪದವೀಧರ ಮಹಿಳೆ ಬೇಕಾಗಿದ್ದಾರೆ. ಊಟ, ವಸತಿ ಮತ್ತು ಸೂಕ್ತ ಸಂಬಳ ನೀಡಲಾಗುವುದು. ಸಂಪರ್ಕಿಸಿ:
9448022967, 8861106220

Corner/Middle Sites 7 km to City, Near Ring Road
1) ಜೆ.ಪಿ.ನಗರ – 42 ಲಕ್ಷ 30x40
2) ಆರ್.ಟಿ.ನಗರ, ಶ್ರೀರಾಂಪುರ – 55 ಲಕ್ಷ
3) ಭೋಗಾದಿ–ವಿಜಯನಗರ – 48 ಲಕ್ಷ
4) ಬನ್ನೂರು ರಸ್ತೆ, ಆಲನಹಳ್ಳಿ – 45 ಲಕ್ಷ
5) ಜೆಎಸ್ಎಸ್ ಬಡಾವಣೆ – 60 ಲಕ್ಷ
ತಕ್ಷಣ ಮನೆ ಕಟ್ಟಲು, ನಮ್ಮ ಬಡಾವಣೆಗಳಲ್ಲಿ
ಮಧ್ಯವರ್ತಿಗಳು ಕ್ಷಮಿಸಿ.
8123075038

ಎಲೆಕ್ಟ್ರಿಕ್ ಸ್ಕೂಟರ್ ಸರ್ವೀಸ್
ನಮ್ಮ ಶೋರೂಂನಲ್ಲಿ ಎಲ್ಲಾ ಕಂಪೆನಿಯ ಎಲೆಕ್ಟ್ರಿಕ್ ಸ್ಕೂಟರ್‌ನ್ನು ರಿಪೇರಿ ಅಥವಾ ಸರ್ವೀಸ್ ಮಾಡಿಕೊಡಲಾಗುತ್ತದೆ.
ಸಂಪರ್ಕಿಸಿ:
7353430309

ಟ್ರಾನ್ಸ್‌ಪೋರ್ಟ್ ಕಂಪೆನಿಗೆ ಲಾರಿ ಡ್ರೈವರ್ ಬೇಕಾಗಿದ್ದಾರೆ
9845351200
9741139977

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ವಿಭಾಗದಲ್ಲಿ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ವಯೋಮಿತಿ : 50 ವರ್ಷದೊಳಗೆ
ಸಂಬಳ: 17500 8hours (26 days)
ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನೇ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇದುವ ಮಂತ್ರವಾದರದ್ದ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಸೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ಮೈಸೂರು
21 ದಿನಗಳ ಕುಡಿತ ಬಿಡಿಸುವ ಮತ್ತು ಯೋಗ ಶಿಬಿರ
ಫೆ. 9 ರಿಂದ ಪ್ರಾರಂಭ
ಶುಲ್ಕ: 6 + 6 ಸಾವಿರ ರೂ.
9742010101, 9742919191, 8803344999

3BHK HOUSE FOR SALE
20X30
Duplex Corner House Dattagalli
9632020620

ಬೇಕಾಗಿದ್ದಾರೆ
ಹೋಂ ಸ್ಟೇಗೆ ಅನುಭವವುಳ್ಳ ರೂಮ್ ಬಾಯ್ ಮತ್ತು ರೆಸ್ಟೋರೆಂಟ್‌ಗೆ ಆಲ್ ರೌಂಡರ್ ಕುಕ್, ಕ್ಯಾಷಿಯರ್, ಕ್ಯಾಪ್ಟನ್ ಮತ್ತು ವೇಟರ್ಸ್ ಬೇಕಾಗಿದ್ದಾರೆ.
ರೂಂ ಮತ್ತು ಊಟದ ವ್ಯವಸ್ಥೆ ಇರುತ್ತದೆ ಸ್ಥಳ : ಮೈಸೂರು
9986111160

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ: 15,000/–
7899754149

ನಿವೇಶನ ಮಾರಾಟಕ್ಕಿದೆ
ಮೈಸೂರಿನ ಇಲವಾಲ, ಗುಂಗ್ರಾಲ್ ಛತ್ರದ ಕೆ.ಆರ್.ಎಸ್. ನಿರ್ಗಲ ಬಡಾವಣೆಯ ಕೆ.ಹೆಚ್.ಬಿ. ಬ್ಲಾಕ್–1 ಹೆಚ್.ಐ.ಜಿ.–1, 40X60 ಅಳತೆಯ ಉತ್ತರ ದಿಕ್ಕಿನ ವಸತಿ ನಿವೇಶನ ಮಾರಾಟಕ್ಕಿದೆ ಆಸಕ್ತರು ಸಂಪರ್ಕಿಸಿ :
9886145599

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
MYSORE 9611028523 BANGALORE 9343142258

ಬೇಕಾಗಿದ್ದಾರೆ
ಶಾಲಾ ವಾಹನ ಚಾಲಕರು ಬೇಕಾಗಿದ್ದಾರೆ
ವಿವರಗಳಿಗಾಗಿ ಸಂಪರ್ಕಿಸಿ:
9880379822

SITE FOR SALE
20/30, 30/40, 30/50 Sites For Sale Near Vivekananda Circle Bhramaramba Choultry Mysore
30/50 MUDA Site For Sale Near Bogadi, Mysore. Park Facing 40lakhs
PH: 9900464111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

20x30/30x40/30x50
6 ಲಕ್ಷ ಪಾವತಿಸಿ (ಉಳಿಕೆ ಲೋನ್)
ಅಭಿವೃದ್ಧಿಗೊಂಡ ನಮ್ಮ ಬಡಾವಣೆಗಳಲ್ಲಿ
1) ಬೋಗಾದಿ ರಸ್ತೆ – 20 ಲಕ್ಷ
2) ಟಿನರಸೀಪುರ ರಸ್ತೆ – 31.2 ಲಕ್ಷ
3) ಇಲವಾಲ ಬೈಪಾಸ್ –25.5 ಲಕ್ಷ
4) ಲಲಿತಾದ್ರಿಪುರ ಉತ್ತನಹಳ್ಳಿ –20 ಲಕ್ಷ
Brokers Excuse
8123075038

WANTED
ಸ್ವಯಂ ಉದ್ಯೋಗ ಮಾಡಲು ಇಚ್ಛಿಸುವವರು ಸಂಪರ್ಕಿಸಿ:
9743781857 Nandini
9743717263 Jyothi
8050438634 Sunitha

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

Corner site for sale
42x52 South-East corner site for sale at Shankara Nagara (Gayathri Layout) attached to new R.T. Nagar and near Dattagalli. Suitable for immediate construction.
Contact: MYSORE ESTATES
Vishwanath Gowda
Mob: 9690911111

ಬೇಕಾಗಿದ್ದಾರೆ
ಮೈಸೂರಿನ ರಿಯಲ್ ಎಸ್ಟೇಟ್ ಮತ್ತು ವಧುವರರ ಕಛೇರಿಯಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC. ಕೆಲಸದ ಸಮಯ ಬೆಳಿಗ್ಗೆ 11 ರಿಂದ ಸಂಜೆ 4. ಸಂಪರ್ಕಿಸಿ:
Mob: 9449636424

ಖಾಲಿ ಜಾಗ 5000 ಅಡಿ ಬಾಡಿಗೆಗೆ ದೊರೆಯುತ್ತದೆ.
1ನೇ ಹಂತ, ವಿಜಯನಗರ ವಾಟರ್ ಟ್ಯಾಂಕ್ ಪಕ್ಕ.
Mob: 9448978383

WANTED
For petrol bunk in city, part or full time Sales Boys or Girls for filling petrol, diesel and gas. Cashier plus helper. Salary as per qualification and experience preference PUC & above.
Mob: 9844002226

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಖ್ಯಾತ MNC ಕಂಪನಿಗಳಿಗೆ 7th, 10th, PUC, ITI, Diploma, Any Degree MBA,M.Com, Pass/ Fail ಆದವರಿಗೆ Helper, Quality, Maintenance, Production, Data Entry, Telecalling, HR, Admin, Accountant, Cashier, Billing (ಡ್ರೈವರ್ ಬೇಕಾಗಿದ್ದಾರೆ ಸಂಬಳ 16,000 ರಿಂದ 48,000 (ESI+PF+OT) ಯೊಂದಿಗೆ.
9916641959

SITES FOR SALE
MUDA Approved
Near Srirampura Ring Road, Mysore
30x40, 30x50
Bank loan available.
Mob: 9108528002

ಮನೆ ಬಾಡಿಗೆಗೆ ಇದೆ
40x60 ಅಳತೆಯ 2 BHK ಮನೆ, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು. (ಸಸ್ಯಾಹಾರಿಗಳಿಗೆ ಮಾತ್ರ).
Mob: 9886307094

ಮಳಿಗೆ ಬಾಡಿಗೆಗೆ
ನ್ಯೂಕಾಂತರಾಜ್ ಅರಸ್ ರಸ್ತೆ, ಶಾರದಾದೇವಿನಗರ (ಬಸವೇಶ್ವರ ನಗರ) ದಲ್ಲಿ ಪೂರ್ವಾಭಿಮುಖಿ ವಾಗಿರುವ 10x12 ಅಳತೆಯ ಅಂಗಡಿ ಮಳಿಗೆ ಬಾಡಿಗೆಗೆ ಲಭ್ಯವಿದೆ.
9448679146, 7483824007

ಬೇಕಾಗಿದ್ದಾರೆ
ಕಲೆಕ್ಷನ್ ವಿಭಾಗಕ್ಕೆ ಫೀಲ್ಡ್ ಎಕ್ಸಿಕ್ಯೂಟಿವ್ (ಹುಡುಗರು) ಮತ್ತು ಟೆಲಿಕಾಲರ್‌ಗಳು (ಮೈಸೂರು ಸಿಟಿ, ಶ್ರೀರಂಗಪಟ್ಟಣ, ಚಾಮರಾಜನಗರ, ಕೊಳ್ಳೇಗಾಲ, ಪಾಂಡವಪುರ, ನಂಜನಗೂಡು, ಹುಲ್ಲಹಳ್ಳಿ, ಮಂಡ್ಯ, ಮಳವಳ್ಳಿ, ಮದ್ದೂರು) ಕೆಲಸಕ್ಕೆ ಬೇಕಾಗಿದ್ದಾರೆ.
990/1, Tank bund Road, Ittigegudu, (Near Excibition Road, Mysuru-10
9972044442 ರಾಘವೇಂದ್ರ
8861357697 ಕವಿತಾ

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

SITE FOR SALE
40x60 site @ Roopa Nagara
Mob: 9740088990

SITE FOR SALE
30x40 at Bogadi-Gaddige Road and Dattagalli. 40x60 at R.K. Nagar, Kuvempunagar, Dattagalli, Vijayanagar and Saraswathipuram.
7353430309, 9844915158

ಅಪಾರ್ಟ್‌ಮೆಂಟ್‌ನಲ್ಲಿ 2 ಮನೆ ಬಾಡಿಗೆಗೆ ಇದೆ
2 BHK, ಸೋಲಾರ್
ನಿವೇದಿತಾನಗರ
Mob: 9738444665

MUDA Approved
30x40 site for sale @ BVL Premia (Ready Layout).
Price: Rs. 5,000/- sq.ft.
Call: 7026901111

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
N/E Corner 60x70 Suvarna Nagara, Bogadhi Road.
Mob: 8050821108

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಸರ್ ಹೌಸ್‌ಕೀಪಿಂಗ್ ಮತ್ತು ಹೆಲ್ಪರ್‌ಗಳು ITI ವೆಲ್ಡರ್‌ಗಳು ಮತ್ತು ಫ್ಯಾಕ್ಟರಿಯಲ್ಲಿ ಕೆಲಸ ಬಯಸುವ ಮಹಿಳೆಯರು ಸಂಪರ್ಕಿಸಿ:
9035367083
6361548626

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನಕ್ಕೆ : (7700 24 CT)
ಸಂಪರ್ಕಿಸಿ:
9108146123

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Huyilalu, Mysore
Mob: 8217851695

PRAKRUTHI PROPERTIES
SITES FOR SALE
40x60 Commercial Site Nr Bramharamba Chitry,
40x60 House @ Ramakrishna Nagar
50x80 Site @ Kuvempu Nagar
20x30, 30x40 Sites & House @ Dattagalli, Ramakrishna Nagar
20x30 Site @ VRL Lyt, HD Kote Rd
Sites also available Near RT Nagar, Bogadi in & around Mysore
95386 90359, 90359 90359

ಬೋಗಾದಿಯ ತೋಟದ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
ಬೋಗಾದಿಯ ತೋಟದ ಮನೆಯಲ್ಲಿ ಉಳಿದುಕೊಂಡು ನಾರ್ತ್ ಇಂಡಿಯನ್ ಅಡುಗೆ ಮಾಡಿಕೊಡುವವರು ಬೇಕಾಗಿದ್ದಾರೆ. (ಚಿಕ್ಕ ಕುಟುಂಬ) ಉಳಿದು ಕೊಳ್ಳಲು ವಸತಿ+ESI+PF ಸೌಲಭ್ಯವಿರುತ್ತದೆ. ಆಸಕ್ತಿ ಇರುವವರು ಸಂಪರ್ಕಿಸಿ: Jiya : ಜಿಯಾ
9845920613

National Enterprises
Wanted
Marketing Managers
Salary 40000+ Insentitive
Any Field Experience
Male and Female
7348911669
8904736143

REQUIRED
Female Offie Assistant 1-3 Year Experienced in sales and Marketing, Fluency in English and Kannada, For our Hair Fixing Centre
Salary (Target Basis) 25K to 30K Kuvempunagar
8792945515

VASTU
WE UNDERTAKE VASTU PLANNINGS CONSTRUCCTION AND CONSULTANCY
8660274368

ಕಾರು, ಬೈಕ್, ಸ್ಕೂಟಿ, ಮನೆ, ಸ್ಥಳ ಮಾರಾಟಕ್ಕಿದ್ದರೆ ಸಂಪರ್ಕಿಸಿ
ಸೆಕೆಂಡ್‌ಹ್ಯಾಂಡ್, ಕಾರು, ಬೈಕ್, ಸ್ಕೂಟಿ ಹಾಗೂ ಮನೆ, ಸ್ಥಳ, ಕೃಷಿ ಭೂಮಿ, ಫ್ಲ್ಯಾಟ್ ಮಾರಾಟ ಮಾಡಲು ಇಚ್ಛಿಸುವವರು ತಮ್ಮ ಸೆಕೆಂಡ್ ಹ್ಯಾಂಡ್ ಮಾರಾಟ ಮಾಡುವ ವಾಹನಗಳ ಹಾಗೂ ಮನೆ, ಜಾಗದ ಡಿಟೈಲ್ಸ್‌ನ್ನು ನಮ್ಮ ಮೊಬೈಲ್ ನಂಬರಿಗೆ ವಾಟ್ಸಾಪ್ ಮಾಡಿ ತಿಳಿಸಿ. ಬ್ಯಾಂಕಿನಲ್ಲಿ ಸಾಲ (ಲೋನ್) ಉಳಿದ್ದ ಕಾರು, ಬೈಕ್, ಸ್ಥಳ, ಮನೆಗಳು ಇದ್ದರೆ ಕೂಡಾ ಸಂಪರ್ಕಿಸಬಹುದು.
9980310919

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಶ್ರೀ ಸಿದ್ದಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಹಿನ್ಕಲ್ ರಿಂಗ್ ರಸ್ತೆ, ಮೈಸೂರು.

ಬೇಕಾಗಿದ್ದಾರೆ
ಸೂಪರ್‌ವೈಸರ್ ಹೆಲ್ಪರ್ ಮತ್ತು ಕ್ಯಾಶಿಯರ್ ನಜರಬಾದ್‌ನ ಭಾರತ್ ಪೆಟ್ರೋಲಿಯಂ ನಾಗರಬೋಡ್ ಫ್ಯೂಯಲ್ ಬಂಕ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ: ಮನೀಶ್
9019230313

HOUSE FOR RENT - 2 BHK
316, 14th Cross, 6th B Main, 2nd Stage, Gukulam, V.V.Mohalla, Mysore
9845740083

28x40 ಸೈಟು ಮಾರಾಟಕ್ಕಿದೆ. 15 ಲಕ್ಷಗಳು
30x46 ಸೈಟು ಮಾರಾಟಕ್ಕಿದೆ. 18 ಲಕ್ಷಗಳು
TVS ಫ್ಯಾಕ್ಟರಿ ಹತ್ತಿರ ನಂಜುಂಡೇಶ್ವರ ನಗರ, ಮೈಸೂರು
9972557534

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ವಿಭಾಗದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: 17500
ESI, PF, ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9880727819

URGENT STAFF REQUIRED
Female/Male
Vidyasagar Stationary & Xerox Shop, Add: Vijayanagar 2nd Stage, Mysore Near Podar School & K.D.Circle,
Qualification: SSLC/PUC/ Degree with good computer knowledge full time job
9740246040

REQUIRED
Special Educators Required to Teach Dyslexic Child and work Closely with School Councelor
7795243797

ತೇಜಸ್ವಿನಿ ಟೂರಿಸ್ಟ್
1–4–2025 ರಿಂದ 18 ದಿನ ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ... 2x2 AC ಬಸ್. ಟಿಕೆಟ್ 16 ಸ್ಥಳಗಳು. 20–5–2025, 18 ದಿನಗಳು ... 2x2 AC ಬಸ್. ವಿವರಗಳಿಗೆ
Mob: 9379792644

ಬೇಕಾಗಿದ್ದಾರೆ
ಹುಣ್ಣುಳು ಮೆಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ ಕೆಲಸದ ಸಮಯ 9 ರಿಂದ 5:30 ರ ವರೆಗೆ ಮತ್ತು Only Night Shift ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ESI, PF ಸೌಲಭ್ಯ ಇರುತ್ತದೆ.
8951869646
9902645646

ಮಾರಾಟಕ್ಕಿದೆ
30x40 ಮನೆ
20x30 ಮನೆ
30x50 ಸೈಟ್
9008711654

SITE FOR SALE
30X40
Srirampura Ring Road, Mysore
8050345574

CORNER COMMERCIAL MUDA SITE FOR SALE
South west 50x80 Corner Commercial MUDA ANCTION Site For Sale at Hampi Circle Hebbal, 2nd Stage, Mysore 60ft Road Approach
9902066343

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಯಲ್ಲಿ Loan Recovery ಮಾಡಲು Collection Executiveಗಳು ಗೋಣಿಕೊಪ್ಪ, ವಿರಾಜಪೇಟೆ, ಪಿರಿಯಾಪಟ್ಟಣ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್ಎಸ್ಎಲ್‌ಸಿ ಪಾಸಾದವರಿಗೆ ಆದ್ಯತೆ
9900610534, 9901945444, 9980929313
ಸಂದರ್ಶನದ ದಿನಾಂಕ: 10–02–2025

We are hiring Accountant (M/F) Experience 2 to 3 years
Well known tally ERP-9
SALARY - 18000 above
Contact -
CENTURY MATTRESS distributor Near Preeti granite, hebbal, Mysore
0821-4286890
8217411158

Wanted MALE STAFF
Job Profile : Marketing and Administration
Qualification any degree
Salary 15000 to 20000
Job location Mysore
2 and 4 wheeler licence must
9482026633

Outhouse for Rent
1 BHK, #707, 17th main, Saraswathipuram Mysore
7899685496

ಮುಡಾ ಖಾತಾ ಸೈಟ್ ಮಾರಾಟಕ್ಕಿದೆ
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 8.7ಮೀx12 ಮೀ (ಒಟ್ಟು 1124 ಚದುರಡಿ) ವಡದಹಳ್ಳಿ ಬಳಿಯ ಜ್ಞಾನಭಾರತಿ ಲೇಔಟ್, ಏರ್‌ಪೋರ್ಟ್ ಹಿಂಭಾಗದ ಹತ್ತಿರ, ಇ–ಖಾತಾ ಕೂಡ ಆಗಿದೆ. ಡೈರೆಕ್ಟ್ ಓನರ್
9342123373

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ತ್ರಿವೇಣಿ ಸಂಗಮದಲ್ಲಿ ಕುಂಭಮೇಳ ಹಿನ್ನೆಲೆ

ಸಿದ್ಧತಾ ಕಾರ್ಯ ಪರಿಶೀಲಿಸಿದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ

ಶ್ರೀಗಳಿಗೆ ಸಿದ್ಧತೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ ಎಸಿ ರಕ್ಷಿತ್



ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದರು.

ತಿ.ನರಸೀಪುರ, ಫೆ.7– ತ್ರಿವೇಣಿ ಸಂಗಮ ಕ್ಷೇತ್ರ ಹಾಗೂ ದಕ್ಷಿಣದ ಪ್ರಯಾಗ ರಾಜ್ ಎಂದೇ ಖ್ಯಾತವಾಗಿರುವ ತಿರುಮಕೂಡಲು ಕ್ಷೇತ್ರದಲ್ಲಿ 3 ದಿನಗಳ ಕಾಲ ಕುಂಭಮೇಳ ನಡೆಯುವ ಹಿನ್ನೆಲೆಯಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರು ಕ್ಷೇತ್ರಕ್ಕೆ ಭೇಟಿ ನೀಡಿ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿದರು.

ಚುಂಚನಗಿರಿ ಶಾಖಾ ಮಠದ ಸೋಮನಾಥೇಶ್ವರನಾಥ ಸ್ವಾಮೀಜಿ, ತಿರುಚ್ಚಿ ಬುದ್ಧ ಸ್ವಾಮೀಜಿ ಹಾಗೂ ದೊರೆಸ್ವಾಮಿ ಅವರೊಂದಿಗೆ ಆಗಮಿಸಿದ ಶ್ರೀಗಳು ಕಂಭಮೇಳದ ಸಿದ್ಧತಾ ಕಾರ್ಯ ಕುರಿತು ಎಸಿ ರಕ್ಷಿತ್ ಹಾಗೂ ತಹಸೀಲ್ದಾರ್ ಟಿ.ಜೆ. ಸುರೇಶಾಚಾರ್ ಅವರಿಂದ ಮಾಹಿತಿ ಪಡೆದರು. ಬಳಿಕ ತೆಪ್ಪದಲ್ಲಿ ಸಂಗಮಕ್ಕೆ ತೆರಳಿ ಪರಿಶೀಲಿಸಿ, ಆಗಬೇಕಾದ ಕೆಲ ಮಾರ್ಪಾಡುಗಳ ಬಗ್ಗೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಈ ವೇಳೆ ಶ್ರೀಗಳಿಗೆ ಸಿದ್ಧತಾ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದ ಉಪವಿಭಾಗಾಧಿಕಾರಿ ರಕ್ಷಿತ್ ನದಿಯಲ್ಲಿ ಹೆಚ್ಚು ಮರಳು ಇಲ್ಲದಿರುವ ಕಾರಣ ನದಿ ಮಧ್ಯ ನಡೆಯುತ್ತಿದ್ದ ಕಾರ್ಯಕ್ರಮಗಳನ್ನು ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನ ಹಾಗೂ ಆಸುಪಾಸಿನಲ್ಲಿ ನಡೆಸಲಾಗುತ್ತಿದೆ. ಗುಂಜಾ ನರಸಿಂಹಸ್ವಾಮಿ ದೇವಸ್ಥಾನ ಹಾಗೂ ಆದಿಚುಂಚನಗಿರಿ ಸಮುದಾಯ ಭವನದ ಬಳಿ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಎರಡು ವೇದಿಕೆಗಳನ್ನು ನಿರ್ಮಿಸಲಾಗಿದೆ. ತ್ರಿವೇಣಿ ಸಂಗಮದ ನದಿ ತಟದಲ್ಲಿ ಸ್ವಾಮೀಜಿಗಳು ತಂಗಲು ಕುಟೀರ ನಿರ್ಮಾಣ ಮಾಡಲಾಗಿದೆ ಎಂದರು.

ಭಕ್ತರು ಆತಂಕವಿಲ್ಲದೇ ಪುಣ್ಯಸ್ನಾನ ಮಾಡಲು ನದಿ ಒಳಗೆ ಗುರುತಿಸಲಾದ ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದ್ದು, ಅದರಿಂದ ಮುಂದೆ ಹೋಗಲು ಅನುಮತಿ ನಿರಾಕರಿಸಲಾಗಿದೆ. ಸಾಧು ಸಂತರು, ಮಠಾಧೀಶರಿಗೆ ನಡುಹೊಳೆ ಬಸಪ್ಪನ ಬಳಿ ಸ್ನಾನ ಮಾಡಲು ಅವಕಾಶ ಮಾಡಿಕೊಡಲಾಗಿದ್ದು, ಅವರಿಗೆ ಬಟ್ಟೆ ಬದಲಿಸಲು ನದಿ ಮಧ್ಯೆ ವ್ಯವಸ್ಥೆ ಮಾಡಲಾಗಿದೆ. ಗಣ್ಯರು ಮತ್ತು ಅತಿ ಗಣ್ಯರಿಗೆ ಸ್ನಾನಕ್ಕೆ ಪ್ರತ್ಯೇಕ ಜಾಗ ಗುರುತಿಸಲಾಗಿದೆ ಎಂದರು.

ಶಾಲೆಗಳಿಗೆ ರಜೆ ನೀಡಲು ಮನವಿ

ಕುಂಭಮೇಳ ನಡೆಯುವ 3 ದಿನಗಳ ಕಾಲ ಸ್ಥಳೀಯ ಶಾಲೆಗಳಿಗೆ ರಜೆ ನೀಡಬೇಕೆಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮನವಿ ಮಾಡಿದರು. ಸ್ಥಳೀಯ ಜನಪ್ರತಿನಿಧಿಗಳಿಗೆ ಕುಂಭಮೇಳದಲ್ಲಿ ಭಾಗವಹಿಸಲು ಪಾಸ್ ವ್ಯವಸ್ಥೆ ಮಾಡಬೇಕು. ಕುಂಭಮೇಳಕ್ಕೆ ಪ್ರಚಾರದ ಕೊರತೆ ಎದುರಾಗಿದ್ದು, ಪತ್ರಿಕೆ, ಮಾಧ್ಯಮಗಳು ಹಾಗೂ ಸರ್ಕಾರಿ, ಖಾಸಗಿ ಬಸ್‌ಗಳಲ್ಲಿ ಪ್ರಚಾರದ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರು.

ಧಾರ್ಮಿಕ ಸಭೆಗೆ ವಿಶಾಲ ವೇದಿಕೆ: ತಿರುಮಕೂಡಲಿನ ಚೌಡಯ್ಯ ಸರ್ಕಲ್ ಹಾಗೂ ಚೌಡೇಶ್ವರಿ ದೇವಸ್ಥಾನದ ಅನತಿ ದೂರದಲ್ಲಿ ಧಾರ್ಮಿಕ ಸಭೆ ನಡೆಸಲು ವೇದಿಕೆ ನಿರ್ಮಿಸಲಾಗಿದೆ. ಸುಮಾರು 5 ರಿಂದ 8 ಸಾವಿರ ಮಂದಿ ಕುಳಿತು ಧಾರ್ಮಿಕ ಸಭೆ ವೀಕ್ಷಿಸುವಂತಹ ವಿಶಾಲವಾದ ವೇದಿಕೆ ನಿರ್ಮಿಸಲಾಗಿದೆ ಎಂದರು.

ತ್ರಿವೇಣಿ ಸಂಗಮಕ್ಕೆ ಏಕಮುಖ ಸಂಚಾರ: ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಲು ತೆರಳುವ ಭಕ್ತರಿಗೆ ಈ ಬಾರಿ ಏಕಮುಖ ಸಂಚಾರದ ವ್ಯವಸ್ಥೆ ಮಾಡಲಾಗಿದೆ. ತಿರುಮಕೂಡಲಿನ ಚೌಡಯ್ಯ ಸರ್ಕಲ್‌ನಿಂದಲೇ ಇದು ಅನ್ವಯವಾಗಲಿದ್ದು, ವಾಹನಗಳ ಓಡಾಟ ನಿಷೇಧಿಸಲಾಗಿದೆ. ಸರ್ಕಲ್‌ನಿಂದ ನಡೆದೇ ತ್ರಿವೇಣಿ ಸಂಗಮ ತಲುಪಬೇಕಿದೆ. ಸ್ನಾನ ಮುಗಿಸಿ ಅಲ್ಲಿಂದ ಅಗಸ್ತ್ಯೇಶ್ವರಸ್ವಾಮಿ ದೇವಸ್ಥಾನದ ಮೂಲಕ ಆದಿಚುಂಚನಗಿರಿ ಚೌಲ್ಟ್ರಿ ಹಿಂಭಾಗದಿಂದ ತೆರಳಿ ಧಾರ್ಮಿಕ ಸಭೆ ಜಾಗಕ್ಕೆ ತಲುಪಲು ವ್ಯವಸ್ಥೆ ಮಾಡಲಾಗಿದೆ. ನಂಜನಗೂಡು, ಬನ್ನೂರು, ತಲಕಾಡು ಹಾಗೂ ಕೊಳ್ಳೇಗಾಲದಿಂದ ಬರುವ ವಾಹನಗಳಿಗೆ ಪಟ್ಟಣದ ಆರಂಭದಲ್ಲೇ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ವಿಶೇಷ ಚೇತನರು ಹಾಗೂ ವಯೋವೃದ್ಧರಿಗೆ ತ್ರಿವೇಣಿ ಸಂಗಮಕ್ಕೆ ತೆರಳಲು ವಾಹನದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಪ್ರಸಾದ ವ್ಯವಸ್ಥೆ: ಕಾಗಿನೆಲೆ ಮಠ ಹಾಗೂ ದೇವಾಂಗ ಸಮಾಜದಿಂದ ತಿರುಮಕೂಡಲಿನ ಶಾಲೆಯಲ್ಲಿ ಕುಂಭಮೇಳದ 3 ದಿನವೂ ಪ್ರಸಾದ ವ್ಯವಸ್ಥೆ ಮಾಡಲಾಗುತ್ತಿದೆ. ಪುಣ್ಯಸ್ನಾನದಂದು ಜೆಎಸ್‌ಎಸ್ ಸಂಸ್ಥೆಯಿಂದ ಬರುವ ಎಲ್ಲಾ ಭಕ್ತರಿಗೆ ತಿರುಮಕೂಡಲಿನ ಸರ್ಕಲ್‌ನಲ್ಲಿ ಮಧ್ಯಾಹ್ನ 12 ರಿಂದ 4 ರವರೆಗೆ ಪ್ರಸಾದ ವ್ಯವಸ್ಥೆ ಇರಲಿದೆ.

ಈ ವೇಳೆ ಮುಖಂಡರಾದ ಪಿ.ಸ್ವಾಮಿನಾಥ್‌ಗೌಡ, ರಮೇಶ್ ಮುದ್ದೇಗೌಡ, ಹೋಟೆಲ್ ರಾಜಣ್ಣ, ಚೇತು, ಎ.ಜೆ. ವೆಂಕಟೇಶ್, ಪುರಸಭೆ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಸದಸ್ಯ ಪ್ರಕಾಶ್, ಶ್ರೀನಿವಾಸ್, ಫಣೀಶ್ ಕುಮಾರ್, ವೀರಶೈವ ಮಹಾಸಭಾದ ಎಸ್‌ಎಂಆರ್ ಪ್ರಕಾಶ್, ತೊಂಟೇಶ್ ಪಾರುಪತ್ತೇದಾರ್ ಚೇತನ್, ಪ್ರದೀಪ್, ಬಸ್ ಶ್ರೀನಿವಾಸ್, ವೆಂಕಟೇಶ್, ರವಿ, ಮಂಜುನಾಥ್ ನಾಗರಾಜು, ದೀಪು, ಲಕ್ಷ್ಮಣ್ ಮತ್ತಿತರಿದ್ದರು.

ಕುಂಭಮೇಳದ ಸಿದ್ಧತೆ ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಆರೋಪ



ತಿ.ನರಸೀಪುರ, ಫೆ.7– ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆಯುವ ದಕ್ಷಿಣ ಭಾರತದ 13ನೇ ಮಹಾಕುಂಭಮೇಳಕ್ಕೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ 6 ಕೋಟಿ ರೂ. ಬಿಡುಗಡೆ ಮಾಡಿದ್ದರೂ, ನಿರೀಕ್ಷಿತ ಪ್ರಮಾಣದ ಸಿದ್ಧತೆ ನಡೆದಿಲ್ಲ ಎಂದು ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಆರೋಪಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತ್ರಿವೇಣಿ ಸಂಗಮದಲ್ಲಿ ನಡೆಯುವ ಕುಂಭಮೇಳದ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳು ಮೀನಾಮೇಷ ಎಣಿಸುತ್ತಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಅಧಿಕಾರಿಗಳು ಗುತ್ತಿಗೆದಾರರಿಗೆ ಮಣೆ ಹಾಕಲು ಹೋಗಿ ಕಳಪೆ ಕಾಮಗಾರಿಗೆ ಮುಂದಾಗಿದ್ದಾರೆ ಎಂದು ದೂರಿದರು. ಕುಂಭಮೇಳಕ್ಕೆ 3 ದಿನ ಬಾಕಿ ಇದ್ದರೂ ನಿರೀಕ್ಷಿತ ಸಿದ್ಧತೆ ಕೈಗೊಂಡಿಲ್ಲ. ಜಿಲ್ಲಾಧಿಕಾರಿಗಳು ಕುಂಭಮೇಳ ಕ್ಷೇತ್ರಕ್ಕೆ ಕಾಟಾಚಾರಕ್ಕೆ ಒಮ್ಮೆ ಭೇಟಿ ನೀಡಿದ್ದಾರೆ. ಸೌಜನ್ಯಕ್ಕಾದರೂ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿಲ್ಲ. ಕುಂಭಮೇಳದ ಪೂರ್ವ ಸಿದ್ಧತೆ ಪರಿಶೀಲಿಸಿಲ್ಲ. ಯಾವುದೇ ಸಿದ್ಧತೆ ಬಗ್ಗೆ ಮಾಹಿತಿ ಪಡೆಯದೇ ಉದಾಸೀನ ತೋರುತ್ತಿರುವುದನ್ನು ಗಮನಿಸಿದರೆ ಅಧಿಕಾರಿಗಳು ಸ್ಥಳೀಯ ಮುಖಂಡರುಗಳೊಂದಿಗೆ ಕೈ ಜೋಡಿಸಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ ಎಂದು ಆರೋಪಿಸಿದರು. ಕುಂಭಮೇಳದ ಬಹುತೇಕ ಕಾಮಗಾರಿ ನಿರ್ಮಿತಿ ಕೇಂದ್ರದವರಿಗೆ ವಹಿಸಲಾಗಿದೆ. ಕುಂಭಮೇಳದ ಸ್ವಚ್ಛತೆ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೇ ಸಿದ್ಧತೆ ಬಗ್ಗೆ ಮಾಹಿತಿ ಕೇಳಿದರೆ ಯಾವುದೇ ಮಾಹಿತಿ ನೀಡದೇ ಎಲ್ಲಾ ಸಿದ್ಧತೆ ನಡೆಯುತ್ತಿದೆ ಎನ್ನುವ ಅಧಿಕಾರಿಗಳು ಕುಂಭಮೇಳ ಮುಗಿದ ಮೇಲೆ ಎಲ್ಲಾ ಕಾಮಗಾರಿ ಮುಗಿಸುತ್ತಾರೇನೋ ಎಂದು ಪ್ರಶ್ನಿಸಿದರು.

ಕುಂಭಮೇಳದ ಸ್ವಚ್ಛತೆಗಾಗಿ ಎಷ್ಟು ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ನೌಕರರೆಷ್ಟು ಎಂಬ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ಮುಖ್ಯಾಧಿಕಾರಿ ಮಾಹಿತಿ ನೀಡುತ್ತಿಲ್ಲ. ಒಟ್ಟಾರೆ ಜಿಲ್ಲಾ ಮತ್ತು ತಾಲೂಕು ಆಡಳಿತ ಕಾಟಾಚಾರಕ್ಕೆ ಕುಂಭಮೇಳ ಮಾಡುತ್ತಿರುವಂತೆ ಕಾಣುತ್ತಿದೆ. ಒಂದು ವೇಳೆ ಅಧಿಕಾರಿ ಕುಂಭಮೇಳ ಸಮರ್ಪಕವಾಗಿ ನಡೆಸದೇ ಸರ್ಕಾರಕ್ಕೆ ಕಪ್ಪು ಚುಕ್ಕೆ ತರಲು ಮುಂದಾದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸಿಎಂ ಸಿದ್ದರಾಮಯ್ಯ ಹಾಗೂ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ನಂಜನಗೂಡಲ್ಲಿ ಸವಿತಾ ಮಹರ್ಷಿ ಜಯಂತಿ



ನಂಜನಗೂಡಲ್ಲಿ ಸವಿತಾ ಮಹರ್ಷಿ ಜಯಂತಿ ನಡೆಯಿತು.

ನಂಜನಗೂಡು, ಫೆ.7– ಶೋಷಿತ ಸಮಾಜಗಳು ಸಮಾಜದ ಮುಖ್ಯವಾಹಿನಿಗೆ ಬರಲು ಶಿಕ್ಷಣವೇ ಪ್ರಮುಖ ಅಸ್ತ್ರ. ಆದ್ದರಿಂದ ನಿಮ್ಮ ಮಕ್ಕಳಿಗೆ ತಪ್ಪದೇ ಶಿಕ್ಷಣ ಕೊಡಿಸಿ ಎಂದು ಉಪ ತಹಸೀಲ್ದಾರ್ ಮಹೇಶ್ ಪಾಟೀಲ್ ಸಲಹೆ ನೀಡಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯಾವ ವೃತ್ತಿಯೂ ಕನಿಷ್ಠವಲ್ಲ. ಹೀಗಾಗಿ ಕೀಳರಿಮೆ ಬಿಟ್ಟು ಸವಿತಾ ಸಮಾಜದವರು ಕೌಶಲ್ಯಗಳನ್ನು ಕಲಿತು ಸಾಮರ್ಥ್ಯ ವೃದ್ಧಿಸಿಕೊಂಡು ಉದ್ಯಮಿಗಳಾಗಬೇಕು. ಸವಿತಾ ಸಮಾಜ ಶಿಕ್ಷಣದ ಕೊರತೆಯಿಂದಾಗಿ ಆರ್ಥಿಕ, ಸಾಮಾಜಿಕವಾಗಿ ಹಿಂದೆ ಉಳಿದಿದೆ. ನಿಮ್ಮ ಹಕ್ಕುಗಳನ್ನು ಪಡೆಯಲು ಸಂಘಟಿತರಾಗಿ ಜೊತೆಗೆ ಕಡ್ಡಾಯವಾಗಿ ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದ ಅವರು, ಸವಿತಾ ಮಹರ್ಷಿಗಳು ಆಯುರ್ವೇದ ಮತ್ತು ಸಂಗೀತ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಭಾಷಣಕಾರ ಬೇವಿನಹಳ್ಳಿ ಉಮೇಶ್ ಮಾತನಾಡಿ, ಸವಿತಾ ಮಹರ್ಷಿಗಳು ತಮ್ಮ ವಿಚಾರಧಾರೆಗಳ ಮೂಲಕ ಜನರಿಗೆ ಜೀವನದ ಮೌಲ್ಯ ತಿಳಿಸಿದ್ದಾರೆ. ಜೊತೆಗೆ ಆಯುರ್ವೇದ ಶಾಸ್ತ್ರ ಹುಟ್ಟಿ ಹಾಕಿದ್ದು, ಮೊದಲ ಬಾರಿಗೆ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ ಎಂಬ ಉಲ್ಲೇಖ ಸಾಕಷ್ಟು ಗ್ರಂಥಗಳಲ್ಲಿದೆ. ಗಾಯತ್ರಿ ಮಂತ್ರದಲ್ಲೂ ಇದರ ಉಲ್ಲೇಖವಿದೆ. ಸವಿತಾ ಮಹರ್ಷಿ ನಮ್ಮ ಪಾರಂಪರಿಕ ಶಿಕ್ಷಣ ಎನಿಸಿದ್ದಾರೆ. ಆದ್ದರಿಂದ ನಮ್ಮ ಪಾರಂಪರಿಕ ಶಿಕ್ಷಣದ ಅರಿವಿನ ಜೊತೆಗೆ ಆಧುನಿಕ ವೈಜ್ಞಾನಿಕ ಶಿಕ್ಷಣವನ್ನು ನಮ್ಮ ಮುಂದಿನ ಪೀಳಿಗೆಗೆ ಕಲಿಸಬೇಕಿದೆ. ಇಲ್ಲವಾದಲ್ಲಿ ನಮ್ಮ ಪಾರಂಪರಿಕ ಶಿಕ್ಷಣ ನಶಿಸಿ ಹೋಗಲಿದೆ ಎಂದರು.

ಸಮಾರಂಭದಲ್ಲಿ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಕೃಷ್ಣರಾಜು, ಸವಿತಾ ಕೇಶಾಲಂಕಾರಿ ಸಂಘದ ಅಧ್ಯಕ್ಷ ಪುಟ್ಟರಾಜು, ಮುಖಂಡರಾದ ಶ್ರೀನಿವಾಸ್, ವಿಷಕಂಠ, ರವಿ, ಮಹದೇವ, ಸುರೇಶ್, ನಂಜುಂಡಸ್ವಾಮಿ, ಸುರೇಶ್, ವಿಜಯಕುಮಾರ್, ಚೇತನ್ ಸೇರಿದಂತೆ ಹಲವರಿದ್ದರು.

ರೈತ ನಾಯಕ ದಿ.ಪ್ರೊ.ಎಂ.ಡಿ.ನಂಜುಂಡಸ್ವಾಮಿ ಜನ್ಮದಿನದ ಅಂಗವಾಗಿ

ಫೆ.13, ಮೈಸೂರಲ್ಲಿ ಜಿಲ್ಲಾ ರೈತ ಸಮಾವೇಶ



ಜಿಲ್ಲಾ ರೈತ ಸಮಾವೇಶದ ಕರಪತ್ರವನ್ನು ಬಿಡುಗಡೆಗೊಳಿಸಲಾಯಿತು.

ಹೆಚ್.ಡಿ.ಕೋಟೆ, ಫೆ.7– ರೈತ ನಾಯಕ ದಿ.ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ 89 ಜನ್ಮದಿನದ ಅಂಗವಾಗಿ ಫೆ.13 ರಂದು ಮೈಸೂರಿನ ಪುರಭವನದಲ್ಲಿ ಜಿಲ್ಲಾ ರೈತ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಪಟ್ಟಣದ ಸರ್ಕಾರಿ ವಸತಿ ಗೃಹದ ಆವರಣದಲ್ಲಿ ನಡೆದ ರೈತ ಮುಖಂಡರ ಸಭೆಯಲ್ಲಿ ಸಮಾವೇಶದ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ದಿ.ಪ್ರೊ.ಎಂ.ಡಿ.ನಂಜುಂಡಸ್ವಾಮಿ ಅವರ ಜನ್ಮ ದಿನವನ್ನು ರಾಜ್ಯ ರೈತ ಸಂಘ ಪ್ರತಿ ವರ್ಷ ವಿಶೇಷವಾಗಿ ಆಚರಿಸುತ್ತಿದ್ದು, ಈ ವರ್ಷ ಮೈಸೂರಿನಲ್ಲಿ ಜಿಲ್ಲಾ ರೈತ ಸಮಾವೇಶ ಹಮ್ಮಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿ ಖಂಡಿಸಿ ರೈತ, ಗ್ರಾಮೀಣ ಪರ ಯೋಜನೆಗಳನ್ನು ರೂಪಿಸಿ ಕೃಷಿ ಉಳಿಸಲು ಆಗ್ರಹಿಸಿ ಹಲವು ನಿರ್ಣಯಗಳನ್ನು ಕೈಗೊಳ್ಳಲಿದೆ. ಹೊಸತನದೊಂದಿಗೆ ಹಳ್ಳಿ ಹಳ್ಳಿಗೆ ರೈತ ಚಳವಳಿ ಕೊಂಡೊಯ್ಯುವ ಉದ್ದೇಶದಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾವೇಶವನ್ನು ಮಾಜಿ ಶಾಸಕ ಡಾ.ಸುನೀಲಂ ಉದ್ಘಾಟಿಸಲಿದ್ದಾರೆ. ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಬಿ.ಆರ್. ಪಾಟೀಲ್, ಜಾಗೃತಾ ಕರ್ನಾಟಕ ಡಾ.ವಿ. ವಾಸು, ಕೃಷಿ ವಿಜ್ಞಾನಿ ಡಾ.ಪ್ರಕಾಶ್ ಕಮ್ಮರಡಿ ಸೇರಿದಂತೆ ರೈತ ಸಂಘದ ರಾಜ್ಯ ಮಟ್ಟದ ನಾಯಕರು, ಪ್ರಗತಿಪರ ಸಂಘಗಳ ನಾಯಕರು ಭಾಗವಹಿಸಲಿದ್ದಾರೆ ಎಂದರು.

ಸಮಾವೇಶದಲ್ಲಿ 5 ಸಾವಿರ ರೈತ ಮುಖಂಡರು ಭಾಗವಹಿಸಲಿದ್ದು, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಿಂದ ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು. ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಂಕಯ್ಯ, ಪಳನಿಸ್ವಾಮಿ, ಪುಟ್ಟಣ್ಣ, ಮಹದೇವನಾಯಕ, ಚನ್ನನಾಯಕ, ಪ್ರಸಾದ್, ನಂದೀಶ, ದೇವಮ್ಮ, ರೈತ ಮುಖಂಡರು ಹಾಜರಿದ್ದರು.

ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿ: ಶಾಸಕರಿಗೆ ಅಭಿನಂದನೆ



ಸರಗೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಲಾಯಿತು.

ಸರಗೂರು, ಫೆ.7– ಪಟ್ಟಣದಲ್ಲಿ ಇತ್ತೀಚೆಗೆ (ಜ.17) ನಡೆದ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾದ ಹಿನ್ನೆಲೆಯಲ್ಲಿ ಪಟ್ಟಣದ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ, ಶಾಸಕ ಅನಿಲ್ ಅವರನ್ನು ತಾಲೂಕು ಕಸಾಪ ವತಿಯಿಂದ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಅನಿಲ್, ಸರಗೂರು ತಾಲೂಕು ಕೇಂದ್ರವಾದ ಬಳಿಕ ಸಮ್ಮೇಳನ ನಡೆದಿದ್ದರಿಂದ ಐತಿಹಾಸಿಕ ಮಹತ್ವ ಪಡೆದುಕೊಂಡಿದೆ. ಸರಗೂರು ತಾಲೂಕು ವನ, ಜಲಸಿರಿ ಸೊಬಗಿನಿಂದ ಕೂಡಿದ್ದು, ಸಾಂಸ್ಕೃತಿಕವಾಗಿ ಕನ್ನಡ ಸಾಹಿತ್ಯ ಚರಿತ್ರೆ ಹೇಳುವ ಕೆ.ಬೆಳ್ತೂರು ಶಾಸನ ಒಳಗೊಂಡಂತೆ ನಾಡಿನ ಸಾಂಸ್ಕೃತಿಕ ನೆಲೆ ಹಿನ್ನೆಲೆಯ ಬೀಡಾಗಿದೆ. ತಾಲೂಕಿನ ದೇವಾಲಯಗಳು ಹಲವು ಧರ್ಮಗಳ ವೈಶಿಷ್ಟ್ಯ ಸಾರುತ್ತದೆ. ತಾಲೂಕಿನ ಬೆಳವಣಿಗೆಯಲ್ಲಿ ಹತ್ತಾರು ಸಾಧಕರ ಶ್ರಮವಿದೆ. ಎಲ್ಲಾ ವಿಚಾರಗಳ ಕುರಿತು ಜೊತೆಗೆ ಕನ್ನಡ ಭಾಷೆ ಬೆಳವಣಿಗೆ ಕುರಿತಾದ ವಿಚಾರ ಗೋಷ್ಠಿಗಳು–ಚರ್ಚೆಗಳು ಸಾಹಿತ್ಯ ಸಮ್ಮೇಳನದಲ್ಲಿ ನಡೆದಿದೆ. ಸಾಹಿತಿ ಡಾ.ವೈ.ಡಿ.ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಸಂಪನ್ನಗೊಂಡಿದೆ. ಸಮ್ಮೇಳನ ಯಶಸ್ವಿಯಾಗಿ ನಡೆಯಲು ತಾಲೂಕಿನ ಎಲ್ಲಾ ಅಧಿಕಾರಿ ವರ್ಗ ಸಹಕಾರ ನೀಡಿದೆ. ತಾಲೂಕಿನ ಎಲ್ಲಾ ಸಮಾಜದ ಸಂಘಟನೆಗಳ ಮುಖಂಡರು, ಪತ್ರಕರ್ತರು ಮುಕ್ತ ಮನಸ್ಸಿನಿಂದ ಭಾಗವಹಿಸಿದ್ದು ವಿಶೇಷವಾಗಿತ್ತು. ಇದಕ್ಕಾಗಿ ಎಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿದರು. ಇದೇ ವೇಳೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳ ಮುಖ್ಯಸ್ಥರನ್ನು ಶಾಸಕ ಅನಿಲ್ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಕೋಟೆ ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ತಹಸೀಲ್ದಾರ್ ಮೋಹನಕುಮಾರಿ, ತಾಪಂ ಇಓ ಪ್ರೇಮ್‌ಕುಮಾರ್, ಬಿಇಓ ಕಾಂತರಾಜು, ಪಪಂ ಮುಖ್ಯಾಧಿಕಾರಿ ಸಂತೋಷ್ ಕುಮಾರ್, ಅಧ್ಯಕ್ಷೆ ರಾಧಿಕಾ, ಸದಸ್ಯ ಶ್ರೀನಿವಾಸ್, ಚಲುವಕೃಷ್ಣ, ಸಮ್ಮೇಳನದ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಪಿ.ರವಿ, ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ದಯಾನಂದ್, ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಕಸಾಪ ವಿವಿಧ ಸಮಿತಿ ಸಂಚಾಲಕರಾದ ಗಿರೀಶ್, ಚಿಕ್ಕಣ್ಣ, ಎಸ್.ಎನ್.ನಾಗರಾಜು, ಮಹೇಶ್, ಶಿವರಾಜು, ಶಿಕ್ಷಕ ಬಂಗರಾಯ್ಯ, ನಿಂಗರಾಜು, ರಮೇಶ್, ಶಿವಶಂಕರ್, ಸೋಮಣ್ಣ, ಉಮೇಶ್ ಇನ್ನಿತರರಿದ್ದರು.

ಚಿರತೆ ದಾಳಿಗೆ 2 ಕುರಿ ಬಲಿ

ಮಲ್ಕುಂಡಿ, ಫೆ.7– ಚಿರತೆ ದಾಳಿಗೆ ಎರಡು ಕುರಿಗಳು ಬಲಿಯಾಗಿರುವ ಘಟನೆ ಹುರ ಗ್ರಾಮದ ಹೊರವಲಯದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ರೈತ ಕೃಷ್ಣ ಅವರಿಗೆ ಸೇರಿದ ಕುರಿಗಳು ಬಲಿಯಾಗಿರುವುದು. ಇವರು ಶುಕ್ರವಾರ ಬೆಳಗ್ಗೆ ತಮ್ಮ ತೋಟದಲ್ಲಿ ಕುರಿಗಳನ್ನು ಕಟ್ಟಿಹಾಕಿ ಕೆಲಸ ಮಾಡುತ್ತಿದ್ದರು. ಈ ವೇಳೆ ಚಿರತೆ ಕುರಿಗಳ ಮೇಲೆ ಏಕಾಏಕಿ ದಾಳಿ ನಡೆಸಿ ಅರೆಬರೆ ತಿಂದು ಪರಾರಿಯಾಗಿದೆ. ಘಟನೆಯಿಂದ ಗ್ರಾಮಸ್ಥರು ಆತಂಕಗೊಂಡಿದ್ದು, ತಮ್ಮ ಜಮೀನುಗಳಿಗೆ ತೆರಳಲು ಭಯಗೊಂಡಿದ್ದಾರೆ. ಈ ಭಾಗದಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೆಚ್.ಟಿ.ಗೋವಿಂದರಾಜು ನಿಧನ




ಹುಣಸೂರು, ಫೆ.7– ನಗರದ ಮಾರಿಗುಡಿ ಬೀದಿ ನಿವಾಸಿ ಲೇ.ತಮ್ಮಯ್ಯನವರ ಪುತ್ರ, ವೆಂಕಟರಮಣ ಸಾಮಿಲ್ ಮಾಲೀಕ ಹೆಚ್.ಟಿ. ಗೋವಿಂದರಾಜು(60) ಶುಕ್ರವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಪುತ್ರ ಭಾನುವಾರ ಕೆನಡಾದಿಂದ ಆಗಮಿಸುವುದರಿಂದ ಶವವನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿದ್ದು, ಪುತ್ರ ಬಂದ ಬಳಿಕ ಹುಣಸೂರು ಅಥವಾ ಮೈಸೂರಿನಲ್ಲಿ ಅಂತ್ಯಕ್ರಿಯೆ ನಡೆಸುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ.

ಮೆಲ್ಲಹಳ್ಳಿ-ಹಾರೋಹಳ್ಳಿ ಪಿಎಸಿಎಸ್ ಚುನಾವಣೆ

ಅಧ್ಯಕ್ಷ ವೆಂಕಟೇಶ್, ಶಿವಣ್ಣ ಉಪಾಧ್ಯಕ್ಷರಾಗಿ ಆಯ್ಕೆ



ಮೆಲ್ಲಹಳ್ಳಿ–ಹಾರೋಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ವೆಂಕಟೇಶ್, ಉಪಾಧ್ಯಕ್ಷರಾಗಿ ಶಿವಣ್ಣ ಆಯ್ಕೆಯಾದರು.

ತಿ.ನರಸೀಪುರ, ಫೆ.7– ಮೆಲ್ಲಹಳ್ಳಿ–ಹಾರೋಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಎನ್.ವೆಂಕಟೇಶ್ ಹಾಗೂ ಉಪಾಧ್ಯಕ್ಷರಾಗಿ ಬಿ.ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಎನ್.ವೆಂಕಟೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಶಿವಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮಂಜು ಪ್ರಕಟಿಸಿದರು.

ಚುನಾವಣೆ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಮೆಲ್ಲಹಳ್ಳಿ ಮಹದೇವಸ್ವಾಮಿ, ಬಿ.ಕುಮಾರ್, ಎಂ.ಎನ್.ಲಕ್ಷ್ಮೀಶ, ಇಂದ್ರ, ನಾಗರಾಜಚಾರಿ, ತಿಮ್ಮಯ್ಯ ಹಾಜರಿದ್ದು ಅಧ್ಯಕ್ಷ–ಉಪಾಧ್ಯಕ್ಷರ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಎಂಎನ್ ವೆಂಕಟೇಶ್ ಮಾತನಾಡಿ, ನನ್ನನ್ನು ಅಧ್ಯಕ್ಷನಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರು, ಮುಖಂಡರಿಗೂ ಅಭಿನಂದನೆಗಳು. ಸಕಾಲದಲ್ಲಿ ಸಾಲ ಸೌಲಭ್ಯ, ರೈತರಿಗೆ ರಸಗೊಬ್ಬರ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆಗೆ ಕ್ರಮ ವಹಿಸುವ ಜೊತೆಗೆ ಸಂಘವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಲು ಎಲ್ಲಾ ಸದಸ್ಯರು ಸಹಕಾರ ನೀಡುವಂತೆ ಮನವಿ ಮಾಡಿದರು. ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ತರಲು ಮುಂದಾಗುವುದಾಗಿ ತಿಳಿಸಿದರು.

ಈ ವೇಳೆ ಸಿಇಓ ರಮೇಶ್, ಮಾಜಿ ಪ್ರಧಾನ ನಾಗೇಶ್‌ಗೌಡ, ಮಾಜಿ ಅಧ್ಯಕ್ಷರಾದ ಸಿ.ತಿಮ್ಮೇಗೌಡ, ಚಂದ್ರಶೇಖರ್, ಶಿವರಾಮು, ಮುಖಂಡರಾದ ದೇಶಪ್ಪ, ರವಿ, ರಾಜು, ಮೆಲ್ಲಹಳ್ಳಿ, ಹಾರೋಹಳ್ಳಿ, ಹಳ್ಳಿಕೆರೆಹುಂಡಿ, ಲಕ್ಷ್ಮೀಪುರ, ಶಿವಪುರ ಗ್ರಾಮದ ಯಜಮಾನರು ಮುಖಂಡರು ಹಾಜರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಅಭಿವೃದ್ಧಿಗೆ ಅನುದಾನ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇನೆ: ಶಾಸಕ ಜಿ.ಡಿ.ಹರೀಶ್‌ಗೌಡ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಹುಣಸೂರು, ಫೆ.7– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಬಿಳಿಕೆರೆ ಹೋಬಳಿ ವ್ಯಾಪ್ತಿಯಲ್ಲಿ 13.50 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ, ತೆಂಕಲಕೊಪ್ಪಲು ಗ್ರಾಮದ ಗುರುಮಠ ಆವರಣದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ಯಾವುದೇ ತಡೆ ಇಲ್ಲದೇ ನಡೆಯಲು ಕ್ರಮ ವಹಿಸಿ ನಿತ್ಯ ಸರ್ಕಾರದ ವಿವಿಧ ಇಲಾಖೆ ಸಚಿವರನ್ನು ಭೇಟಿ ಮಾಡಿ ಅನುದಾನ ತರುತ್ತಿದ್ದೇನೆ. ಶಾಸಕರು ಅನುದಾನ ತರಲು ಸಾಧ್ಯವಾಗುತ್ತಿಲ್ಲ ಎಂಬ ಚರ್ಚೆಗಳು ತಾಲೂಕಿನಲ್ಲಿ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ ಶಾಸಕನನ್ನಾಗಿ ಆಯ್ಕೆ ಮಾಡಿದ ತಾಲೂಕಿನ ಜನತೆಗಾಗಿ ನಾನು ಶಕ್ತಿಮೀರಿ ಶ್ರಮಿಸುತ್ತೇನೆ. ಆ ನಿಟ್ಟಿನಲ್ಲಿ ಸಿಎಂ, ಡಿಸಿಎಂ ಸೇರಿದಂತೆ ವಿವಿಧ ಇಲಾಖೆ ಸಚಿವರನ್ನು ಭೇಟಿ ಮಾಡಿ ತಾಲೂಕಿನ ಸಮಸ್ಯೆಗಳ ಬಗ್ಗೆ ತಿಳಿಸಿ ಅವರಿಂದ ಅನುದಾನ ಪಡೆಯುತ್ತಿದ್ದೇನೆ. ಇದಕ್ಕಾಗಿ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಇದೇ ವೇಳೆ ಶಾಸಕರು ತೆಂಕಲಕೊಪ್ಪಲು ಗ್ರಾಮದಲ್ಲಿ 10 ಕೋಟಿ ರೂ. ವೆಚ್ಚದಡಿ 3.92 ಕಿಮೀ ಉದ್ದದ ತೆಂಕಲಕೊಪ್ಪಲು–ಚೋಳೇನಹಳ್ಳಿ–ಬೋಳನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹುಸೇನ್‌ಪುರ, ಶಿರಿಯೂರು ಮತ್ತು ರಾಂಪುರ ಹಳ್ಳಿ ನಾಲೆಗಳ ಅಭಿವೃದ್ಧಿಗಾಗಿ ತಲಾ 1 ಕೋಟಿ ರೂ. ವೆಚ್ಚದಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ತೆಂಕಲಕೊಪ್ಪಲು ಗ್ರಾಮದಲ್ಲಿ 8.40 ಲಕ್ಷ ರೂ. ವೆಚ್ಚದಡಿ ಗ್ರಾಪಂ ವ್ಯಾಪ್ತಿಯ 2 ಮಳಿಗೆಗಳು ಮತ್ತು ಕೊಮ್ಮೇಗೌಡನಕೊಪ್ಪಲು ಗ್ರಾಮದಲ್ಲಿ ಒಂದು ಮಳಿಗೆಯನ್ನು ಉದ್ಘಾಟಿಸಿದರು. ಅಲ್ಲದೇ ಹುಸೇನ್‌ಪುರ ಮತ್ತು ತೆಂಕಲಕೊಪ್ಪಲು ಗ್ರಾಮದಲ್ಲಿ ತಲಾ 8 ಲಕ್ಷ ರೂ. ವೆಚ್ಚದಡಿ ನಿರ್ಮಾಣಗೊಂಡ ಅಂಗನವಾಡಿ ಕೇಂದ್ರ ಉದ್ಘಾಟಿಸಿದರು.

ಹುಟ್ಟುಹಬ್ಬದ ಸಂಭ್ರಮ: ಶಾಸಕ ಜಿ.ಡಿ.ಹರೀಶ್ ಗೌಡರ ಹುಟ್ಟುಹಬ್ಬ ಅಂಗವಾಗಿ ಅಭಿಮಾನಿಗಳ ಬಳಗದಿಂದ ಬೆಂಗಳೂರಿನ ಸ್ಪಂದನ ಹಾಸ್ಪಿಟಲ್, ಎಜಿಎಸ್ ಕಣ್ಣಿನ ಆಸ್ಪತ್ರೆ ಮತ್ತು ಲಯನ್ ಬ್ಲಡ್ ಸೆಂಟರ್ ಸಹಯೋಗದಲ್ಲಿ ಗ್ರಾಮದಲ್ಲಿ ಆರೋಗ್ಯ ಉಚಿತ ತಪಾಸಣೆ ಮತ್ತು ರಕ್ತದಾನ ಶಿಬಿರ ನಡೆಸಲಾಯಿತು. ತಾಲೂಕಿನ ಡೈರಿ ಸದಸ್ಯರಿಗೆ ಹೈನುಗಾರಿಕೆ ನಿರ್ವಹಣೆ ಕುರಿತು ವಿಚಾರಗೋಷ್ಠಿ ಆಯೋಜಿಸಿ ಮಾಹಿತಿ ಒದಗಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಮುಖಂಡರಾದ ಲೋಕೇಶ್, ಬಸವಲಿಂಗಯ್ಯ, ಗೌರಿಶಂಕರ್, ಕೆಂಪೇಗೌಡ, ಹುಸೇನ್‌ಪುರ ಗ್ರಾಪಂ ಅಧ್ಯಕ್ಷೆ ಲಕ್ಷ್ಮಮ್ಮ, ಉಪಾಧ್ಯಕ್ಷ ಬಸವರಾಜು, ಸದಸ್ಯರಾದ ಅವಿನಾಶ್, ಶಿಲ್ಪಿತ್, ಮೀನಾಕ್ಷಿ, ದಿವ್ಯ, ಹೇಮಂತ್ ಕುಮಾರ, ಪಿಡಿಓ ಛಾಯಾದೇವಿ ಸೇರಿದಂತೆ ಇತರರಿದ್ದರು.

ದೈಹಿಕ ಚಟುವಟಿಕೆಯಿಂದ ಅನಾರೋಗ್ಯ ಸಮಸ್ಯೆಗಳು ದೂರ

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಡಾ. ವಿಜಯಲಕ್ಷ್ಮಿ ಕಿವಿಮಾತು

●ದೈಹಿಕ ಶಿಕ್ಷಣದಿಂದ ಮನೋಲ್ಲಾಸ ●ಪ್ರತಿದಿನ ಕನಿಷ್ಠ 10 ಸಾವಿರ ಹೆಜ್ಜೆ ಹಾಕಿ ●ಉತ್ತಮ ಜೀವನ ಶೈಲಿ ಅನುಕರಣೆ ಅಗತ್ಯ ●ದೈಹಿಕವಾಗಿ ಸಮರ್ಥರಿದ್ದರೆ, ಮಾನಸಿಕವಾಗಿಯೂ ಫಿಟ್

ಮೈಸೂರು, ಫೆ.7(ಬಿಎಲ್‌ಯು)– ನಿರಂತರ ದೈಹಿಕ ಚಟುವಟಿಕೆಗಳಿಂದ ಮನೋ ಸಾಮರ್ಥ್ಯ ಹೆಚ್ಚಿಸಿಕೊಳ್ಳದಿದ್ದರೆ ಮಧುಮೇಹ, ರಕ್ತದೊತ್ತಡ, ಸಂಧಿವಾತ ಸೇರಿದಂತೆ ಅನೇಕ ಸಮಸ್ಯೆಗಳು ಎದುರಾಗುತ್ತವೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ.ಎ. ಹೆಚ್.ಎಂ. ವಿಜಯಲಕ್ಷ್ಮಿ ಎಚ್ಚರಿಸಿದರು.

ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಇಂದು ದೈಹಿಕ ಶಿಕ್ಷಣ ಮತ್ತು ಅನ್ವಯಿಕ ವಿಜ್ಞಾನ ವಿಷಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಸಮಸ್ಯೆಗಳಿಂದ ಪಾರಾಗಲು ಪ್ರತಿಯೊಬ್ಬರು ದೈಹಿಕ ಶಿಕ್ಷಣ ಅನುಸರಿಸಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಶುಕ್ರವಾರ ನಡೆದ ದೈಹಿಕ ಶಿಕ್ಷಣ ಮತ್ತು ಅನ್ವಯಿಕ ವಿಜ್ಞಾನ ವಿಷಯ ಕುರಿತ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಚೊಚ್ಚಲ ಖೋ ಖೋ ವಿಶ್ವಕಪ್ ಗೆದ್ದ ಭಾರತ ತಂಡದ ಮೈಸೂರಿನ ಆಟಗಾರ್ತಿ ಚೈತ್ರಾ ಅವರನ್ನು ಸನ್ಮಾನಿಸಲಾಯಿತು.

ಕ್ರೀಡೆ ಹಾಗೂ ದೈಹಿಕ ಶಿಕ್ಷಣ ಮನುಷ್ಯನಿಗೆ ಬಹು ಮುಖ್ಯ ಭಾಗವಾಗಿದೆ. ಇದು ಮನುಷ್ಯನ ಮನೋಲ್ಲಾಸವನ್ನು ಹೆಚ್ಚಿಸುತ್ತದೆ. ಕ್ರೀಡೆ ಮನೋರಂಜನೆ ಮತ್ತು ಶೈಕ್ಷಣಿಕ ಉನ್ನತಿಗಾಗಿ ಬಳಸಲ್ಪಡುವ ರಚನಾತ್ಮಕ ಚಟುವಟಿಕೆಯಾಗಿದೆ ಎಂದು ಡಾ.ವಿಜಯಲಕ್ಷ್ಮಿ ಅಭಿಪ್ರಾಯಪಟ್ಟರು.

ಸ್ವಾಸ್ಥ್ಯ ಆರೋಗ್ಯ ಕಾಪಾಡಲು ಪ್ರತಿಯೊಬ್ಬರು ವಾಯು ವಿಹಾರ ಸೇರಿದಂತೆ ಕೆಲವು ದೈಹಿಕ ಶಿಕ್ಷಣದ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಇದರಿಂದ ದೈಹಿಕವಾಗಿ ಎದುರಾಗುವ ಹಲವು ಅನಾರೋಗ್ಯ ಸಮಸ್ಯೆಯಿಂದ ಮುಕ್ತವಾಗಬಹುದು ಎಂದು ಹೇಳಿದರು.

ದೈಹಿಕ ಶಿಕ್ಷಣದ ಜೊತೆಗೆ ಶಿಸ್ತು ಬದ್ಧ ಆಹಾರ ಕ್ರಮ ಹಾಗೂ ಉತ್ತಮ ಜೀವನ ಶೈಲಿ ಅನುಸರಿಸಬೇಕು. ಸ್ಪರ್ಧಾ ಮನೋಭಾವ, ತಾಳ್ಮೆ, ಸಹನೆ ಸೇರಿದಂತೆ ಹಲವು ಗುಣಗಳನ್ನು ಇದು ಕಲಿಸುತ್ತದೆ. ಮಾನಸಿಕ ಸಾಮರ್ಥ್ಯ ಹೊಂದಿರುವವರು ಖಚಿತವಾಗಿ ಕ್ರೀಡಾ ಸ್ಪರ್ಧೆಯಲ್ಲಿ ಜಯ ಗಳಿಸುತ್ತಾರೆ ಎಂದು ಡಾ.ವಿಜಯ ಲಕ್ಷ್ಮಿ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ತಮಿಳುನಾಡಿನ ಅಲಗಪ್ಪ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಹಾಗೂ ಹೆಲ್ತ್ ಸೈನ್ಸ್ ಮುಖ್ಯಸ್ಥ ಪ್ರೊ. ಮಣಿ ಅಳಗು, ಪ್ರತಿಯೊಬ್ಬರು ದೈಹಿಕ ಆರೋಗ್ಯದ ಬಗ್ಗೆ ಗಮನ ನೀಡಬೇಕು. ಇಲ್ಲದಿದ್ದರೆ ಹಲವು ರೀತಿಯ ಅನಾರೋಗ್ಯ ಸಮಸ್ಯೆಗಳು ಕಾಡುತ್ತವೆ ಎಂದು ಎಚ್ಚರಿಕೆ ನೀಡಿದರು.

ಕೊರೊನಾ ವ್ಯಾಪಿಸಿದ ಸಂದರ್ಭದಲ್ಲಿ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ಇರುವವರು ದೈಹಿಕವಾಗಿ ಎದುರಾದ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದರು. ರೋಗನಿರೋಧಕ ಶಕ್ತಿಯಿದ್ದವರು ಕೊರೊನಾ ದಿಂದ ಪಾರಾಗಿ ಗೆದ್ದು ಬಂದರು ಎಂದು ಹೇಳಿದರು.

ಆದರೆ ಕೊರೊನಾ ಎರಡನೇ ಅಲೆ ಸಂದರ್ಭದಲ್ಲಿ ಸಾವಿರಾರು ಜನರು ಸಾವನ್ನಪ್ಪಿದರು. ಆದ ಕಾರಣ ಇಂತಹ ಸವಾಲು ಎದುರಿಸಲು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು ಎಂದರು.

ಪ್ರತಿದಿನ ವಾಯು ವಿಹಾರಕ್ಕೆ ಹೋಗಬೇಕು. ಕನಿಷ್ಠ 6 ರಿಂದ 10 ಸಾವಿರ ಹೆಜ್ಜೆ ಇಡಬೇಕು. ಇದರಿಂದ ದೈಹಿಕ ಸಾಮರ್ಥ್ಯ ಹೆಚ್ಚಾಗಿ ಅನಾರೋಗ್ಯದಿಂದ ಪಾರಾಗಬಹುದು. ಇಲ್ಲವೆಂದರೆ ಹೃದಯಾಘಾತ, ರಕ್ತದೊತ್ತಡ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ ಎಂದು ಪ್ರೊ. ಮಣಿ ಅಳಗು ಎಚ್ಚರಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಸೋಮಣ್ಣ, ಡಾ.ಬಿ.ಎಸ್.ಅಜಯ್ ಕುಮಾರ್, ಪ್ರೊ.ಮೊಹಮ್ಮದ್ ತಾರೀಖ್, ಡಾ.ಆರ್.ನಳಿನಿ, ಡಾ.ಎಸ್.ಮಂಜುಳಾ, ಡಾ.ರಮಣಿ, ಎಸ್.ಟಿ.ಉದಯ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚೀನಾ, ಅಮೇರಿಕಾ ಮಾದರಿ ದೈಹಿಕ ಶಿಕ್ಷಣ ಅನುಸರಿಸಬೇಕು

ಚೀನಾ ಹಾಗೂ ಅಮೇರಿಕಾ ಮಾದರಿಯ ದೈಹಿಕ ಶಿಕ್ಷಣವನ್ನು ಭಾರತದಲ್ಲೂ ಅನುಸರಿಸಬೇಕು.

ಚೀನಾ ಮತ್ತು ಅಮೇರಿಕಾದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಶಿಕ್ಷಣದವರೆಗೆ ದೈಹಿಕ ಶಿಕ್ಷಣವನ್ನು ಒಂದು ಪಠ್ಯವಾಗಿ ಕಡ್ಡಾಯಗೊಳಿಸಲಾಗಿದೆ.

ಬದುಕು ಕಟ್ಟಿಕೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಗೆ ದೈಹಿಕ ಶಿಕ್ಷಣ ಸಹಾಯಕವಾಗಲಿದೆ. ಇದರಿಂದ ಒಲಂಪಿಕ್ಸ್ ಸೇರಿದಂತೆ ಹಲವು ಕ್ರೀಡಾಕೂಟದಲ್ಲಿ ಚೀನಾ ಅಗ್ರ ಸ್ಥಾನ ಪಡೆಯಲಿದೆ.

– ಚೈತ್ರ, ಖೋ ಖೋ ವಿಜೇತ ಕ್ರೀಡಾಪಟು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅನ್‌ಲಾಕ್ ರಾಘವ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದ್ದಾಮುಯರ್ಚಿ (ತ): ರಾ.10ಕ್ಕೆ.
ಸ್ಕ್ರೀನ್ 3	ಛೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಫೆ.16, ಮೈಸೂರಲ್ಲಿ ಫ್ಯಾಷನ್ ಶೋ ಸ್ಪರ್ಧೆ

ಮೈಸೂರು, ಫೆ.7(ಜಿಎ)–ಮೈಸೂರಿನ ಗಾನವಿ ಕಂಬೈನ್ಸ್ ವತಿಯಿಂದ ಫೆ.16 ರಂದು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9ರವರೆಗೆ ನಗರದ ಜೆಎಲ್‌ಬಿ ರಸ್ತೆ ಮಯಾಸ್ ಕಿಂಗ್ಸ್ ಕೋರ್ಟ್‌ನಲ್ಲಿ ಫ್ಯಾಷನ್ ಶೋ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಂಬೈನ್ಸ್‌ನ ಮುಖ್ಯಸ್ಥೆ ಶೋಭಾ ನಾಗರಾಜ್ ಈ ವಿಷಯ ತಿಳಿಸಿ, ಮಾಜಿ ಸಚಿವ ವರ್ತೂರು ಪ್ರಕಾಶ್ ಫ್ಯಾಷನ್ ಶೋ ಗೆ ಚಾಲನೆ ನೀಡುವರು. ಕಿಡ್ಸ್, ಮಿಸಸ್, ಮಿಸ್ಟರ್ ಕರ್ನಾಟಕ ಬ್ಯೂಟಿ ಪೆಜೆಂಟ್ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ನಾಲ್ಕರಿಂದ 75 ವರ್ಷ ವಯಸ್ಸಿನವರು ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 74838 08278 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರೇಮಾ ರವಿಕುಮಾರ್, ಜ್ಯೋತಿ, ಸೌಮ್ಯ ಉಪಸ್ಥಿತರಿದ್ದರು.

ಫೆ.11 ಬೆಂಗಳೂರಲ್ಲಿ ಹಿರಿಯ ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್‌ಗೆ ಅಭಿನಂದನೆ

ಮೈಸೂರು, ಫೆ.7(ಜಿಎ)–ಹಿರಿಯ ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಅವರಿಗೆ ಅಭಿನಂದನಾ ಸಮಾರಂಭ ಹಾಗೂ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಫೆ.11 ರಂದು ಬೆಳಗ್ಗೆ 10ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹೋರಾಟಗಾರ ಅಹಿಂದ ಜವರಪ್ಪ ಈ ವಿಷಯ ತಿಳಿಸಿ, ಈ ಭಾಗದಿಂದಲೂ ಪ್ರಗತಿಪರ ಚಿಂತಕರು ಹಾಗೂ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು.

ಅಂದು ಬೆಳಗ್ಗೆ 10.30ಕ್ಕೆ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಕೆ. ಮರುಳಸಿದ್ದಪ್ಪ ಅಧ್ಯಕ್ಷತೆ ವಹಿಸುವರು, ಪ್ರೊ.ಎಲ್.ಎನ್. ಮುಕುಂದರಾಜ್, ಡಾ. ಪುರುಷೋತ್ತಮ ಬಿಳಿಮಲೆ ಅತಿಥಿಗಳಾಗಿರುವರು. ನಂತರ ವಿಚಾರಗೋಷ್ಠಿಗಳು ನಡೆಯಲಿವೆ. ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಡಾ. ಬಂಜಗೆರೆ ದಂಪತಿಯನ್ನು ಅಭಿನಂದಿಸಲಾಗುವುದು. ಡಾ.ಸಿದ್ದನಗೌಡ ಪಾಟೀಲ ಸಮಾರೋಪ ನುಡಿ ಆಡುವರು, ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸುವರು, ಕೆ.ಎ.ದಯಾನಂದ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್, ಸತೀಶ್‌ಚಂದ್ರ, ಮನೋಜ್, ಉತ್ತನಹಳ್ಳಿ ಶಿವಣ್ಣ ಉಪಸ್ಥಿತರಿದ್ದರು.

‘ಇಂಡಿಯಾ ಬುಕ್ ಆಫ್ ರೆಕಾರ್ಡ್’ ಸೇರಿದ ಮೈಸೂರಿನ 4 ವರ್ಷದ ಬಾಲಕಿ

ದೇಶದ ಎಲ್ಲಾ ರಾಜ್ಯಗಳು, ರಾಜಧಾನಿಗಳ ಹೆಸರು ಪಟಪಟನೆ ಹೇಳುವ ಪೋರಿ!

ಮೈಸೂರು, ಫೆ.7(ಜಿಎ)–ತಮ್ಮ 4 ವರ್ಷ 6 ತಿಂಗಳ ಪುತ್ರಿ ಸಾರ ರೋಮಿಯೋ ನಿರರ್ಗಳವಾಗಿ ದೇಶದ ಎಲ್ಲಾ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳ ಹೆಸರುಗಳನ್ನು ಹೇಳುವ ಮೂಲಕ ‘ಇಂಡಿಯಾ ಬುಕ್ ಆಫ್ ರೆಕಾರ್ಡ್’ನಲ್ಲಿ ತನ್ನ ಹೆಸರನ್ನು ದಾಖಲಿಸಿ ಸಾಧನೆ ಮೆರೆದಿದ್ದಾಳೆ ಎಂದು ತಾಯಿ ಮಾಧುರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಮೈಸೂರಿನ ಜೆಪಿ ನಗರದ ನಿವಾಸಿಗಳಾಗಿದ್ದು, ಸಾರ ಸೈಂಟ್ ಬ್ರಿಗೇಡ್ ನರ್ಸರಿ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ನಾನು ಗೃಹಿಣಿಯಾಗಿದ್ದು, ಅವರ ತಂದೆ ಖಾಸಗಿ ಕಂಪನಿ ಉದ್ಯೋಗಿಯಾಗಿದ್ದಾರೆ. ನಮ್ಮ ಪುತ್ರಿಯೂ ತನ್ನ ಸೋದರತ್ತೆ ಮರಿಯಾ ಶೈನಿ ಅವರು ಮನೆಯಲ್ಲಿ ಸಂಜೆ ವೇಳೆ ಎಲ್‌ಕೆಜಿಯಿಂದ ಎಂಟನೆ ತರಗತಿ ವರೆಗಿನ ಮಕ್ಕಳಿಗೆ ಮನೆಪಾಠ ಮಾಡುತ್ತಾರೆ. ಈ ಸಮಯದಲ್ಲಿ ಆಟವಾಡುತ್ತಲೇ ಮನೆಪಾಠವನ್ನು ಆಲಿಸಿದ ಸಾರ ದೇಶದ ಎಲ್ಲಾ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳ ಹೆಸರುಗಳನ್ನು ಕಂಠಪಾಠ ಮಾಡಿಕೊಂಡು ಸಾಧನೆ ಮಾಡಿದ್ದಾಳೆ ಎಂದರು.

ಜ.7ರಂದು ದೇಶದ ಎಲ್ಲಾ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳ ಹೆಸರುಗಳನ್ನು ಹೇಳುವ ವಿಡಿಯೋ ತುಣುಕನ್ನು ಚಿತ್ರೀಕರಿಸಿ ಅದನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ ಸಂಸ್ಥೆಗೆ ಇಮೇಲ್ ಮೂಲಕ ರವಾನಿಸಲಾಗಿತ್ತು. ನಂತರ ಜ.14ರಂದು ತಮ್ಮ ಮಗು ರೆಕಾರ್ಡ್ ಮಾಡಿದ್ದಾಳೆ. ಅತಿ ಕಡಿಮೆ ವಯಸ್ಸಿನ ಹಲವು ವಿದ್ಯಾರ್ಥಿಗಳಲ್ಲಿ ಅತಿ ಕಡಿಮೆ ಸಮಯಕ್ಕೆ ದಾಖಲೆ ಮಾಡಿದ್ದಾಳೆ ಎಂದು ಪ್ರಸಂಶಿಸಿದ್ದಾರೆ ಎಂದು ಸಂತಸ ಹಂಚಿಕೊಂಡರು. ಸುದ್ದಿಗೋಷ್ಠಿಯಲ್ಲಿ ತಂದೆ ರೋಮಿಯೋ ಟೈಸನ್, ಚಿತ್ರಕಲಾ ಶಿಕ್ಷಕ ಬಿ.ಕಿರಣ್ ಕುಮಾರ್ ಉಪಸ್ಥಿತರಿದ್ದರು.



‘ಇಂಡಿಯಾ ಬುಕ್ ಆಫ್ ರೆಕಾರ್ಡ್’ ಮಾಡಿದ ಸಾರಾ ರೋಮಿಯೋ

ಬೆಳಗಾವಿಗೆ ಮುಗಿಯದ ಕುಂಭಮೇಳ ಶೋಕ; ಕಾಲ್ತುಳಿತದಲ್ಲಿ ನಾಲ್ವರ ಬಳಿಕ, ಅಪಘಾತಕ್ಕೆ ಮತ್ತೆ ನಾಲ್ವರು ಬಲಿ

ಬೆಳಗಾವಿ, ಫೆ.7– ಪ್ರಯಾಗ್‌ರಾಜ್ ಕುಂಭಮೇಳದಲ್ಲಿ ನಡೆದ ಭೀಕರ ಕಾಲ್ತುಳಿತದಲ್ಲಿ ಬೆಳಗಾವಿ ಜಿಲ್ಲೆಯ ನಾಲ್ವರು ಈಗಾಗಲೇ ಸಾವನ್ನಪ್ಪಿದ್ದರು. ಈ ಘಟನೆ ಮಾಸುವ ಮುನ್ನವೇ ಬೆಳಗಾವಿಯಿಂದ ಕುಂಭಮೇಳಕ್ಕೆ ಹೊರಟಿದ್ದ ವಾಹನ ಅಪಘಾತಕ್ಕೀಡಾಗಿದ್ದು, ಮತ್ತೆ ಬೆಳಗಾವಿಯ ನಾಲ್ವರು ಸಾವಿಗೀಡಾಗಿದ್ದಾರೆ.

ಬೆಳಗಾವಿಯಿಂದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಪವಿತ್ರ ಗಂಗಾಸ್ನಾನ ಮಾಡುವುದಕ್ಕೆ ಹೊರಟಿದ್ದರು. ಆದರೆ, ಮಧ್ಯಪ್ರದೇಶದ ಇಂದೋರ್ ಜಿಲ್ಲೆಯಲ್ಲಿ ನಡೆದ ಭೀಕರ ಅಪಘಾತದಲ್ಲಿ ನಾಲ್ವರು ಸಾವಿಗೀಡಾಗಿದ್ದಾರೆ. ಜೊತೆಗೆ, 15 ಯಾತ್ರಾರ್ಥಿಗಳಿಗೆ ಗಂಭೀರ ಗಾಯಗಳಾಗಿವೆ. ಕ್ಯಾಂಟರ್, ಟಿಟಿ ಹಾಗೂ ಬೈಕ್ ನಡುವೆ ಸರಣಿ ಅಪಘಾತ ಸಂಭವಿಸಿದೆ. ಈ ಘಟನೆಯಲ್ಲಿ ಬೆಳಗಾವಿ ಜಿಲ್ಲೆ ಗಣೇಶಪುರ ನಿವಾಸಿ ಸಾಗರ ಶಾಪುರಕರ(55), ಶಿವಾಜಿನಗರದ ಸಂಗೀತಾ ಮೇತ್ರಿ, ವಡಗಾವಿಯ ಜ್ಯೋತಿ ಖಾಂಡೇಕರ ಮತ್ತು ನೀತಾ(50) ಮೃತಪಟ್ಟಿದ್ದಾರೆ ಎಂದು ಮಾಹಿತಿ ಬಂದಿದೆ. ಬೆಳಗಾವಿಯಿಂದ ಟೆಂಪೋ ಟ್ರಾವೆಲರ್ (ಟಿಟಿ) ವಾಹನದಲ್ಲಿ 2 ದಿನಗಳ ಹಿಂದೆ 15ಕ್ಕೂ ಅಧಿಕ ಯಾತ್ರಾರ್ಥಿಗಳು ಪ್ರಯಾಗ್‌ರಾಜ್‌ಗೆ ಪ್ರಯಾಣ ಬೆಳೆಸಿದ್ದರು. ಆದರೆ, ಇಂದು ಬೆಳಗ್ಗೆ ವಾಹನ ಭೀಕರ ಅಪಘಾತವಾಗಿದೆ.

ಶಾಲೆಗೆ ಮಂಜೂರಾಗಿದ್ದ ಭೂಮಿ ಕಬಳಿಕೆ ಆರೋಪ

ಬೋಗಾದಿ ಗ್ರಾಮಸ್ಥರ ಪ್ರತಿಭಟನೆ

ಮೈಸೂರು, ಫೆ 7– ಶಾಲೆಗಾಗಿ ಮಂಜೂರಾಗಿದ್ದ ಭೂಮಿಯನ್ನು ಖಾಸಗಿ ವ್ಯಕ್ತಿ ಕಬಳಿಸಲು ಯತ್ನಿಸುತ್ತಿದ್ದು, ಅದನ್ನು ತಡೆಯಬೇಕೆಂದು ಆಗ್ರಹಿಸಿ ಬೋಗಾದಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಬೋಗಾದಿಯ ಹರಿಗಿರಿ ಸೇವಾ ಪ್ರತಿಷ್ಠಾನದ ಬಳಿ ಪ್ರತಿಭಟನೆ ನಡೆಸಿದ ಗ್ರಾಮಸ್ಥರು, ಬೋಗಾದಿ ಸರ್ವೆ ನಂಬರ್ 32ರಲ್ಲಿ (ಹೊಸ ಸರ್ವೆ ನಂಬರ್ 349) 25 ಗುಂಟೆ ಜಾಗವನ್ನು ಶಾಲೆ ನಿರ್ಮಾಣಕ್ಕಾಗಿ 1997–98ರಲ್ಲಿ ಸರ್ಕಾರದಿಂದ ಹರಿಗಿರಿ ಸೇವಾ ಪ್ರತಿಷ್ಠಾನಕ್ಕೆ ಮಂಜೂರು ಮಾಡಲಾಗಿತ್ತು. ಆದರೆ, ಖಾಸಗಿ ವ್ಯಕ್ತಿಯೊಬ್ಬರು ನಕಲಿ ದಾಖಲೆ ಸೃಷ್ಟಿಸಿಕೊಂಡು ಈ ಭೂಮಿಯನ್ನು ಕಬಳಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು.

ಈ ಭೂಮಿಗೆ ಸಂಬಂಧಿಸಿದಂತೆ ಈ ಹಿಂದೆ ತಹಸೀಲ್ದಾರ್ ಮಹೇಶ್, ಎಸಿಪಿ ಗಜೇಂದ್ರ ಪ್ರಸಾದ್, ಸರಸ್ವತಿಪುರಂ ಠಾಣೆ ಇನ್‌ಸ್ಪೆಕ್ಟರ್ ಪುರುಷೋತ್ತಮ್ ನೇತೃತ್ವದಲ್ಲಿ ನಡೆದಿದ್ದ ಶಾಂತಿ ಸಭೆಯಲ್ಲಿ ಸದರಿ ಭೂಮಿಗೆ ಸಂಬಂಧಪಟ್ಟಂತೆ ಯಥಾಸ್ಥಿತಿ ಕಾಪಾಡಿಕೊಳ್ಳಬೇಕೆಂದು ತೀರ್ಮಾನಿಸಲಾಗಿತ್ತು. ಆದರೆ, ಖಾಸಗಿ ವ್ಯಕ್ತಿ ಏಕಾಏಕಿ ಜೆಸಿಬಿ ಬಳಸಿ, ಈ ಭೂಮಿಯಲ್ಲಿದ್ದ ಪಾಳು ಮನೆಯನ್ನು ನೆಲಸಮ ಮಾಡಿ ಭೂಮಿ ಕಬಳಿಸಲು ಯತ್ನಿಸುತ್ತಿದ್ದಾರೆ. ಸರ್ಕಾರಿ ಭೂಮಿ ಸಾರ್ವಜನಿಕ ಉದ್ದೇಶಕ್ಕೆ ಮಾತ್ರವೇ ಬಳಕೆಯಾಗಬೇಕು ಎಂದು ಹೇಳಿದ ಗ್ರಾಮಸ್ಥರು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಭೂಮಿಯನ್ನು ಸಾರ್ವಜನಿಕ ಬಳಕೆಗೆ ಮೀಸಲಿಡಬೇಕೆಂದು ಆಗ್ರಹಿಸಿದರು.

ಮುಖಂಡರಾದ ಅರುಣ್‌ಕುಮಾರ್‌ಗೌಡ, ದೊಡ್ಡಲಿಂಗನ ರವಿ, ಪೈಲ್ವಾನ್ ಕೃಷ್ಣ, ತ್ಯಾಗು, ಕಿರಣ್‌ಕುಮಾರ್, ಭರತ್, ಕಾಂತರಾಜು, ರಘು, ಹಾಲಿನ ರೇವಣ್ಣ, ಶಶಿ, ಈಶ್ವರ್, ವಸಂತ್, ಪ್ರೇಮಸಾಗರ್, ಕೃಷ್ಣ, ಅವಿನಾಶ್, ಪ್ರಜು, ಸತ್ಯ ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಮಹಿಳಾ ಕೇಂದ್ರಿತ ಗ್ಯಾರಂಟಿಗಳ ಅನುಷ್ಠಾನ ಲಿಂಗಸಮಾನತೆ ಉಪಕ್ರಮಕ್ಕೆ ವಿಶ್ವಸಂಸ್ಥೆ ಅಧ್ಯಕ್ಷ ಫಿಲೆಮನ್ ಯಾಂಗ್ ಶ್ಲಾಘನೆ

ಬೆಂಗಳೂರು, ಫೆ.7– ಮಹಿಳೆಯರನ್ನು ಪ್ರಮುಖ ಫಲಾನುಭವಿಗಳನ್ನಾಗಿ ಕೇಂದ್ರೀಕರಿಸಿ ರಾಜ್ಯದಲ್ಲಿ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೂಲಕ ಕರ್ನಾಟಕ ಸಾಧಿಸಿರುವ ಲಿಂಗ ಸಮಾನತೆಯ ಉಪಕ್ರಮ ಗಳಿಗೆ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧ್ಯಕ್ಷ ಕ್ಯಾಮರೂನ್‌ನ ಫಿಲೆಮನ್ ಯಾಂಗ್ ಮೆಚ್ಚುಗೆ ಸೂಚಿಸಿದ್ದಾರೆ.



ಇಂದು (ಫೆ.7) ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಗರದ ಖಾಸಗಿ ಹೋಟೆಲ್ ತಾಜ್ ವೆಸ್ಟೆಂಡ್‌ನಲ್ಲಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ಸ್ವಸಹಾಯ ಗುಂಪಿನ ಮಹಿಳೆಯರು ರೇಷ್ಮೆ ಗೂಡುಗಳಿಂದ ತಯಾರಿಸಿದ ಪುಷ್ಪಗುಚ್ಛದೊಂದಿಗೆ ಸ್ವಾಗತಿಸಿದರು. ಒಂದು ಜಗತ್ತು ಹಲವು ಸಾಧ್ಯತೆಗಳನ್ನು ಬಿಂಬಿಸುವ ಕರ್ನಾಟಕ ಕುರಿತಾದ ಪುಸ್ತಕವನ್ನು ನೀಡಿದರು.

ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಕರ್ನಾಟಕವು ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿರುವ ಬಗ್ಗೆ ವಿಶ್ವಸಂಸ್ಥೆಯ ಅಧ್ಯಕ್ಷರು ಆಸಕ್ತಿಯಿಂದ ಹೆಚ್ಚು ಮಾಹಿತಿ ಹಾಗೂ ವಿವರಗಳನ್ನು ಬಯಸಿದರು. ಗ್ಯಾರಂಟಿ ಯೋಜನೆಗಳಲ್ಲಿ ಮಹಿಳೆಯರ ಕೈಗೆ ನಗದು ಹಣ ನೀಡುವ ಗೃಹಲಕ್ಷ್ಮಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಅವಕಾಶ ನೀಡುವ ಶಕ್ತಿ, ಕಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ದರವನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳು, ಹಸಿವು ಮತ್ತು ಅಪೌಷ್ಟಿಕತೆಯನ್ನು ತಡೆಗಟ್ಟಲು ತಲಾವಾರು ಪೋಷಕಾಂಶ ನೀಡಿಕೆ, ಕೌಶಲ್ಯದ ಮೂಲಕ ಉದ್ಯೋಗ ಗಳಿಕೆ, ಅಡುಗೆ ಅನಿಲ ಪೂರೈಕೆ, ಉಚಿತ ವಿದ್ಯುತ್ ಪೂರೈಕೆ ಕುರಿತ ಕಾರ್ಯಕ್ರಮಗಳ ವಿವರಗಳನ್ನು ಮುಖ್ಯ ಕಾರ್ಯದರ್ಶಿಗಳು ನೀಡಿದರು.

ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಸಂಘಟಿಸಲು, ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ, ವಿಷಕಾರಿ ಮುಕ್ತ ವಾತಾವರಣಕ್ಕಾಗಿ ಸಮಗ್ರ ಮತ್ತು ಸಾವಯವ ಕೃಷಿಗೆ ಪ್ರೋತ್ಸಾಹ ಕ್ರಮಗಳು ಸಮಗ್ರ ಹವಾಮಾನ ಬದಲಾವಣೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಹಾಯ ಮಾಡುತ್ತದೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಉತ್ತೇಜಿಸಲು ಮಹಿಳಾ ಪರ ಕಾರ್ಯಕ್ರಮಗಳನ್ನು ಮುನ್ನಡೆಸುತ್ತಿರುವ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕಾಳಜಿಯನ್ನು ವಿಶ್ವಸಂಸ್ಥೆಯ ಅಧ್ಯಕ್ಷರು ಶ್ಲಾಘಿಸಿದರು. ಮುಂಬರುವ ವಿಶ್ವಸಂಸ್ಥೆಯ ಕಾರ್ಯಾಗಾರಗಳಲ್ಲಿ ಕರ್ನಾಟಕದ ಯಶೋ ಗಾಥೆಗಳನ್ನು ಹಂಚಿಕೊಳ್ಳಬೇಕೆಂದು ಅವರು ಸಲಹೆ ನೀಡಿದರು, ಇದರಿಂದ ಇತರ ದೇಶಗಳು ಸಹ ಈ ಅತ್ಯುತ್ತಮ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಮುಡಾ ಪ್ರಕರಣ: ಹೈಕೋರ್ಟ್‌ನಿಂದ ಅರ್ಜಿ ವಜಾ; ಮೈಸೂರಲ್ಲಿ ಸಂಭ್ರಮಾಚರಣೆ

ಮೈಸೂರು, ಫೆ.7(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಿಬಿಐಗೆ ವಹಿಸುವುದಕ್ಕೆ ಹೈಕೋರ್ಟ್ ನಿರಾಕರಿಸಿದ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ‘ಸತ್ಯಮೇವ ಜಯತೆ’ ಘೋಷಣಾ ಫಲಕ ಪ್ರದರ್ಶಿಸಿ, ಸಿಹಿ ವಿತರಿಸುವ ಮೂಲಕ ಸಂಭ್ರಮಾಚರಿಸಿದರು.

ಹೈಕೋರ್ಟ್ ಏಕ ಸದಸ್ಯ ಪೀಠ ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಕೋರಿದ್ದ ಅರ್ಜಿ ವಜಾಗೊಳಿಸಿ ಆದೇಶ ನೀಡುತ್ತಿದ್ದಂತೆಯೇ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬೆಂಬಲಿಗರೊಂದಿಗೆ ಮೈಸೂರಿನ ರಾಮಸ್ವಾಮಿ ವೃತ್ತಕ್ಕೆ ಆಗಮಿಸಿ, ಸಾರ್ವಜನಿಕರಿಗ ಸಿಹಿ ವಿತರಿಸಿದರು. ಡೊಳ್ಳು ತಾಳಕ್ಕೆ ಎಂ.ಕೆ.ಸೋಮಶೇಖರ್ ಸೇರಿದಂತೆ ಬೆಂಬಲಿಗರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಅಲ್ಲದೆ, ‘ಸತ್ಯಮೇವ ಜಯತೆ’, ‘ಸತ್ಯಕ್ಕೆ ಸಂದ ಜಯ’ ಫಲಕ ಪ್ರದರ್ಶಿಸಿ ಹೈಕೋರ್ಟ್ ತೀರ್ಪು ಸ್ವಾಗತಿಸಿದರು.

ಕೇಂದ್ರ ಸರ್ಕಾರದ ಹುನ್ನಾರ: ಇದೇ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮುಡಾ ವಶಪಡಿಸಿಕೊಂಡ ಭೂಮಿಗೆ ಪರ್ಯಾಯವಾಗಿ ನಿವೇಶನ ಪಡೆದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರ ಎಳ್ಳಷ್ಟು ಇಲ್ಲ ಎಂದು ಬಿಜೆಪಿ ನಾಯಕರೂ ಸೇರಿದಂತೆ ಎಲ್ಲರಿಗೂ ಗೊತ್ತಿದೆ. ಆದರೆ, ಕೇಂದ್ರ ಸರ್ಕಾರದ ಇಬ್ಬರು ಪ್ರಭಾವಿ ನಾಯಕರು ಸಿದ್ದರಾಮಯ್ಯ ವಿರುದ್ಧ ಸಂಚು ನಡೆಸಿದರು. ಹಿಂದುಳಿದ ವರ್ಗಕ್ಕೆ ಸೇರಿದ ಪ್ರಭಾವಿ ಮುಂಚೂಣಿ ನಾಯಕರಾದ ಸಿದ್ದರಾಮಯ್ಯ ಅವರನ್ನು ಹೇಗಾದರೂ ಮಾಡಿ ಮಣಿಸಬೇಕು ಎಂದು ಹುನ್ನಾರ ನಡೆಸಿ, ಅವರ ವಿರುದ್ಧ ಇಡಿ ಹಾಗೂ ಇನ್ನಿತರ ಸಂಸ್ಥೆಗಳ ದುರುಪಯೋಗಪಡಿಸಿಕೊಂಡು ಕುತಂತ್ರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.


ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೋಷಿ. ನಿವೇಶನ ಪಡೆದ ವಿಚಾರದಲ್ಲಿ ಸಿದ್ದರಾಮಯ್ಯ ಎಲ್ಲಿಯೂ ಹಸ್ತಕ್ಷೇಪ ಮಾಡಿಲ್ಲ ಯಾವುದೇ ಶಿಫಾರಸ್ಸು ಪತ್ರವನ್ನೂ ನೀಡಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಬದಲಿ ನಿವೇಶನ ನೀಡಲಾಗಿದೆ ಈ ಎಲ್ಲಾ ಅಂಶ ಬಿಜೆಪಿ ನಾಯಕರಿಗೂ ಗೊತ್ತಿದೆ. ಆದರೆ, ಸಂಚು ನಡೆಸಿ, ಅಪಪ್ರಚಾರ ಮಾಡುತ್ತಿದ್ದು, ಇದೀಗ ಹೈಕೋರ್ಟ್ ನೀಡಿರುವ ತೀರ್ಪು ಸತ್ಯಕ್ಕೆ ಸಂದ ಜಯವಾಗಿದೆ. ಸತ್ಯ ಮೇವ ಜಯತೆ ಎಂಬುದು ತೀರ್ಪಿನಿಂದ ಸಾಬೀತಾಗಿದೆ. ಜನತೆ ಬಿಜೆಪಿಯ ಕುತಂತ್ರದ ಬಗ್ಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮುಖಂಡರಾದ ಸೋಮಶೇಖರ್, ವಿಶ್ವ, ಮೈಸೂರು ಬಸವಣ್ಣ, ಡೈರಿ ವೆಂಕಟೇಶ್, ಗುಣಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸುವ ಕೋರಿಕೆಯನ್ನು ತಳ್ಳಿ ಹಾಕಿದ ಹೈಕೋರ್ಟ್ ತೀರ್ಪು ಸ್ವಾಗತಿಸಿ ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಿಸಿದರು.

ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ




ಶ್ರೀ ಕೆ.ವಿ. ನಾಗರಾಜರವರು
ನಿವೃತ್ತ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್

ಇವರು ದಿ. 29.1.2025ರಂದು ದೈವಾಧೀನರಾಗಿದ್ದು ತತ್ಸಂಬಂಧ ಭಾನುವಾರ ದಿ. 9.2.2025ರಂದು ಬೆಳಿಗ್ಗೆ 11 ಗಂಟೆಗೆ **ಪೂಜ್ಯ ಷ|| ಬ್ರ|| ಶ್ರೀ ಶ್ರೀ ಇಮ್ಮಡಿ ಮಡಿವಾಳ ಸ್ವಾಮಿಗಳು**, ಮಠಾಧ್ಯಕ್ಷರು ಇವರ ದಿವ್ಯ ಪಾದಪೂಜೆ ಹಾಗೂ ಮಧ್ಯಾಹ್ನ 12ಕ್ಕೆ ಕೈಲಾಸ ಶಿವಗಣಾರಾಧನೆಯನ್ನು ಸ್ವಗೃಹ ನಂ.1490/706, 2ನೇ ಹಂತ, 4ನೇ ಮೇನ್, ಪ್ರಶಾಂತನಗರ, ಬೋಗಾದಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ತಲುಪದವರು, ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಎಂ. ಪಿ. ನೀಲಾಂಬಿಕ ದೇವಿ, ಮಗ, ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕೋಳೂರು ಗ್ರಾಮಸ್ಥರು ಮತ್ತು ಕುಟುಂಬವರ್ಗ

4ನೇ ವರ್ಷದ ಸವಿನೆನಪು



ಯ|| ಶ್ರೀ ಮಾನ್ ಹೊನ್ನೇಗೌಡ್ರು
ಬೋಗಾದಿ ಗ್ರಾಮ, ಮೈಸೂರು.

SITE FOR SALE

- Site no 3, 1150sq feet, triangle shape 67.25x45x50, main road on 45 feet side and 67 feet site, SBM layout near Aravind Nagar temple.
- Site no 4, 1750 sq feet, triangle shape 86x70x50, main road on 50 feet side and 86 feet site, SBM layout near Aravind Nagar temple.
- 50 x 80 site for sale (can be used for commercial purpose) with Built House of 24 sqft in No 982, Panchamantra Road, Kuvempu Nagar, Mysuru.
- 11979 sqft of land on top of Chamundi hill, Next to bus stand.

Contact - Mehul Patel
93416 22476 / 96069 52151

STAR OF MYSORE

SPECIAL ISSUE

Star of Mysore is completing **47** years of service on **16th February 2025** and entering **48th** year of publication. As in the past, this year too we will be publishing a Special Issue.

We request our advertisers and patrons to release their advertisements before **10th February** to facilitate printing as per schedule.

HEAD OFFICE

0821-2496520 (5-LINES)
Ad Dept. - 0821-2496522 / 23
Email : ad@starofmysore.com
Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879
K.R. Circle Office: 0821-2431774
D.D. Urs Road Office: 0821-2428695
Kodagu Office: 97314-69871
Mandya Office: 87629-60325
Chamarajanagar: 92422-65657
Nanjangud: 98805-09200 / 99016-02226
T.N. Pura: 94483-05750
Bengaluru: 98440-46761

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಎಂ. ಎಸ್. ಜಯಮ್ಮರವರು (73 ವರ್ಷ)
ದಿವಂಗತ ಹೆಚ್.ಎಮ್. ಗೌಡೇಗೌಡ ರವರ ಧರ್ಮಪತ್ನಿ, ಸರಸ್ವತಿಪುರಂ, ಮೈಸೂರು

ದಿನಾಂಕ 7–2–25 ರಂದು ತಮ್ಮ ಸ್ವಗೃಹದಲ್ಲಿ ನಿಧನವಾಗಿದ್ದು ಇವರ ಅಂತ್ಯಕ್ರಿಯೆಯನ್ನು ಶನಿವಾರ, ದಿನಾಂಕ 8–2–25 ರಂದು ಮಧ್ಯಾಹ್ನ 12 ಗಂಟೆಗೆ ಕೆ ಜಿ ಕೊಪ್ಪಲಿನ ರುದ್ರ ಭೂಮಿಯಲ್ಲಿ (ಕಾವೇರಿ ಶಾಲೆ ಪಕ್ಕ) ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ ಹಾಗೂ ಅಪಾರ ಬಂಧುಬಳಗ

SKANDA PROPERTIES

Contact : 93798 88558



Our Commitment
- Ontime Completion
- No Upsurge in Price
- Free Maintenance
- Quality Assurance

Construction Starts from Rs. 2000/- Per sq.ft.,

WANTED

FRONT OFFICE EXECUTIVE
(Female Only)
2 years of work experience in International Travel office.
Salary : Rs. 14000/- + Incentive
DREAM WORLD TRAVELS
Vijayanagar 1st Stage, Mysore
Contact : 99452 42427

Exchange your old sofa set to brand new sofa set.
Also repair done.
Mob: 9591012944

ಮೊದಲನೇ ವರ್ಷದ ಸವಿನೆನಪು



ಸ್ವಾಮಿ ಎಮ್

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಮತ್ತು ಕುಟುಂಬ ವರ್ಗದವರು

FULLY DEVELOPED MUDA & DTCP APPROVED SITES AVAILABLE @ 999 NOW 899

90% BANK LOAN AVAILABLE
9620997711 / 9620907711

LUCKY SCHOOL

LUCKY PRY & HIGH SCHOOL, N.R. MOHALLA, MYSORE
Shivaji Main Road, N.R.Mohalla Mysore
ADMISSION OPEN
PRE KG-LKG-UKG
Grade 1 TO 10
0821-2497335 / 0821-2493157
- Robotics
- Coding(python)
- Hi-tech Digital Classrooms With Innovative Teaching
- Karate And Martial Arts Classes
- Shlokas And Deeniyat Course

Tuitions Available in School Premises From Grade 1 to 10
WANTED •PT Teacher •D.Ed Teacher

G9 projects

Designing your Dreams
BUDGET SALE
SITES FOR SALE

UTTANAHALLI, MYSURU
JUST 1 K M FROM RING-ROAD
AVAILABLE PLOTS 20X30 & 30X40

R T NAGAR, MYSURU
NEAR UNIVERSITY LAYOUT
AVAILABLE PLOTS
30X40 & 30X50 & 40X60

8055-00-4400

ಪಿ. ಎಂ. ಶ್ರೀ ಕೇಂದ್ರೀಯ ವಿದ್ಯಾಲಯ ಮೈಸೂರು

ಜಿ.ಐ.ಟಿ.ಬಿ ಪ್ರೆಸ್ ಕ್ಯಾಂಪಸ್, ಸಿದ್ಧಾರ್ಥನಗರ, ಮೈಸೂರು–570011
पी.एम.श्री केन्द्रीय विद्यालय मैसूरु,
जी.आई.टी.बी प्रेस परिसर, सिद्धार्थनगर, मैसूरु – 570011
(शिक्षा मंत्रालय, भारत सरकार केअधीन एक स्वायत्त निकाय)
PM SHRI KENDRIYA VIDYALAYA, MYSURU,
GITB, PRESS CAMPUS, SIDDHARTHNAGAR, MYSURU – 570011
(An Autonomous Body Under MOE, Government of India)
दूरभाष/Tel.No 0821-2473515 वेबसाइट/ Website: https://mysore.kvs.ac.in
ईमेल/email: kvmysore@gmail.com

ನೇರ – ಸಂದರ್ಶನ

2025–2026 ರ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಫಲಕವನ್ನು ಸಿದ್ಧಪಡಿಸಲು ವಿವಿಧ ಹುದ್ದೆಗಳಿಗೆ ದಿ: 12–02–2025 ಮತ್ತು 13–02–2025 ರಂದು ಪಿಎಂ ಶ್ರೀ ಕೆವಿ ಮೈಸೂರಿನಲ್ಲಿ ನೇರ ಸಂದರ್ಶನವಿರುತ್ತದೆ.

ಸಂದರ್ಶನದ ಸಮಯ : ಬೆಳಿಗ್ಗೆ 10:30 ಕ್ಕೆ

ದಿನಾಂಕ	ಪೋಸ್ಟ್ & ವಿಷಯ	ನೋಂದಣಿ
12.02.2025	ಹುದ್ದೆ: ಪಿಜಿಟಿ– ಭೌತಶಾಸ್ತ್ರ ವಾಣಿಜ್ಯ ಟಿಜಿಟಿ: ಇಂಗ್ಲಿಷ್, ಹಿಂದಿ, ಸಂಸ್ಕೃತ, ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಹುದ್ದೆ: ಪ್ರಾಥಮಿಕ ಶಿಕ್ಷಕರು ಇತರ ಹುದ್ದೆಗಳು: ಕಂಪ್ಯೂಟರ್ ಬೋಧಕ, ಟಿಜಿಟಿ–ಕೃತಕ ಬುದ್ಧಿಮತ್ತೆ.	ಉಲ್ಲೇಖಿಸಲಾದ ಕೋರ್ಸ್‌ಗಳಿಗೆ ದಿ: 12.02.2025 ರಂದು ಬೆಳಿಗ್ಗೆ 8:30 ರಿಂದ 10:30ರವರೆಗೆ
13.02.2025	ಇತರ ಹುದ್ದೆಗಳು: ಕನ್ನಡ ಶಿಕ್ಷಕರು, ವೈದ್ಯರು, ಸಿಬ್ಬಂದಿ ನರ್ಸ್, ಕೌನ್ಸಿಲರ್, ವಿಶೇಷ ಶಿಕ್ಷಕರು, ಕ್ರೀಡಾ ತರಬೇತುದಾರರು, ಯೋಗ, ನೃತ್ಯ/ಕಲೆ ಮತ್ತು ಕರಕುಶಲ ಶಿಕ್ಷಕರು	ಉಲ್ಲೇಖಿಸಲಾದ ಕೋರ್ಸ್‌ಗೆ ದಿ:13.02.2025 ರಂದು ಬೆಳಿಗ್ಗೆ 8:30 ರಿಂದ 10:30ರವರೆಗೆ
ಸೂಚನೆ:	1. ಅಭ್ಯರ್ಥಿಗಳು ನೋಂದಣಿಗಾಗಿ ಸರಿಯಾಗಿ ಭರ್ತಿ ಮಾಡಿದ ಅರ್ಜಿ ನಮೂನೆ, ಮೂಲ ಅರ್ಹತೆಯ ಪ್ರಮಾಣಪತ್ರಗಳೊಂದಿಗೆ ಒಂದು ಸೆಟ್ ಸ್ವಯಂ ದೃಢೀಕರಿಸಿದ ಪ್ರಮಾಣ ಪತ್ರದ ಪ್ರತಿಗಳು ಮತ್ತು 2 ಪಾಸ್‌ಪೋರ್ಟ್ ಗಾತ್ರದ ಛಾಯಾಚಿತ್ರಗಳೊಂದಿಗೆ ಹಾಜರಾಗತಕ್ಕದ್ದು	
	2. ಸಂದರ್ಶನಕ್ಕೆ ಯಾವುದೇ ಟಿಎ/ಡಿಎ ನೀಡಲಾಗುವುದಿಲ್ಲ.	
	3. ಅರ್ಜಿ ನಮೂನೆಯನ್ನು ಅರ್ಹತಾ ಮಾನದಂಡಗಳು, ಕನಿಷ್ಠ ವಿದ್ಯಾರ್ಹತೆ, ಸಂಬಳ ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಲು. ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ. https://mysore.kvs.ac.in/	

ಸಹಿ/– ಪ್ರಾಂಶುಪಾಲರು

BORED OF JOLADA ROTI

NOW INTRODUCING
JOLADA PADDU/DOSA BATTER
ONLY ON PRE-ORDERS
Fresh Grind



OUR OTHER PRODUCTS
- Idli/Dosa Batter
- Othu Shavige
- Kayi Halu(Coconut Milk)
- Bajra Dosa Batter
- Ragi Idli/Dosa Batter
- Ragi Othu Shavige
- Appam Batter
- Bale Huvu Vada Batter

CALL TO PRE - ORDER
89044 17979
Scan for Address

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು 570004
ಮೊ: 9972039899. ದೂರವಾಣಿ: 0821–2442864


ಪ್ರಕಟಣೆ

ಬ್ಯಾಂಕಿನ ಮಾನ್ಯ ಸದಸ್ಯರುಗಳು ಹಾಗೂ ಸದಸ್ಯರೇತರುಗಳಿಗೆ ಈ ಕೆಳಕಂಡ ಸಾಲದ ಸೌಲಭ್ಯವನ್ನು ತಕ್ಷಣವೇ ಮಂಜೂರು ಮಾಡಲಾಗುತ್ತದೆ.

1) ಸ್ಥಿರಾಧಾರ ಗರಿಷ್ಠ ಸಾಲ ರೂ. 53 ಲಕ್ಷಗಳು
2) ಚಿನ್ನದಾಭರಣ ಸಾಲ ರೂ. 10 ಲಕ್ಷಗಳವರೆಗೆ ಶೇ. 8.5ರ ಬಡ್ಡಿ ದರದಲ್ಲಿ ಅಂದರೆ 0.85 ಪೈಸೆ ರೀತ್ಯಾ ಸಾಲ ನೀಡಲಾಗುವುದು
3) ದ್ವಿಚಕ್ರ, ತ್ರಿಚಕ್ರ ಹಾಗೂ ಮೋಟಾರ್ ಕಾರ್ ವಾಹನ ಸಾಲ ಗರಿಷ್ಠ ರೂ. 10 ಲಕ್ಷಗಳು
4) ಯು.ಪಿ.ಎಸ್, ಸೋಲಾರ್ ಮತ್ತು ವಾಟರ್ ಪ್ಯೂರಿಫೈಯರ್ ಖರೀದಿಸಲು ಗರಿಷ್ಠ ರೂ.1 ಲಕ್ಷ ಮಾತ್ರ
5) ಆಕರ್ಷಕ ಬಡ್ಡಿದರಕ್ಕೆ ಠೇವಣಾತಿಗಳನ್ನು ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಬ್ಯಾಂಕಿನ ವ್ಯವಸ್ಥಾಪಕರನ್ನು ಸಂಪರ್ಕಿಸುವುದು.

ಸಹಿ/– ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ವ್ಯವಸ್ಥಾಪಕರು (ಪ್ರ)



WANTED


For a reputed **Inorganic Chemical Manufacturing Firm** in Mysore
Job (Description):
FIELD SALES/COLLECTION MANAGER
Qualification: Any Degree with Computer knowledge
Experience: Minimum 2 years in the same field and Willing to Travel
Languages: Tamil, Telugu, English, Kannada
Salary is not a constrain to right candidate
Send Resume to:
resumes182@gmail.com
Call on: 82775 29922

ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ.,)

ನೇತಾಜಿ ನಗರ, ಮೈಸೂರು.

2025–30ನೇ ಸಾಲಿನ ಆಡಳಿತ ಮಂಡಳಿ ಚುನಾವಣೆ

ನಮಗೆ ಸೋಲು ಹೊಸದಲ್ಲ, ಗೆಲವು ನಿಶ್ಚಿತವಲ್ಲ, ಯಾವುದೇ ಸಂಘ ಸಂಸ್ಥೆಗಳು ನಿಂತ ನೀರಾದರೆ ಕುಡಿಯಲು ಯೋಗ್ಯವಲ್ಲ, ಬದಲಾವಣೆ ಜಗದ ನಿಯಮ ಪ್ರಶ್ನೆ ಮಾಡುವುದು ಪ್ರಜಾಪ್ರಭುತ್ವ, ಪ್ರಶ್ನೆ ಮಾಡುತ್ತಾ ಬದಲಾಣೆಗಾಗಿ ನಾವು ಮೂವರು ಕರ್ನಾಟಕ ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ (ನಿ.,)ದ ಚುನಾವಣೆಗೆ ಮೂವರು ಆದ ನಾವುಗಳು ಸ್ಪರ್ಧಿಸಿದ್ದು, ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಿನಾಂಕ. 09–02–2025 ರಂದು ಭಾನುವಾರ ನಡೆಯಲಿರುವ ಸಂಘದ ನಿರ್ದೇಶಕರುಗಳ ಚುನಾವಣೆಯಲ್ಲಿ ಮಾನ್ಯ ಮತದಾರ ಸದಸ್ಯರುಗಳಾದ ತಾವು ನಮ್ಮ ಗುರುತಾದ ನಮ್ಮ ಹೆಸರಿನ ಮುಂದೆ ಚಿಹ್ನೆಗಳಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ, ನಮ್ಮನ್ನು ಜಯಶೀಲರನ್ನಾಗಿ ಮಾಡಿ ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಅವಕಾಶ ಕಲ್ಪಿಸಿಕೊಡಬೇಕಾಗಿ ತಮ್ಮಲ್ಲಿ ಕೋರುತ್ತೇವೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು		ಚಿಹ್ನೆ	ಮುದ್ರೆ
03		**ಜಯಂತಿ ಎಂ** ಮಹಿಳಾ ಮೀಸಲು ಮೊ.ಸಂ. 9880019471		卐
14		**ಎ.ಎಂ. ಲೋಕೇಶ** ಬಿ.ಎ., ಎಲ್.ಎಲ್.ಬಿ. ಪರಿಶಿಷ್ಠ ಜಾತಿ ಮೀಸಲು ಮೊ.ಸಂ. 9980346148		卐
16		**ಶಂಭುಲಿಂಗಸ್ವಾಮಿ ಎಲ್** ಸಾಮಾನ್ಯ ಮೊ.ಸಂ. 9902435582		卐

ದಿನಾಂಕ : 09–02–2025ನೇ ಭಾನುವಾರ
ಮತದಾನದ ಸಮಯ : ಬೆಳಿಗ್ಗೆ 09.00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ
ಸ್ಥಳ : ಸಂಘದ ಕಛೇರಿ ಆವರಣ : ನೇತಾಜಿ ನಗರ, ಮೈಸೂರು